03 May 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮನುಷ್ಯನ ಸ್ವಭಾವ ಎಷ್ಟು ವಿಚಿತ್ರವೆಂದರೆ, ಸಹಾಯ ಮಾಡಿದರೆ ತಕ್ಷಣ ಮರೆತು ಬಿಡುತ್ತಾರೆ, ಮಾಡದಿದ್ದರೆ ಜೀವನಪೂರ್ತಿ ನೆನಪಲ್ಲಿಟ್ಟು ದ್ವೇಷ ಸಾಧಿಸುತ್ತಾರೆ!

-ಸ್ನೇಹಾ ಆನಂದ್

info.varthaman@gmail.com



ಭರಣಿ ಮಳೆ ತಂದ ಹರ್ಷ: ಕೆಲವರಿಗೆ ಸಂಕಷ್ಟ — ಪುಟ ಸಂ. 2



ರಾಮನಗರ: 8ರಂದು ಬಸವಣ್ಣ ಪುತ್ಥಳಿ ಅನಾವರಣ — ಪುಟ ಸಂ. 3



ಬಮೂಲ್‌ವತಿಯಿಂದ 1.19 ಕೋಟಿ ರೂ ಪ್ರೋತ್ಸಾಹ ಧನ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 161 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಆರ್ಥಿಕ ಸ್ಥಿತಿ ಬಲವಾಗಿದ್ದರೆ ಇಂಧನ ಬೆಲೆ ಹೆಚ್ಚಳ ಏಕೆ?

### ಸಿಲಿಂಡರ್ ಬೆಲೆ ಹೆಚ್ಚಳ ಅಗತ್ಯವಿರಲಿಲ್ಲ: ಪರಮೇಶ್ವರ್

ಬೆಂಗಳೂರು: ದೇಶದ ಆರ್ಥಿಕ ಸ್ಥಿತಿ ಬಲವಾಗಿದೆ ಎಂದು ಪ್ರಧಾನಿ, ಹಣಕಾಸು ಸಚಿವರು ಹೇಳುತ್ತಾರೆ. ಆಗಿದ್ದಾಗ ಈಗ




ಇಂಧನ ಬೆಲೆ ಹೆಚ್ಚಿಸುವ ಅಗತ್ಯವೇನು? ಜನರ ಮೇಲೆ ಹೆಚ್ಚುವರಿ ಹೊರೆ ಹಾಕುವುದು ಸರಿಯಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಟೀಕಿಸಿದರು.

ಬೆಂಗಳೂರಿನಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಎಲ್ಲಾ ವಸ್ತುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನ ತತ್ತರಿಸಿ ಹೋಗಿದ್ದಾರೆ. ಇಂತಹ ಸಂದರ್ಭದಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಹೆಚ್ಚು ಮಾಡುವ ಅವಶ್ಯಕತೆ ಇರಲಿಲ್ಲ ಎಂದು ಹೇಳಿದರು.

ಪುಟ 2ಕ್ಕೆ

## ಇಬ್ಬರು ಮಕ್ಕಳ ಕೊಲೆ ಮಾಡಿ ತಂದೆಯೂ ನೇಣಿಗೆ ಶರಣು

ಕುಣಿಗಲ್: ಹೆಂಡತಿ ಬಿಟ್ಟು ಹೋಗಿದ್ದಕ್ಕೆ ಅರ್ಚಕನೊಬ್ಬ ತನ್ನ ಇಬ್ಬರು ಮಕ್ಕಳನ್ನು ಕತ್ತು ಹಿಸುಕಿ ಕೊಂದು ಬಳಿಕ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಕುಣಿಗಲ್ ತಾಲೂಕಿನ ಆಲ್ಕೆರೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.




ಆತ್ಮಹತ್ಯೆಗೆ ಶರಣಾದವರನ್ನು ಗ್ರಾಮದ ಮಲ್ಲೆಶ್ವರ ಸ್ವಾಮಿ ದೇವಸ್ಥಾನದ ಅರ್ಚಕ ಶಿವಣ್ಣ (40) ಎಂದು ಗುರುತಿಸಲಾಗಿದೆ. ಅವರು ಮಕ್ಕಳಾದ ಜೀವನ್ (10) ಹಾಗೂ ಪ್ರಾಣೇಶ್ (5) ಅವರನ್ನು ಕತ್ತುಹಿಸುಕಿ ಕೊಂದು ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಶಿವಣ್ಣ ಅವರ ಪತ್ನಿ ಕಾವ್ಯಾ (35) ಬೇರೊಬ್ಬರ ಜತೆಗೆ ಅಕ್ರಮ ಸಂಬಂಧ ಹೊಂದಿದ್ದರು ಎಂಬ ಕಾರಣಕ್ಕೆ ಇಬ್ಬರ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಕಳೆದ ಕೆಲವು ದಿನಗಳಿಂದ ಕಾವ್ಯಾ ಕೊತ್ತಗೆರೆ ಹೋಬಳಿಯ ಕುರುಡಿಹಳ್ಳಿಯ ತವರು ಮನೆಗೆ ಹೋಗಿದ್ದರು.

ಪುಟ 2ಕ್ಕೆ

## ಚುನಾವಣೋತ್ತರ ಸಮೀಕ್ಷೆಯ ನಂಬಿಕೆ ಇಲ್ಲ

ಬೆಂಗಳೂರು: ಚುನಾವಣೋತ್ತರ ಸಮೀಕ್ಷೆಗಳು ನಮ್ಮ ಪರವಾಗಿರಲಿ ಅಥವಾ ಇಲ್ಲದಿರಲಿ ಅದರ ಮೇಲೆ ನನಗೆ ನಂಬಿಕೆ ಇಲ್ಲ. ನನ್ನ ತಂತ್ರಗಾರಿಕೆಯೇ ಬೇರೆ. ಈ ಬಾರಿ ಎಲ್ಲಾ ರಾಜ್ಯಗಳಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ಗುವಾಹಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಜೊತೆ ಸಭೆ ನಡೆಸಿದ ಬಳಿಕ ಡಿ.ಕೆ.ಶಿವಕುಮಾರ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಚುನಾವಣೋತ್ತರ ಸಮೀಕ್ಷೆ ವರದಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಸಮೀಕ್ಷೆಗಳಲ್ಲಿ ಬಳಸುವ ಮಾದರಿ ಪ್ರಮಾಣ ಬಹಳ ಸಣ್ಣದಾಗಿರುತ್ತವೆ. ಹೀಗಾಗಿ ನಮ್ಮ ಲೆಕ್ಕಾಚಾರ ಬೇರೆ ಇದೆ. ನಾನು ಯಾವುದೇ ರಾಜ್ಯಗಳ ಚುನಾವಣೋತ್ತರ ಸಮೀಕ್ಷೆಯನ್ನು ನಂಬುವುದಿಲ್ಲ. ನಾನು ಇಲ್ಲಿಗೆ ಬಂದಿರುವುದೇ ನಮ್ಮ ಶಾಸಕರನ್ನು ರಕ್ಷಿಸಿ, ಮಾರ್ಗದರ್ಶನ ನೀಡಿ, ಶಕ್ತಿ ತುಂಬಲು ಎಂದು ತಿಳಿಸಿದರು.

ಅಸ್ಸಾಂ ಚುನಾವಣೆ ಬಗ್ಗೆ ಮಾತನಾಡಿ, ನಮ್ಮ ಕಾರ್ಯಕರ್ತರು ಬಹಳ ವಿಭಿನ್ನ. ಹೀಗಾಗಿ ಅಸ್ಸಾಂನಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ನಮ್ಮ ನಾಯಕರ ಮೇಲೆ ನಮಗೆ ನಂಬಿಕೆ ಇದೆ. ಅವರು ಸಾಕಷ್ಟು ಪರಿಶ್ರಮ ಹಾಕಿದ್ದಾರೆ. ಮತದಾರರ ಮೇಲೆ ವಿಶ್ವಾಸವಿದೆ. ಅವರಿಗೆ

ಪುಟ 2ಕ್ಕೆ

## ಭಾರತಕ್ಕೆ ಮುಂಗಾರು ಪ್ರವೇಶ: ಮೇನಲ್ಲಿ ಹೆಚ್ಚಿನ ಮಳೆ ಸಾಧ್ಯತೆ

ನವದೆಹಲಿ: ಭಾರತಕ್ಕೆ ಮೇ14ರಿಂದ 16ರ ನಡುವೆ ಮುಂಗಾರು ಪ್ರವೇಶವಾಗಲಿದೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ದೇಶದ್ಯಾಂತ ಅಸ್ತಿತ್ವದಲ್ಲಿರುವ ಉರಿಬಿಸಿಲು ಪರಿಸ್ಥಿತಿಯಿಂದ ಶೀಘ್ರದಲ್ಲೇ ಪರಿಹಾರ ಸಿಗುವ ಸಾಧ್ಯತೆಯಿದೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಮೇ 14ರಿಂದ 16ರ ಸುಮಾರಿಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ನೈಋತ್ಯ ಮಾನ್ಸೂನ್ ಆಗಮನವಾಗಲಿದೆ. ಹಿಮಾಲಯದ ತಪ್ಪಲಿನ ಕೆಲವು ಭಾಗಗಳು, ಪೂರ್ವ ಕರಾವಳಿ ರಾಜ್ಯಗಳು,

ಪುಟ 2ಕ್ಕೆ

## ಕೆಪಿಸಿಸಿ ಅಧ್ಯಕ್ಷ ಸ್ಥಾನದ ಅವಕಾಶ 2 ಬಾರಿ ಬಂದಿತ್ತು

### ಎಂ.ಬಿ.ಪಾಟೀಲ್ ಹೇಳಿಕೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಸ್ಥಾನದ ಅವಕಾಶ ನನಗೆ ಎರಡು ಬಾರಿ ಬಂದಿತ್ತು ಎಂದು ಸಚಿವ ಎಂ.ಬಿ ಪಾಟೀಲ್ ತಿಳಿಸಿದರು.



ಮಾಧ್ಯಮದವರೊಂದಿಗೆ ಶನಿವಾರ ಮಾತನಾಡಿದ ಅವರು, ನನಗೆ ಎರಡು ಬಾರಿ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಅವಕಾಶ ಸಿಕ್ಕಿತ್ತು. ಆಗ ನಾನು ನೀರಾವರಿ ಮಂತ್ರಿ ಆಗಿದ್ದೆ. ಕಾಂಗ್ರೆಸ್ ಪಕ್ಷ ನನಗೆ ಎಲ್ಲ ಅವಕಾಶ ಕೊಟ್ಟಿದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನ ಬೇಕು ಅಂದರೆ ಮಾಧ್ಯಮದ ಮುಂದೆ ಹೇಳುವುದಕ್ಕಿಂತ ಅದನ್ನು ಎಲ್ಲಿ ಹೇಳಬೇಕೋ ಅಲ್ಲಿ ಹೋಗಿ ಹೇಳುವೆ. ಅದನ್ನು ನಮ್ಮ ಹೈಕಮಾಂಡ್ ಮುಂದೆ ಹೇಳಬೇಕು. ಅಲ್ಲಿ ಹೇಳುತ್ತೇನೆ. ಕಾಂಗ್ರೆಸ್ ಪಕ್ಷದ ಹಿರಿಯರು ಚರ್ಚೆ ಮಾಡುವಾಗ ನಮ್ಮ ಭಾವನೆ ವ್ಯಕ್ತಪಡಿಸುವೆ ಎಂದು ಹೇಳಿದರು. ನನ್ನ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಶಾಸಕರು ಗೆದ್ದಿದ್ದಾರೆ ಎಂಬ ಡಿಕೆಶಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಪಕ್ಷಕ್ಕೆ ಕೆಪಿ ಸಿಸಿ ಅಧ್ಯಕ್ಷರು ಸುಪ್ರೀಂ ಹಾಗೂ ಸರ್ಕಾರಕ್ಕೆ ಸಿಎಂ ಸುಪ್ರೀಂ. ಈ ಕುರಿತು ನಾನು ಈಗಾ

ಪುಟ 2ಕ್ಕೆ

# ಮೇ20ರಿಂದ ಸಾರಿಗೆ ಮುಷ್ಕರ

## ಸರ್ಕಾರದ ಜೊತೆಗಿನ ಮಾತುಕತೆ ವಿಫಲ / ಹೋರಾಟದ ಹಾದಿ ಹಿಡಿದ ನೌಕರರು

ಬೆಂಗಳೂರು: ಸಾರಿಗೆ ನೌಕರರು ಮತ್ತು ಸರ್ಕಾರದ ನಡುವಿನ ಮಾತುಕತೆ ವಿಫಲವಾದ ಹಿನ್ನೆಲೆಯಲ್ಲಿ ಸಾರಿಗೆ ನೌಕರರು ಮತ್ತೆ ಹೋರಾಟದ ಹಾದಿ ಹಿಡಿದಿದ್ದಾರೆ. ಮೇ 20ರಿಂದ ರಾಜ್ಯ ಸಾರಿಗೆ ಸ್ತಬ್ಧವಾಗಲಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿ ನಾಲ್ಕು ನಿಗಮಗಳ ಬಸ್‌ಗಳು ರಸ್ತೆಗಿಳಿಸದಿರಲು ನಿರ್ಧರಿಸಲಾಗಿದೆ.

ಸಾರಿಗೆ ನೌಕರರು ಹಾಗೂ ಸರ್ಕಾರದ ನಡುವಿನ ಜಟಾಪಟಿ ಮತ್ತೆ ಜೋರಾಗಿದೆ. ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ನಾಲ್ಕು ನಿಗಮಗಳ ಸಾರಿಗೆ ನೌಕರರು ಪಟ್ಟು ಹಿಡಿದಿದ್ದಾರೆ. ಈ ಬಾರಿ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಸಾರಿಗೆ ನೌಕರರು ಮುಂದಾಗಿದ್ದಾರೆ.

ನಗರದಲ್ಲಿ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಂದಿನ ಹೋರಾಟದ ಬಗ್ಗೆ ಮಾಹಿತಿ ನೀಡಿದರು. ತಮ್ಮ ಬೇಡಿಕೆಗಳು ಈಡೇರುವ ವರೆಗೂ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಸಾರಿಗೆ ನೌಕರರ ಸಂಘಟನೆ ದೃಢ ನಿರ್ಧಾರ ಮಾಡಿದೆ. ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಯಲಿದೆ ಎಂದು ತಿಳಿಸಿದರು.

ತಮ್ಮ ಬೇಡಿಕೆ ಈಡೇರದಿದ್ದರೆ ಮೇ 20ರ ಬೆಳಗ್ಗೆ 6 ಗಂಟೆಯಿಂದ ಸಾರಿಗೆ ಬಸ್‌ಗಳನ್ನ ಬಂದ್ ಮಾಡಲಾಗುತ್ತದೆ ಎಂದು ಸಾರಿಗೆ ನೌಕರರ ಸಂಘಟನೆ ಎಚ್ಚರಿಕೆ ನೀಡಿದೆ. ಸಾರ್ವಜನಿಕರಿಗೆ ತೊಂದರೆ ಆದರೆ ಅದಕ್ಕೆ ಸರ್ಕಾರವೇ ಹೊಣೆ. ಸಾರಿಗೆ ನೌಕರರು ಜವಾಬ್ದಾರಿ ಅಲ್ಲ ಎನ್ನುವ ಸಂದೇಶ ನೀಡಿದೆ. ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ನಾಲ್ಕೂ ಸಾರಿಗೆ ನಿಗಮಗಳು ಭಾಗಿಯಾಗಲಿವೆ. ಸುಮಾರು 1.25 ಲಕ್ಷಕ್ಕೂ ಹೆಚ್ಚು ನೌಕರರು ಈ ಹೋರಾಟದಲ್ಲಿ ಭಾಗಿಯಾಗುವ ನಿರೀಕ್ಷೆಯಿದೆ. ಇನ್ನು ಮುಂದೆ ಸರ್ಕಾರದ ಜೊತೆ ಮಾತುಕತೆ ಇಲ್ಲ. ಕೇವಲ ಇತ್ಯರ್ಥಕ್ಕಷ್ಟೇ ಅವಕಾಶ. ಈ ಬಾರಿ ಅವರು ಹೇಳೋದನ್ನ ನಾವು ಕೇಳಲ್ಲ. ಸ್ಟೇರಿಂಗ್ ಹಿಡಿಯೋದು ನಿಲ್ಲಿಸಿ ಚಾಲಕರು ಮತ್ತು ಟಿಕೆಟ್ ಹರಿಯೋದನ್ನ ನಿಲ್ಲಿಸಿ ಕಂಡಕ್ಟರ್ ಮನೆಯಲ್ಲಿ ಇರುತ್ತಾರೆ ಎಂದು ಜಂಟಿ ಕ್ರಿಯಾ ಸಮಿತಿ ಮುಖಂಡರು ಎಚ್ಚರಿಸಿದರು.




### ನೌಕರರ ಬೇಡಿಕೆ ಏನು?

- **38 ತಿಂಗಳ ಹಿಂಬಾಕಿ ವೇತನ ಪಾವತಿಸಬೇಕು.**
- **2024ರ ಜನವರಿ 1ರಿಂದ ಮೂಲವೇತನದ ಶೇ.25ರಷ್ಟು ಏರಿಸಬೇಕು.**
- **ಮೂಲ ವೇತನದಲ್ಲಿ ಶೇ.31ರಷ್ಟು ತುಟ್ಟಿ ಭತ್ಯೆ ವಿಲೀನಗೊಳಿಸಬೇಕು.**
- **26 ತಿಂಗಳ ಬಾಕಿ 1,272 ಕೋಟಿ ಒಂದೇ ಕಂತಿನಲ್ಲಿ ಬಿಡುಗಡೆ ಆಗಬೇಕು.**
- **ಕೋವಿಡ್ ಸಮಯದಲ್ಲಿನ ಅರಿಯರ್ಸ್ ನೀಡಬೇಕು.**

## ರಾಜೇಗೌಡಗೆ ಮತ್ತೆ ಗೆಲುವು

### ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ: 2 ಮತ ಹೆಚ್ಚಳ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ ಅವರೇ ಗೆಲುವು ಸಾಧಿಸಿದ್ದಾರೆ. ಮರು



ಮತ ಎಣಿಕೆಯಲ್ಲಿ 2 ಮತ ಹೆಚ್ಚಾಗಿ ಬಂದಿದೆ. ಈ ಮೂಲಕ ರಾಜೇಗೌಡ ಅವರು ಗೆಲುವಿನ ಅಂತರ ಹೆಚ್ಚಿಸಿಕೊಂಡಿದ್ದಾರೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಕಾರ್ಯ ಶನಿವಾರ ಐಡಿಎಸ್‌ಜಿ ಕಾಲೇಜಿನಲ್ಲಿ ನಡೆಯಿತು. ಈ ಹಿಂದೆ ಸಾಮಾನ್ಯ ಮತ ಎಣಿಕೆ ಬಳಿಕ 201 ಮತಗಳಿಂದ ಗೆಲುವು ಸಾಧಿಸಿದ್ದ ರಾಜೇಗೌಡ ಅವರು, ಮರು ಮತ ಎಣಿಕೆ ಬಳಿಕ 203 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಮರು ಎಣಿಕೆ ಪ್ರಕ್ರಿಯೆ ವೇಳೆ ಕೆಲವು ಟ್ರಂಕ್‌ಗಳು ಜಖಂಗೊಂಡಿರುವುದು ಕಂಡುಬಂದವು. ಸೀಲ್ ಇಲ್ಲದ ಟ್ರಂಕ್ ಕೂಡ ಪತ್ತೆಯಾದ ಹಿನ್ನೆಲೆ ಭಾರೀ ಹೈಡ್ರಾಮಾವೇ ನಡೆಯಿತು. ಕೊನೆಗೆ ಅಂಚೆಮತಗಳ ಟ್ರಂಕ್ ಸೇಫಾಗಿತ್ತು. ಯಾವುದೇ ಗೊಂದಲ ಇಲ್ಲವೆಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದ ಬಳಿಕ ಮತ ಎಣಿಕೆಗೆ ಅನುವು ಮಾಡಿಕೊಟ್ಟರು. ಬಳಿಕ ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಬಿಗಿ ಪೊಲೀಸ್ ಭದ್ರತೆಯಲ್ಲಿ ಮರು ಎಣಿಕೆ ಪ್ರಕ್ರಿಯೆ ನಡೆಯಿತು.

2023ರಲ್ಲಿ 12 ಜನ ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದರು. ಕಾಂಗ್ರೆಸ್ಸಿನ ಟಿ.ಡಿ.ರಾಜೇಗೌಡ 201 ಮತಗಳ ಅಂತರದಿಂದ ಗೆಲುವು ಕಂಡಿದ್ದರು. 1822 ಅಂಚೆ ಮತಗಳಲ್ಲಿ 279 ಮತಗಳು ತಿರಸ್ಕಾರಗೊಂಡಿದ್ದವು.

## ಸಮರ್ಪಕ ನೀರು ನಿರ್ವಹಣೆ

### ಸಚಿವ ಚಲುವರಾಯಸ್ವಾಮಿ ಸೂಚನೆ

ಮಂಡ್ಯ: ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೆ.ಆರ್.ಎಸ್ ಅಣೆಕಟ್ಟೆ



ಯಲ್ಲಿ ಲಭ್ಯವಿರುವ ನೀರು ಹಾಗೂ ಬೆಳೆಗಳ ಬಗ್ಗೆ ಚರ್ಚೆ ಮಾಡಿದರು.

ಬಳಿಕ ಮಾತನಾಡಿದ ಸಚಿವರು, ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿರುವ ನಾಲ್ಕು ಪ್ರಮುಖ ಅಣೆಕಟ್ಟುಗಳ ನೀರಿನ ಮಟ್ಟ ಮತ್ತು ವಾಸ್ತವ ಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಕೆಲಸ ಮಾಡಬೇಕಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ, ಮುಖ್ಯವಾಗಿ ಕಟ್ಟಕಡೆಯ ಭಾಗದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಎಚ್ಚರ ವಹಿಸಬೇಕು. ಇದಕ್ಕಾಗಿ ಕೆಲವು ಕೆರೆಗಳಿಗೆ ನೀರು ತುಂಬಿಸುವುದು ಅನಿವಾರ್ಯ ಎಂದರು. ಜುಲೈ ಅಂತ್ಯ ಮತ್ತು ಆಗಸ್ಟ್ ತಿಂಗಳಿನಲ್ಲಿ ನೀರಿನ ಅಭಾವ ಉಂಟಾಗದಂತೆ ಈಗಿನಿಂ ದಲೇ ಲೆಕ್ಕಾಚಾರ ಹಾಕಿ ನೀರು ನಿರ್ವಹಣೆ ಮಾಡುವಂತೆ ನೀರಾವರಿ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಪಿ.ಎಂ.ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಲ್ಲಾ ಪಂಚಾಯಿತಿ ಮುಖ್ಯ ನಿರ್ವಹಣಾಧಿಕಾರಿ ಕೆ.ಆರ್.ನಂದಿನಿ ಭಾಗವಹಿಸಿದ್ದರು.

## ಬಿಎಸ್‌ವೈಗೆ ಸಂತೋಷ್ ಅಭಿನಂದನೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ, ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಶನಿವಾರ ಭೇಟಿಯಾಗಿ ಮಾತುಕತೆ ನಡೆಸಿದರು.



ಯಡಿಯೂರಪ್ಪ ಅವರು ರಾಜಕೀಯ ಜೀವನಕ್ಕೆ ಪದಾರ್ಪಣೆ ಮಾಡಿ ಐದು ದಶಕಗಳನ್ನು ಪೂರೈಸುತ್ತಿರುವ ಸಮಯದಲ್ಲಿ ಸಂತೋಷ್ ಅವರು ಭೇಟಿ ನೀಡಿ, ಅವರ ಜತೆಗೆ ಉಪಾಹಾರ ಸೇವಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಬಿ.ಎಸ್. ಯಡಿಯೂರಪ್ಪ, ಪಕ್ಷವನ್ನು ರಾಷ್ಟ್ರಮಟ್ಟದಲ್ಲಿ ಸಮರ್ಥವಾಗಿ ಸಂಘಟಿಸುತ್ತಿರುವ ಬಿ.ಎಲ್.ಸಂತೋಷ್ ಅವರು ಮನೆಗೆ ಭೇಟಿ ನೀಡಿದ್ದು ಖುಷಿ ತಂದಿದೆ. ಅವರ ಸಂಘಟನಾ ಸಾಮರ್ಥ್ಯ– ಚತುರತೆ ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆಯಾಗಿದೆ. ನನ್ನ ರಾಜಕೀಯ ಜೀವನದ 50ನೇ ವರ್ಷದ ಪಯಣಕ್ಕೆ ಶುಭಾಶಯ ತಿಳಿಸಲು ಆಗಮಿಸಿದ್ದರು ಎಂದು ಹೇಳಿದರು.

ಈಚೆಗೆ ನಡೆದ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ ಕುರಿತು ಚರ್ಚಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶ ಸದೃಢವಾಗಿದ್ದು, ಬಿಜೆಪಿ ಗೆಲುವು ಸಾಧಿಸಲಿದೆ ಎಂಬ ವಿಶ್ವಾಸ ವ್ಯಕ್ತವಾಯಿತು ಎಂದು ತಿಳಿಸಿದರು.

ಚಿತ್ರದುರ್ಗದಲ್ಲಿ ಮೇ 9ರಂದು ಬಿಜೆಪಿ 'ಯಡಿಯೂರಪ್ಪ ಅಭಿಮಾನೋತ್ಸವ' ಸಮಾವೇಶ ಆಯೋಜಿಸಿದೆ. ಕೇಂದ್ರ ಸಚಿವ ಅಮಿತ್ ಶಾ ಭಾಗವಹಿಸಲಿರುವ ಈ ಕಾರ್ಯಕ್ರಮದ ಮೂಲಕ 10 ಲಕ್ಷ ಜನರನ್ನು ಸೇರಿಸಿ ಶಕ್ತಿ ಪ್ರದರ್ಶನ ಮಾಡಲು ವೇದಿಕೆ ಸಜ್ಜುಗೊಂಡಿದೆ.

## ವಿನಯ್ ಕುಲಕರ್ಣಿ ಶಾಸಕ ಸ್ಥಾನ ರದ್ದು

ಬೆಂಗಳೂರು: ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಶಾಸಕ ಸ್ಥಾನವನ್ನು ಅಧಿಕೃತವಾಗಿ ರದ್ದುಗೊಳಿಸಲಾಗಿದೆ. ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಈ ಹಿನ್ನೆಲೆಯಲ್ಲಿ ವಿಧಾನಸಭೆಯ ಕಾರ್ಯದರ್ಶಿಗಳು ವಿನಯ್ ಕುಲಕರ್ಣಿ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ ಅಧಿಕೃತ ಆದೇಶ ಹೊರಡಿಸಿದ್ದಾರೆ. ಧಾರವಾಡ ವಿಧಾನಸಭಾ ಕ್ಷೇತ್ರ ಈಗ ಅಧಿಕೃತವಾಗಿ ತೆರವಾಗಿದೆ.



## ಸಿಎಂ ಬದಲಾವಣೆ ಸಮಯ

### ಕುರ್ಚಿಗಾಗಿ ಪ್ರತಿನಿತ್ಯ ಕಿತ್ತಾಟ: ಬಿ.ವೈ.ವಿಜಯೇಂದ್ರ ಟೀಕೆ

ಮೈಸೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾಗುವ ಸಮಯ ಬಂದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಇದನ್ನೇ, ಇನ್ನೂ ದಿನಾಂಕ ನಿಗದಿಯಾಗಿಲ್ಲ ಎನ್ನುವ ಮೂಲಕ ಪರೋಕ್ಷವಾಗಿ ಹೇಳಿದ್ದಾರೆಂದು ಬಿಜೆಪಿ ರಾಜ್ಯ ಘಟಕದ ಬಿ.ವೈ.ವಿಜಯೇಂದ್ರ ಟೀಕಿಸಿದರು.

ನಗರದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನಲ್ಲಿ ಕುರ್ಚಿಗಾಗಿ ದಿನವೂ ಕಿತ್ತಾಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾಂಗ್ ಮೊದಲು ನವದೆಹಲಿಗೆ ಹೋದರೆ, ಬಳಿಕ ಡಿಸಿಎಂ ಡಿ.ಕೆ.ಶಿವಕುಮಾರ್ ಗ್ಯಾಂಗ್ ಹೋಗುತ್ತಿದೆ. ಇವರಿಬ್ಬರ ಜಗಳದಲ್ಲಿ ನನಗೇನಾದರೂ ಲಾಭ ಆಗುತ್ತದೆಯೇ ಎಂದು ಮಲ್ಲಿಕಾರ್ಜುನ ಖರ್ಗೆ ಕೂಡ ಕುರ್ಚಿ ಮೇಲೆ ಟವೆಲ್ ಹಾಕಿ ಕುತಿದ್ದಾರೆ

ಪುಟ 2ಕ್ಕೆ



### ಬಿಎಸ್‌ವೈ ಅಭಿಮಾನೋತ್ಸವ

## ರಾಜಕೀಯ ಲಾಭಕ್ಕಾಗಿ ಅಲ್ಲ

ಮೈಸೂರು: ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಳ್ಳಲಾಗಿರುವ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವದಿಂದ ರಾಜಕೀಯ ಲಾಭ ಪಡೆಯುವ ಆಸೆ ನನಗೂ ಇಲ್ಲ. ನಮ್ಮ ಪಕ್ಷಕ್ಕೂ ಇಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಬಿ.ವೈ. ವಿಜಯೇಂದ್ರ ಹೇಳಿದರು.

ಪುಟ 2ಕ್ಕೆ

# ಸುಪ್ರೀಂನಲ್ಲಿ ಟಿಎಂಸಿಗೆ ಮುಖಭಂಗ

## ಮತಎಣಿಕೆಗೆ ಕೇಂದ್ರ ನೌಕರರ ನಿಯೋಜನೆ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಮತ ಎಣಿಕೆ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಮತ್ತು ಪಿಎಸ್‌ಯು (ಸಾರ್ವಜನಿಕ ವಲಯ ಉದ್ಯಮ) ನೌಕರರನ್ನು ನೇಮಿಸಿರುವ ಚುನಾವಣಾ ಆಯೋಗದ ನಿರ್ಧಾರ ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ ಸಲ್ಲಿಸಿದ್ದ




ಅರ್ಜಿಯನ್ನು ಸುಪ್ರೀಂ ಕೋರ್ಟ್ ಶನಿವಾರ ವಜಾಗೊಳಿಸಿದೆ.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಟಿಎಂಸಿ ಸಲ್ಲಿಸಿದ್ದ ಅರ್ಜಿಯನ್ನು ಜಸ್ಟಿಸ್ ಪಿ.ಎಸ್.ನರಸಿಂಹ ಮತ್ತು ಜಸ್ಟಿಸ್ ಜಾಯ್ ಮಲ್ಯ ಬಾಗ್ಚಿ ಅವರ ಪೀಠ ವಿಚಾರಣೆ ನಡೆಸಿತು. ಟಿಎಂಸಿ ಪರ ವಕೀಲ ಕಪಿಲ್ ಸಿಬಲ್ ಅವರು ಚುನಾವಣಾ ಆಯೋಗದ ಸುತ್ತೋ ಲೆಯನ್ನು



ಪ್ರಶ್ನಿಸಿದರು. ಇದು ರಾಜ್ಯ ಸರ್ಕಾರಿ ನೌಕರರನ್ನು ಉದ್ದೇಶಪೂರ್ವಕವಾಗಿ ಹೊರಗಿಡುವ ಉದ್ದೇಶ ಹೊಂದಿದೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ನ್ಯಾಯಮೂರ್ತಿ ಬಾಗ್ಚಿ, ಚುನಾವಣಾ ಆಯೋಗದ ನಿಯಮಗಳು ಸ್ಪಷ್ಟವಾಗಿವೆ. ಮತ ಎಣಿಕೆ ಸೂಪರ್‌ವೈಸರ್ ಮತ್ತು ಅಸಿಸ್ಟೆಂಟ್‌ಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಿ ನೌಕರರಿಂದ ನೇಮಿಸಬಹುದು ಎಂದು ಹೇಳಿದೆ ಹೀಗಾಗಿ ಆಯೋ ಗವು ಕೇಂದ್ರ ನೌಕರರನ್ನು ಮಾತ್ರ ನೇಮಿಸುವುದು ನಿಯಮ ವಿರುದ್ಧವಲ್ಲ ಎಂದು ಹೇಳಿತು.

ಮತ ಎಣಿಕೆ ಸಮಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಏಜೆಂಟ್‌ಗಳು ಉಪಸ್ಥಿತರಿರುವುದರಿಂದ ಸೂಪರ್ ವೈಸರ್ ಕೇಂದ್ರ ಅಥವಾ ರಾಜ್ಯದವರಾಗಿರುವುದು ವಿಶೇಷ ಪರಿಣಾಮ ಬೀರುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಚುನಾವಣಾ ಆಯೋಗಕ್ಕೆ ನೇಮಕಾತಿಯ ಪೂರ್ಣ ಅಧಿಕಾರವಿದೆ. ಹೊಸ ಆದೇಶದ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿ ಅರ್ಜಿ ವಜಾ ಮಾಡಿತು.ಆಯೋಗವು ತನ್ನ ಏಪ್ರಿಲ್13ರ ಸುತ್ತೋಲೆಯನ್ನು ಪೂರ್ಣವಾಗಿ ಅನುಸರಿಸುವುದಾಗಿ, ಅಗತ್ಯ ಮುನ್ನಚ್ಚರಿಗೆ ವಹಿಸುವುದು, ಮತ ಎಣಿಕೆ ವಿಡಿಯೋ, ಸಿಸಿಟಿವಿ ವಿಡಿಯೋಗಳನ್ನು 45 ದಿನಗಳ ವರೆಗೂ ಸಂರಕ್ಷಿಸುವ ಭರವಸೆ ನೀಡಿದ್ದರಿಂದ ಕೋರ್ಟ್ ಹೆಚ್ಚುವರಿ ಯಾವುದೇ ಆದೇಶ ಹೊರಡಿಸಲು ನಿರಾಕರಿಸಿತು.

### ಎಲ್ಲ ಘೋಷಣೆ ಇದೇ ವರ್ಷ ಜಾರಿ: ಸಿಎಂ ಸಿದ್ದರಾಮಯ್ಯ ಆದೇಶ

# ಬಜೆಟ್ ಅನುಷ್ಠಾನ: ಅಧಿಕಾರಿಗಳೇ ಹೊಣೆ

ಬೆಂಗಳೂರು: ಬಜೆಟ್ ಘೋಷಣೆಗಳ ಬಗ್ಗೆ ಮೇ ಒಳಗೆ ಎಲ್ಲ ಸರ್ಕಾರಿ ಆದೇಶಗಳನ್ನು ಜಾರಿಗೊಳಿಸಬೇಕು. ಅನುಷ್ಠಾನ ಕಾರ್ಯ ಆರಂಭಿಸಬೇಕು. ಇಲ್ಲದಿದ್ದರೆ ಆಯಾ ಇಲಾಖೆ ಕಾರ್ಯದರ್ಶಿಗಳನ್ನೇ ಹೊಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.



ವಿಧಾನಸೌಧದ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 2026–27ನೇ ಸಾಲಿನ ಬಜೆಟ್ ಘೋಷಣೆಗಳ ಪೈಕಿ ಐದು ಘೋಷಣೆಗಳ ಬಗ್ಗೆ ಮಾತ್ರ ಸರ್ಕಾರಿ ಆದೇಶ ಮಾಡಲಾಗಿದೆ. ಅಲ್ಲದೆ, ಕಳೆದ ವರ್ಷದ 15 ಘೋಷಣೆಗಳು ಇನ್ನೂ ಜಾರಿ ಆಗಿಲ್ಲ. ಇದಕ್ಕೆ ಯಾರು ಹೊಣೆ ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳಿಗೆ ಪ್ರಶ್ನಿಸಿದರು.

ಈ ವರ್ಷದ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿದಂತೆ ಒಟ್ಟು 565 ಘೋಷಣೆಗಳನ್ನು ಮಾಡಿದ್ದೇವೆ. ಎಲ್ಲ ಘೋಷಣೆಗಳನ್ನು ಅದೇ ವರ್ಷ ಜಾರಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ. ಯಾವುದೇ ಕಾರಣಕ್ಕೂ ಬಜೆಟ್ ಘೋಷಣೆ ಅನುಷ್ಠಾನಗೊಳ್ಳದೆ ಇರಬಾರದು.

ಪುಟ 2ಕ್ಕೆ

## ಹುದ್ದೆ ಭರ್ತಿ: ಕ್ರಮ

**ಸರ್ಕಾರ ಈಗಾಗಲೇ ಮಂಜೂರಾತಿ ನೀಡಿರುವ ಹುದ್ದೆಗಳ ಭರ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದದಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭವಾಗದೇ ಬಾಕಿಯಿರುವ 32,132 ಹುದ್ದೆಗಳಿವೆ. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿ ಇದೆ. ಇದನ್ನು ಆದಷ್ಟು ಬೇಗನೆ ಮುಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದರು. ಅಧಿಕರಿಗಳು ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸಚಿವರಿಗೆ ಕಾನೂನಿನ ವ್ಯಾಪ್ತಿಯೊಳಗೆ ಸಲಹೆಗಳನ್ನು ನೀಡಬೇಕು.ಸಂವಿಧಾನಕ್ಕೆ ವಿರುದ್ಧವಾದ ಯಾವುದೇ**

ಪುಟ 2ಕ್ಕೆ

# ಭರಣಿ ಮಳೆ ತಂದ ಹರ್ಷ: ಕೆಲವರಿಗೆ ಸಂಕಷ್ಟ

## ಎಚ್.ಡಿ.ಕೋಟೆಯಲ್ಲಿ ಗರಿಗೆದರಿದ ಕೃಷಿ ಚಟುವಟಿಕೆ | ಬಿರುಗಾಳಿ ಮಳೆಗೆ ಬಾಳೆ ಬೆಳೆ ನಾಶ, ಮನೆಗಳಿಗೆ ಹಾನಿ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ದಾಖಲೆಯ ತಾಪಮಾನ ಏರಿಕೆಯಿಂದ ಬಿಸಿಲಿನ ಬೇಗೆಯಲ್ಲಿ ಬೆಂದಿದ್ದ ಜನತೆಗೆ, ಶುಕ್ರವಾರ ಸಂಜೆ ಸುರಿದ ಮಳೆ ತಂಪು ನೀಡಿದೆ. ವಾತಾವರಣ ಹಸನಾಗುವುದರೊಂದಿಗೆ ರೈತರ ಕೃಷಿ ಚಟುವಟಿಕೆಗಳು ಗರಿಗೆದರುವಂತೆ ಮಾಡಿದೆ.

ಈ ಬಾರಿ ಅವಧಿ ಪೂರ್ವ ಮುಂಗಾರಿನ ವಾಡಿಕೆ ಮಳೆ ಕೈಕೊಟ್ಟಿದ್ದರಿಂದ ರೈತರು ಕೃಷಿ ಕಾಯಕ ಆರಂಭಿಸಲು ವಿಳಂಬವಾಗಿತ್ತು. ಎರಡು–ಮೂರು ತಿಂಗಳ ಹಿಂದೆಯೇ ಜಮೀನು ಉಳುಮೆ ಮಾಡಿದ್ದ ರೈತರು ಮಳೆಗಾಗಿ ಕಾಯುತ್ತಿದ್ದರು. ಶೇ. 80ರಷ್ಟು ಜಮೀನು ಉಳುಮೆ ಮಾಡಿರುವ ರೈತರು ರೇವತಿ ಹಾಗೂ ಅಶ್ವಿನಿ ಮಳೆಗಳು ನೆರವಾಗುತ್ತವೆ ಎಂದು ನಂಬಿದ್ದರು. ಆದರೆ ಈ ಮಳೆಗಳು ಕೈಕೊಟ್ಟಿದ್ದರಿಂದ ಕಂಗೆಟ್ಟಿದ್ದ ರೈತರು, ಇದೀಗ ಶುಕ್ರವಾರ ಸುರಿದ ಭರಣಿ ಮಳೆಗೆ ಹರ್ಷಚಿತ್ತರಾಗಿದ್ದಾರೆ.


ತಾಲೂಕಿನಲ್ಲಿ ನಿಗಮದ ವತಿಯಿಂದ ಕೊಳವೆ ಬಾವಿ ಕೊರೆಸಿರುವ ಸುಮಾರು 1500ಕ್ಕೂ ಹೆಚ್ಚು ರೈತರು ಹಾಗೂ ಸಾವಿರಾರು ಖಾಸಗಿ ಕೊಳವೆ ಬಾವಿ ಹೊಂದಿರುವ ರೈತರಿದ್ದಾರೆ. ಕೆಲ ರೈತರು ಎರಡು ತಿಂಗಳ ಹಿಂದೆಯೇ ಮುಸುಕಿನ ಜೋಳ, ತರಕಾರಿಗಳನ್ನು ಬೆಳೆದಿದ್ದರು. ಆದರೆ ಈ ಬಾರಿ ತಾಪಮಾನ ಏರಿಕೆಯಿಂದ ಅಂತರ್ಜಲ ಮಟ್ಟ ಕುಸಿದು, ಕೊಳವೆ ಬಾವಿಗಳು ಬತ್ತಿ ದ್ದವು. ಇದರಿಂದಾಗಿ ಬೆಳೆ ಉಳಿಸಿಕೊಳ್ಳಲು ರೈತರು ಮಳೆಯನ್ನೇ ಅವಲಂಬಿಸಿದ್ದರು. ಮಳೆಯಾಶ್ರಿತ ಜಮೀನಿನ ರೈತರು ಇದೀಗ ಎರಡನೇ ಬಾರಿಗೆ ಜಮೀನು ಉಳುಮೆ ಮಾಡುತ್ತಿದ್ದು, ಬಿತ್ತನೆ ಕಾರ್ಯಕ್ಕೆ ಭೂಮಿಯನ್ನು ಹದಗೊಳಿಸುತ್ತಿದ್ದಾರೆ. ಕೆಲವೆಡೆ ಬಿತ್ತನೆ ಕಾರ್ಯವೂ ಆರಂಭವಾಗಿದೆ. ಇನ್ನೊಂದು ಹದವಾದ ಮಳೆ ಬಂದರೆ ಬಹುತೇಕ ಬಿತ್ತನೆ ಕಾರ್ಯ ಪೂರ್ಣಗೊಳ್ಳಲಿದೆ.



ಬೀಚನಹಳ್ಳಿ ಸಮೀಪದ ರಾಮೇನಹಳ್ಳಿ ಗ್ರಾಮದಲ್ಲಿ ಬಿತ್ತನೆ ಕಾರ್ಯದಲ್ಲಿ ತೊಡಗಿರುವ ರೈತರು.



ಹ್ಯಾಂಡ್ ಪೋಸ್ಟ್ ನಲ್ಲಿ ಬೃಹತ್ ಗಾತ್ರದ ಹುಣಸೆ ಮರ ಮನೆ ಬಿದ್ದಿರುವುದು



ತುಂಬಸೋಗೆ ಗ್ರಾಮದ ತಿಮ್ಮನಾಯಕರ ಜಮೀನಿನ ಬಾಳೆ ಬೆಳೆ ನೆಲಕಚ್ಚಿರುವುದು.



**ಬಿತ್ತನೆ ಅಂದಾಜು:**

ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಒಟ್ಟು 83,192 ಹೆಕ್ಟೇರ್ ಕೃಷಿ ಭೂಮಿಯಿದ್ದು, ಅದರಲ್ಲಿ 31 ಸಾವಿರ ಹೆಕ್ಟೇರ್ ಮುಸುಕಿನ ಜೋಳ, 200 ಹೆಕ್ಟೇರ್ ಉದ್ದು, 2,300 ಹೆಕ್ಟೇರ್ ಅಲಸಂದೆ ಹಾಗೂ 150 ಹೆಕ್ಟೇರ್ ಪ್ರದೇಶದಲ್ಲಿ ಹೆಸರುಕಾಳು ಬೆಳೆಯುವ ಅಂದಾಜಿದೆ. ಬಿ.ಮಟಕೆರೆ, ಹಂಪಾಪುರ, ಸರಗೂರು, ಎಚ್.ಡಿ.ಕೋಟೆ ಹಾಗೂ ಅಂತರಸಂತೆ ರೈತ ಸಂಪರ್ಕ ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಲಾಗುತ್ತಿದೆ. ಮುಸುಕಿನ ಜೋಳಕ್ಕೆ ಅತಿ ಹೆಚ್ಚು ಬೇಡಿಕೆ ಕಂಡುಬಂದಿದೆ.

ರೈತರು ನೋಂದಾಯಿತ ಫ್ರೂಟ್ಸ್ (ಈಖಗಿಖಖಿಖ) ಐಡಿ ಬಳಸಿ ರಸಗೊಬ್ಬರ ಪಡೆಯಬೇಕು. ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳಲ್ಲಿ ಕೃತಕ ಅಭಾವ ಸೃಷ್ಟಿಸುವ ಅಥವಾ ಹೆಚ್ಚಿನ ದರಕ್ಕೆ ಮಾರಾಟ ಮಾಡುವ ಅಂಗಡಿ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ಎಚ್ಚರಿಕೆ ನೀಡಿದ್ದಾರೆ.

### ನೆಲಕಚ್ಚಿದ ಬಾಳೆ ಬೆಳೆ; ತಪ್ಪಿದ ಭಾರಿ ಅನಾಹುತ

ಮಳೆಯೊಂದಿಗೆ ಬೀಸಿದ ಬಿರುಗಾಳಿಗೆ ಸರಗೂರು–ಎಚ್.ಡಿ.ಕೋಟೆ ಮಾರ್ಗದ ಜಕ್ಕಹಳ್ಳಿ ಬಳಿ ಬೃಹತ್ ಆಲದ ಮರ ಧರೆಗುರುಳಿ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಚನ್ನೇಗೌಡನಹುಂಡಿ ಗ್ರಾಮದ ರವಿ ಎಂಬುವವರ ಮನೆಯ ಮೇಲ್ಛಾವಣಿ ಕುಸಿದು ಅವರ ಪತ್ನಿ ಶಿವರಂಜನಿಗೆ ಗಂಭೀರ ಗಾಯವಾಗಿದ್ದು, ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇದೇ ಗ್ರಾಮದ ರೈತ ಮಾದೇಗೌಡ ಹಾಗೂ ಅನ್ನಪೂರ್ಣ ಅವರ ಬಾಳೆ ಬೆಳೆ ನಾಶವಾಗಿದೆ.

ಯರಹಳ್ಳಿ ಗ್ರಾಮದಲ್ಲಿ 40 ವರ್ಷದ ಹಳೆಯ ಹುಣಸೆ ಮರ ಮನೆಯ ಮೇಲೆ ಬಿದ್ದು ಹಾನಿ ಸಂಭವಿಸಿದೆ. ಮನುಗನಹಳ್ಳಿ, ಹೊಸತೊರವಳ್ಳಿ ಹಾಗೂ ತುಂಬಸೋಗೆ ಗ್ರಾಮಗಳಲ್ಲಿ ಸುಮಾರು 4–5 ಎಕರೆ ಪ್ರದೇಶದ ನೇಂದ್ರ ಮತ್ತು ಏಲಕ್ಕಿ ಬಾಳೆ ಬೆಳೆ ನೆಲಕಚ್ಚಿದೆ. ಹ್ಯಾಂಡ್ ಪೋಸ್ಟ್‌ನಲ್ಲಿರುವ ನರ್ಸರಿಗಳಿಗೂ ಹಾನಿಯಾಗಿದೆ.



"ಈ ಬಾರಿ ಬಿತ್ತನೆ ಬೀಜಗಳ ಪೂರೈಕೆಯಲ್ಲಿ ಯಾವುದೇ ತೊಂದರೆಯಿಲ್ಲ. ಮುಸುಕಿನ ಜೋಳ 500, ಅಲಸಂದೆ 50, ಹೆಸರುಕಾಳು 20 ಹಾಗೂ ಉದ್ದು 20 ಕ್ವಿಂಟಾಲ್ ದಾಸ್ತಾನು ಸಂಗ್ರಹಿಸಲಾಗಿದೆ. ರಸಗೊಬ್ಬರ ಪೂರೈಕೆಯಲ್ಲೂ ವ್ಯತ್ಯಯವಿಲ್ಲ. ರೈತರು ಹೆಚ್ಚಿನ ಮಾಹಿತಿಗಾಗಿ ಕೃಷಿ ಇಲಾಖೆಯನ್ನು ಸಂಪರ್ಕಿಸಬಹುದು."

**ಪ್ರಸಾದ್** ಸಹಾಯಕ ಕೃಷಿ ನಿರ್ದೇಶಕ, ಎಚ್.ಡಿ.ಕೋಟೆ ತಾಲೂಕು.

### ತಂಬಾಕು ಮಂಡಳಿಯ ಹೊಸ ನಿಯಮ; ಉತ್ಪಾದನೆಯಲ್ಲಿ ಕುಸಿತದ ಭೀತಿ

ಅಂತರಾಷ್ಟ್ರೀಯ ಮಾರುಕಟ್ಟೆಯ ಗೊಂದಲ ಹಾಗೂ ಬೇಡಿಕೆ ಇಳಿಕೆಯ ನೆಪ ನೀಡಿರುವ ತಂಬಾಕು ಖರೀದಿ ಕಂಪನಿಗಳು ಈ ಬಾರಿ ಕಡಿಮೆ ಬೇಡಿಕೆಯಿಟ್ಟಿವೆ. ಈ ಕಾರಣಕ್ಕಾಗಿ ಪರವಾನಗಿ ಹೊಂದಿರುವ ರೈತರು 2026–27ನೇ ಸಾಲಿನಲ್ಲಿ ಪ್ರತಿ 'ಸಿಂಗಲ್ ಬ್ಯಾರನ್'ಗೆ ಗರಿಷ್ಠ 1,017 ಕೆ.ಜಿ ತಂಬಾಕು ಮಾತ್ರ ಬೆಳೆಯಬೇಕೆಂದು ಮಂಡಳಿ ಹೊಸ ನಿಯಮ ಜಾರಿಗೆ ತಂದಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಾಲೂಕಿನಲ್ಲಿ 3,845 ನೋಂದಾಯಿತ ಬೆಳೆಗಾರರಿದ್ದು, 4,956 ಬ್ಯಾರನ್ ಹೊಂದಿದ್ದಾರೆ.

ಕಳೆದ ವರ್ಷ 6 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 8.37 ಮಿಲಿಯನ್ ಕೆ.ಜಿ ತಂಬಾಕು ಬೆಳೆಯಲಾಗಿತ್ತು. ಹೊಸ ನಿಯಮದಿಂದ ಈ ಬಾರಿ ಉತ್ಪಾದನೆ ಗಣನೀಯವಾಗಿ ಕುಸಿಯಲಿದೆ.

# ಸಿಎಂ ಬದಲಾವಣೆ ಆಗಬಹುದು: ಬಿ.ವೈ.ವಿಜಯೇಂದ್ರ



ಮೈಸೂರು: ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಗಮನಿಸಿದರೆ ರಾಜ್ಯದಲ್ಲಿ ಸಿಎಂ ಬದಲಾವಣೆ ಆಗಬಹುದು ಅನಿಸುತ್ತದೆ. ಆದರೆ, ಕೆಲವರು ಖರ್ಗೆ ಸಿಎಂ ಆಗಲಿ ಎನ್ನುತ್ತಾರೆ, ಮತ್ತೆ ಕೆಲವರು ಡಿ.ಕೆ.ಶಿವಕುಮಾರ್ ಮೇ 15ಕ್ಕೆ ಸಿಎಂ ಆಗುತ್ತಾರೆ ಎನ್ನುತ್ತಾರೆ. ನೋಡೋಣ ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದ ವಿಜಯೇಂದ್ರ ಅವರು ಮಾಧ್ಯಮದವರ ಜೊತೆ ಮಾತನಾಡಿದರು. ಸ್ವಾಮೀಜಿಯನ್ನು ಭೇಟಿ ಮಾಡಿ, ಮೇ9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಯಡಿ ಯೂರಪ್ಪ ಅವರ 50 ವರ್ಷದ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದೇವೆ. ಕಾರ್ಯಕ್ರಮಕ್ಕೆ ಬರಲು ಸ್ವಾಮೀಜಿ ಒಪ್ಪಿದ್ದಾರೆ. ಮೇ 8 ರಂದು ಯಡಿಯೂರಪ್ಪ ಚಿತ್ರದುರ್ಗದ ಪುರ ಪ್ರವೇಶ ಮಾಡ್ತಾರೆ. ಅದ್ದೂರಿಯಾಗಿ ಅವರಿಗೆ ಸ್ವಾಗತ ಕೋರುತ್ತೇವೆ. 9 ರಂದು ಅಮಿತ್ ಶಾ ವೇದಿಕೆ ಕಾರ್ಯಕ್ರಮಕ್ಕೆ ಆಗಮಿ ಸುತ್ತಾರೆ. ನಾಡಿನ ರೈತರು, ಮಹಿಳೆಯರು, ಸ್ವಾಮೀಜಿಗಳು ಎಲ್ಲರೂ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ. 10 ಲಕ್ಷ ಜನ ಸೇರುವ ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ. ಕಾರ್ಯಕ್ರಮಕ್ಕಾಗಿ ಯಡಿಯೂರಪ್ಪ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಮಿನಿ ದಸರಾ ಮಾದರಿಯಲ್ಲಿ ಕಾರ್ಯ ಕ್ರಮ ಮಾಡುತ್ತೇವೆ ಎಂದರು.

ಚುನಾವಣೆ ಸಮೀಪ ಕಾರ್ಯಕ್ರಮ ಆಯೋಜನೆ ಮಾಡಿದ್ರೆ, ವಿಜಯೇಂದ್ರ ಅಥವಾ ಬಿಜೆಪಿಗೆ ಬೂಸ್ಟ್ ಆಗುತ್ತಿತ್ತು. ಈಗ ಯಾವುದೇ ಚುನಾವಣೆ ಇಲ್ಲ, ಇದು ಯಡಿಯೂರಪ್ಪ ಅವರಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮ. ಈ ರಾಜ್ಯದಲ್ಲಿ ಅನೇಕರು ಅದೃಷ್ಟದ ಸಿಎಂ ಆಗಿದ್ದಾರೆ. ಆದ್ರೆ, ಯಡಿಯೂರಪ್ಪ ಅದೃಷ್ಟದ ಸಿಎಂ ಅಲ್ಲ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇದ್ದವರು. ಅದಕ್ಕಾಗಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಗೋವಿಂದ ಕಾರಜೋಳ ಅವರ ಅಪೇಕ್ಷೆಯಂತೆ ಚಿತ್ರದುರ್ಗದಲ್ಲಿ ಮಾಡುತ್ತಿದ್ದೇವೆ ಎಂದರು.

ಎರಡು ಕ್ಷೇತ್ರಗಳಲ್ಲಿ ಬೈ ಎಲೆಕ್ಷನ್ ಗೆಲ್ಲುವ ವಿಶ್ವಾಸ ಇಲ್ಲ ಅಂತ ಕಾಂಗ್ರೆಸ್ ಮುಖಂಡರೇ ನನಗೆ ಹೇಳಿದ್ದಾರೆ. ಫಲಿತಾಂಶ ಬಂದ ಮೇಲೆ ರಾಜ್ಯದ ಸಿಎಂ ಹಾಗೂ ಕಾಂಗ್ರೆಸ್?ಗೆ ಪಾಠವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಮೈಸೂರು ಪಂಜಾಬ್ ಆಗಿದೆ, ಡ್ರಗ್ಸ್ ಹಾವಳಿ ಜಾಸ್ತಿಯಾಗಿದೆ. ಕಾಂಗ್ರೆಸ್ ಸರ್ಕಾರ ಮನುಷ್ಯತ್ವ ಇಲ್ಲದ ಸರ್ಕಾರ. ಮೈಸೂರಿನಲ್ಲಿ 3 ವರ್ಷದಿಂದ ಒಂದೇ ಒಂದು ಅಭಿವೃದ್ಧಿ ಆಗಿಲ್ಲ. ರಾಜ್ಯದ ಅಭಿವೃದ್ಧಿಗೆ ಕಾಂಗ್ರೆಸ್ ಮನಸ್ಸು ಮಾಡಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕೇವಲ ಕುರ್ಚಿ ಉಳಿಸಿಕೊಳ್ಳುವ ಹಪಾಹಪಿ ಅಷ್ಟೇ ಕಾಣಿಸುತ್ತಿದೆ. ದೆಹಲಿಗೆ ಒಬ್ಬರ ಹಿಂದೆ ಒಬ್ಬರು ಹೋಗ್ತಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದರು. ಮಾಜಿ ಸಂಸದ ಪ್ರತಾಪಸಿಂಹ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಂ.ಸುಬ್ಬಣ್ಣ ಇನ್ನಿತರರು ಇದ್ದರು.

# ಪೌರಕಾರ್ಮಿಕರಿಗೆ ಸತ್ಕರಿಸಿ ಕಾರ್ಮಿಕರ ದಿನಾಚರಣೆ

ಮೈಸೂರು: ನಗರದ ಚಾಮುಂಡಿಪುರಂ ನಲ್ಲಿ ಅಪೂರ್ವ ಸ್ನೇಹ ಬಳಗ ಹಾಗೂ ರಂಗ ರಾವ್ ಅಂಡ್ ಸನ್ಸ್ ವತಿಯಿಂದ ಪೌರಕಾರ್ಮಿಕರಿಗೆ ತಲೆಗೆ ಟೋಪಿ ಹಾಗೂ ಟೀ, ಬನ್, ಬಾಳೇಹಣ್ಣು ನೀಡುವ ಮೂಲಕ ಪೌರಕಾರ್ಮಿಕರಿಗೆ ಸತ್ಕರಿಸಿ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಗರದ ಕಸ ತೆಗೆದು ಪರಿಸರವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರ ಆರೋಗ್ಯ ಕಾಪಾಡುತ್ತಿರುವ ಪೌರ ಕಾರ್ಮಿಕರ ಸೇವೆ ಸ್ಮರಣೀಯ. ಪೌರ ಕಾರ್ಮಿಕರು ಅಂದರೆ ಸಮಾಜದ ಅತ್ಯಂತ ಕೆಳ ಮಟ್ಟದ ಸಮುದಾಯ ಎಂಬ ಮಾತು ಇತ್ತು. ಆದರೆ, ಈಗ ಆ ಮಾತು ಇಲ್ಲ ಎಂದು ಅವರ ಸಹ ಒಂದು ಅತ್ಯುತ್ತಮ ಜೀವನಮಟ್ಟ ಹೊಂದುವ ಮೂಲಕ ಸಮಾಜದ ಮುಖ್ಯವಾಹಿನಿಯಲ್ಲಿ ಬದುಕುತ್ತಿದ್ದಾರೆ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ಹೇಳಿದರು.

ಕೆಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಅಪೂರ್ವ ಸುರೇಶ್, ರಂಗರಾವ್ ಅಂಡ್ ಸನ್ಸ್ ಸುರೇಶ್, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ಉದ್ಯಮಿ ಜಯರಾಮ್, ಆರೋಗ್ಯ ನಿರೀಕ್ಷಕ ಶಿವಪ್ರಸಾದ್, ದೂರ ರಾಜಣ್ಣ, ಆನಂದ, ಮೈ.ಲಾ.ವಿಜಯ್ ಕುಮಾರ್, ಜತ್ತಿ ಪ್ರಸಾದ್, ಶಿವಲಿಂಗ ಸ್ವಾಮಿ ಇತರರು ಹಾಜರಿದ್ದರು.



ಮೊದಲ ಪುಟದಿಂದ

## ಆರ್ಥಿಕ ಸ್ಥಿತಿ ಬಲವಾಗಿದ್ದರೆ ಇಂಧನ ಬೆಲೆ ಹೆಚ್ಚಳ ಏಕೆ?

ದೇಶದ ಆರ್ಥಿಕತೆ ಉತ್ತಮವಾಗಿದೆ. ಹಣದುಬ್ಬರ ನಿಯಂತ್ರಿಸಲು, ಸಂಕಷ್ಟ ನಿಭಾಯಿಸುವ ಶಕ್ತಿಯಿದೆ.

ಆರ್ಥಿಕ ಸ್ಥಿತಿ ಸುಭದ್ರವಾಗಿದೆ ಎಂದು ಪ್ರಧಾನ ಮೋದಿ ಹೇಳುತ್ತಾರೆ. ತೈಲ ದರ ಹೆಚ್ಚಳವಾಗಿದ್ದರೆ ಅದನ್ನು ತಡೆದುಕೊಳ್ಳುವ ಶಕ್ತಿ ತೋರಿಸಬೇಕು. ಅದನ್ನು ಬಿಟ್ಟು ಜನಸಮುದಾಯಕ್ಕೆ ಹೊರೆಯಾಗುವ ರೀತಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಮಾಡುವುದು ಸರಿಯಲ್ಲ ಎಂದರು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಹೆಚ್ಚಳವಾದಾಗ ದರ ಏರಿಕೆ ಮಾಡುವುದು ಅನಿವಾರ್ಯ ಎಂದು ನಾವು ಹೇಳುತ್ತಿದ್ದಾಗ ಬಿಜೆಪಿಯವರು ಟೀಕೆ ಮಾಡುತ್ತಿದ್ದರು. ಈಗ ಅವರೇನು ಮಾಡುತ್ತಿದ್ದಾರೆ ಎಂದು ಪರಮೇಶ್ವರ್ ಪ್ರಶ್ನಿಸಿದರು.

## ಇಬ್ಬರು ಮಕ್ಕಳ ಕೊಲೆ ಮಾಡಿ ತಂದೆಯೂ ನೇಣಿಗೆ ಶರಣು

ಶುಕ್ರವಾರ ಸಂಜೆ ಶಿವಣ್ಣ ಇಬ್ಬರು ಮಕ್ಕಳನ್ನು ವಾಪಸ್ ಆಲ್ಕೆರೆಗೆ ಕರೆದುಕೊಂಡು ಬಂದಿದ್ದರು. ತಡರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಿಗ್ಗೆ ಅಕ್ಕಪಕ್ಕದ ಮನೆಯವರು ಹೋಗಿ ನೋಡಿದಾಗ ಆತ್ಮಹತ್ಯೆ ವಿಚಾರ ಗೊತ್ತಾಗಿದೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಮೀಕ್ಷೆಯ ನಂಬಿಕೆ ಇಲ್ಲ

ಬದಲಾವಣೆ ಬೇಕಾಗಿದೆ. ಆ ಬದಲಾವಣೆ ಸಿಗಲಿದೆ ಎಂಬ ಆತ್ಮವಿಶ್ವಾಸವಿದೆ ಎಂದರು.ತಮಿಳುನಾಡು ಚುನಾವಣೆ ಕುರಿತು ಮಾತನಾಡಿ, ದೇಶದಾದ್ಯಂತ ಇಂಡಿಯಾ ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಬರಲಿದೆ. ಪ್ರತಿ ರಾಜ್ಯದಲ್ಲೂ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಹೇಳಿದರು.

## ಮೇನಲ್ಲಿ ಹೆಚ್ಚಿನ ಮಳೆ ಸಾಧ್ಯತೆ

ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಈ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ದಿನಗಳು ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ತನ್ನ ಮಾಸಿಕ ಮುನ್ಸೂಚನೆಯಲ್ಲಿ ತಿಳಿಸಿದೆ.ಮೇ ತಿಂಗಳಲ್ಲಿ ದೇಶಾದ್ಯಂತ ಸರಾಸರಿ ಮಳೆ ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ. ಆದರೆ ಪೂರ್ವ, ಈಶಾನ್ಯ ಮತ್ತು ಪೂರ್ವ ಮಧ್ಯ ಭಾರತದ ಕೆಲವು ಭಾಗಗಳು ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು. ಮೇ ನಲ್ಲಿ ದೇಶದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ ಎಂದು ತಿಳಿಸಿದೆ.

## ಸಿಎಂ ಬದಲಾವಣೆ ಸಮಯ

ಎಂದು ವ್ಯಂಗ್ಯವಾಡಿದರು. ರಾಜ್ಯದಲ್ಲಿ ರುವುದು ಮಾನವೀಯತೆ ಇಲ್ಲದ ಭ್ರಷ್ಟ ಸರ್ಕಾರ. ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲುತ್ತದೆ ಎಂದು ಆ ಪಕ್ಷದ ಮುಖಂಡರೇ ಹೇಳುತ್ತಿದ್ದಾರೆ. ಇದು ಆ ಪಕ್ಷದ ಸ್ಥಿತಿ ಎಂದು ಆರೋಪಿಸಿದರು.

ಮೊದಲ ಪುಟದಿಂದ

# ಬಜೆಟ್ ಅನುಷ್ಠಾನ: ಅಧಿಕಾರಿಗಳೇ ಹೊಣೆ

ಅನುಷ್ಠಾನದಲ್ಲಿ ಪ್ರಾಯೋಗಿಕ ತೊಡಕುಗಳು ಎದುರಾದರೆ ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿ ಗಮನಕ್ಕೆ ತರಬೇಕು ಎಂದು ಸಲಹೆ ನೀಡಿದರು. ರಾಜ್ಯಮಟ್ಟದಲ್ಲಿ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15,334 ಅರ್ಜಿಗಳ ಪೈಕಿ, 15,295 ನ್ನು ವಿಲೇವಾರಿ ಮಾಡಲಾಗಿದೆ. ಬಾಕಿ 45 ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕ ಕುಂದುಕೊರತೆಯಡಿ 3,27,052 ಅರ್ಜಿಗಳನ್ನು ಸ್ವೀಕರಿಸಲಾಗಿದೆ. 3,17,576 ವಿಲೇವಾರಿ ಮಾಡಲಾಗಿದೆ. 1,828 ಅರ್ಜಿಗಳ ವಿಲೇವಾರಿ ನಿಗದಿತ ಕಾಲಾವಧಿ ಮುಗಿದಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಅದಕ್ಕೆ ಅವಕಾಶ ಮಾಡಬಾರದು. ಸಕಾಲ ಅಡಿ ಸ್ವೀಕರಿಸಲಾಗುವ ಅರ್ಜಿಗಳನ್ನೂ ಸಕಾಲದಲ್ಲಿಯೇ ವಿಲೇವಾರಿ ಮಾಡಬೇಕು ಎಂದರು.

ಈ ವರ್ಷ ಮಳೆ ಶೇ 5ರಷ್ಟು ಮಳೆ ಕಡಿಮೆಯಾಗುವ ಸಾಧ್ಯತೆಯಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸಭೆ ನಡೆಸಬೇಕು. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆ ಆಗಬಾರದು ಎಂದು ಸೂಚನೆ ನೀಡಿದರು.

### ಹುದ್ದೆ ಭರ್ತಿ: ಕ್ರಮ

ಕಾರ್ಯವನ್ನು ಮಾಡಬಾರದು. ಹಿರಿಯ ಅಧಿಕಾರಿಗಳು ಅಭಿಪ್ರಾಯಗಳನ್ನು ನಿರ್ಭಯವಾಗಿ, ಸ್ವತಂತ್ರವಾಗಿ, ಸತ್ಯವಾಗಿ ಹೇಳಬೇಕು. ಆಡಳಿತಕ್ಕೆ ಇನ್ನಷ್ಟು ಚುರುಕು ನೀಡಬೇಕು ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು. ಅಧಿಕಾರಿಗಳು ಯಾವತ್ತೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಬಾರದು ಹಾಗೂ ತಪ್ಪು ಹಾದಿಗೆ ಎಳೆಯಬಾರದು. ನಮ್ಮ ನಿಲುವುಗಳು, ತೀರ್ಮಾನಗಳು ಯಾವತ್ತೂ ಜನಪರವಾಗಿರಬೇಕು. ಅಧಿಕಾರಿಗಳು 30–35 ವರ್ಷಗಳ ಕಾಲ ಆಡಳಿತ ವ್ಯವಸ್ಥೆಯಲ್ಲಿದ್ದರೆ, ಜನಪ್ರತಿನಿಧಿಗಳು ಕೇವಲ ಐದು ವರ್ಷ ಮಾತ್ರ ಇರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಾಗಿದೆ ಎಂದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಗುತ್ತಿಗೆಯಲ್ಲಿ 2 ಕೋಟಿವರೆಗೆ ಮೀಸಲಾತಿ ಕಲ್ಪಿಸಲಾಗಿದೆ. ವಿವಿಧ ಕಾಮಗಾರಿಗಳನ್ನು ಒಟ್ಟು ಸೇರಿಸಿ ಪ್ಯಾಕೇಜ್ ಮಾಡುವ ಮೂಲಕ ಮೀಸಲಾತಿ ತಪ್ಪಿಸಲು ಅವಕಾಶ ನೀಡಬಾರದು. ಎಲ್ಲ ಕಾಮಗಾರಿಗಳನ್ನು ನಿಗದಿತ ಅವಧಿಯ ಒಳಗಾಗಿ ಪೂರ್ಣಗೊಳಿಸಬೇಕು. ಕಾಮಗಾರಿ ವಿಳಂಬದಿಂದ ನಿರ್ಮಾಣ ವೆಚ್ಚ ಹೆಚ್ಚಳಕ್ಕೆ ಅವಕಾಶ ನೀಡಬಾರದು ಎಂದು ಸಿಎಂ ಸೂಚಿಸಿದರು.

# ಆಟೋ ಚಾಲಕರಿಗೆ ಆಹಾರ ಕಿಟ್ ವಿತರಣೆ

ಮೈಸೂರು: 75 ಆಟೋ ಚಾಲಕರಿಗೆ ಆಹಾರ ಕಿಟ್‌ಗಳನ್ನು ವಿತರಿಸುವ ಮೂಲಕ ನಗರದ ವೈಭವಿ ಸಿಲ್ಕ್ ಅಂಡ್ ಸ್ಯಾರೀಸ್ ವತಿಯಿಂದ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.

ಆಟೋ ಚಾಲಕರಿಗೆ ಅಕ್ಕಿ, ಕಾಳು, ಎಣ್ಣೆ ಸೇರಿ ಇನ್ನಿತರೆ ಅಗತ್ಯ ದಿನಸಿ ಸಾಮಗ್ರಿಗಳನ್ನು ಒಳಗೊಂಡ ಆಹಾರ ಕಿಟ್‌ಗಳನ್ನು ವಿತರಿಸಿದ ಕಿಟ್ ವಿತರಿಸಿ ಮಾತನಾಡಿದ ಅಂಜಲಿ ವಿಜಯ್, ದಿನದಿಂದ ದಿನಕ್ಕೆ ಗ್ಯಾಸ್, ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಆಟೋ ಚಾಲಕರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಅವರ ಸಂಕಷ್ಟಕ್ಕೆ ಸ್ಪಂದಿಸುವ ಉದ್ದೇಶದಿಂದ ಕಾರ್ಮಿಕ ದಿನಾಚರಣೆಯ ಅಂಗವಾಗಿ ಈ ಸೇವಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಅಂಜಲಿ ಅವರ ತಂದೆ ವಿಜಯ್ ಮಾತನಾಡಿ, "ನಾನು ಹಿಂದೆ ಆಟೋ ಓಡಿಸಿ ಜೀವನ ಕಟ್ಟಿಕೊಂಡಿದ್ದೇನೆ. ಆಟೋ ಚಾಲಕರ ಕಷ್ಟ ಮತ್ತು ಶ್ರಮ ಏನೆಂಬುದು ನನಗೆ ಚೆನ್ನಾಗಿ ತಿಳಿದಿದೆ. ಎಂದರು.



:ರಮ್ಮನಹಳ್ಳಿ ಅಕ್ರಮ

# ಕ್ರಮ ಕೈಗೊಳ್ಳದಿದ್ದರೆ ಹೋರಾಟದ ಎಚ್ಚರಿಕೆ

ಮೈಸೂರು: ತಾಲ್ಲೂಕಿನ ರಮ್ಮನಹಳ್ಳಿ ಗ್ರಾಮದ ಸರ್ವೆ ನಂಬರ್ 259/3 1.21 ಎಕರೆ ಜಮೀನನ್ನು ನರಸಿಂಹರಾಜ ಕ್ಷೇತ್ರದ ಬಡವರಿಗೆ ಮನೆ ಹಾಗೂ ನಿವೇಶನಕ್ಕಾಗಿ 2005 ರಲ್ಲಿ ಸ್ವಾಧೀನ ಪಡೆಯಲಾಗಿತ್ತು. ಇದರಲ್ಲಿನ 30.1/2 ಗುಂಟೆಗೆ ಸಂಬಂಧಿಸಿದಂತೆ ಓರ್ವರು ನ್ಯಾಯಾಲಯದ ಮೊರೆ ಹೋಗಿದ್ದ ಹಿನ್ನೆಲೆಯಲ್ಲಿ ಅವರಿಗೆ 10.08 ಗುಂಟೆ ವಾಪಸು ನೀಡುವಂತೆ ಆದೇಶಿಸಲಾಗಿತ್ತು. ಆದರೆ ಇದರಲ್ಲಿ ಉಳಿಸಿಕೊಳ್ಳಬೇಕಾದ 20.08 ಗುಂಟೆ ಜಮೀನಿಗೂ ಖಾಸಗಿಯವರಿಗೆ ಅಕ್ರಮವಾಗಿ ಖಾತೆ ಮಾಡಿಕೊಡಲಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕು. 10 ದಿನಗಳ ಒಳಗೆ ಈ ಕ್ರಮ ಕೈಗೊಳ್ಳದಿದ್ದಲ್ಲಿ ತಾಲ್ಲೂಕು ಪಂಚಾಯಿತಿ ಎದುರು ಪ್ರತಿಭಟಿಸಲಾಗುವುದು ಎಂದು ಎಂದು ಸಾಮಾಜಿಕ ಹೋರಾಟಗಾರ ಅರವಿಂದ ಶರ್ಮ ಆರೋಪಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಮಾರು 1.21 ಎಕರೆ ಜಮೀನು ಮೂಲತಃ ನಂಜಯ್ಯ ಹಾಗೂ ಕೆಂಚಯ್ಯ ಅವರಿಗೆ ಸೇರಿದ್ದು, ರಾಜ್ಯಪಾಲರ ಹೆಸರಿಗೆ ಖರೀದಿಸಿ ಪಾಲಿಕೆಗೆ ಹಸ್ತಾಂತರಿಸಲಾಗಿತ್ತು. ಕೆಂಚಯ್ಯ ಅವರ ಪುತ್ರಿ ಸುಂದ್ರಮ್ಮ ಜಮೀನು ಮಾರಾಟದ ವೇಳೆ ತಮ್ಮ ಸಹಿ ಪಡೆದಿಲ್ಲ ಎಂದು ನ್ಯಾಯಾಲಯದ ಮೊರೆ ಹೋಗಿದ್ದ ಹಿನ್ನೆಲೆಯಲ್ಲಿ ಅವರಿಗೆ 10.08 ಗುಂಟೆ ವಾಪಸಿಗೆ ಸೂಚಿಸಲಾಗಿತ್ತು. ಆದರೆ ಅಂದಿನ ತಾಲ್ಲೂಕು ಕಚೇರಿ ಅಧಿಕಾರಿಗಳು ಕ್ರಮದಲ್ಲಿ ಶಾಮೀಲಾಗಿ ಮತ್ತೆ ಕೆಂಚಯ್ಯ ಅವರ ಹೆಸರಿಗೇ ಉಳಿಕೆ ಜಮೀನಿನ ಖಾತೆ ಮಾಡಿಕೊಟ್ಟಿದ್ದಾರೆ ಎಂದು ದೂರಿದರು. ಈ ಬಳಿಕ ಕೆಂಚಯ್ಯ ಅವರ ಪತ್ನಿ ಚೌಡಮ್ಮ, ಪುತ್ರ ದೇವರಾಜು ಹಾಗೂ ಪುತ್ರಿ ಸುಂದ್ರಮ್ಮ ಅವರ ಹೆಸರಿಗೆ ಪೌತಿ ಖಾತೆ ಮಾಡಿಕೊಡಲಾಗಿದೆ. ಇವರಿಂದ ಹಂತ ಹಂತವಾಗಿ ಸೈಯ್ಯದ್ ಫೈಸಲ್, ಫಾಸಿಲ್ ಬೇಗ್, ವಹೀದ್ ಅಖ್ತರ್ ಖಾನ್ ಎಂಬುವವರಿಗೆ ಹಂತ ಹಂತವಾಗಿ ಅಕ್ರಮವಾಗಿ ಇದೇ ಜಮೀನಿಗೆ ಕ್ರಮ ಮಾಡಿಕೊಡಲಾಗಿದೆ. ಈ ಹಿಂದೆ ಪಾಲಿಕೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ ಖಾತೆ ಮಾಡಿಕೊಡಬಾರದೆಂದು ಪತ್ರ ಬರೆದರೂ ನಿರ್ಲಕ್ಷಿಸಲಾಗಿದೆ. ಪಟ್ಟಣ ಪಂಚಾಯಿತಿಯ ಓರ್ವ ಅಧಿಕಾರಿ, ಓರ್ವ ಕಂದಾಯ ನಿರೀಕ್ಷಕರು ಅಕ್ರಮದಲ್ಲಿ ಭಾಗಿಯಾಗಿರುವುದೇ ಇದಕ್ಕೆ ಕಾರಣವಾಗಿದೆ ಎಂದು ಆರೋಪಿಸಿದರು. ಇವರು ನಿವೇಶನ ಮಾಡಿ ನಾಲ್ವರಿಗೆ ಮಾರಾಟ ಮಾಡಿದ್ದಾರೆ. ಇವರು ಕಷ್ಟಪಟ್ಟು ಗಳಿಸಿದ ಹಣ ನಿವೇಶನಕ್ಕೆ ಹಾಕಿ ಈಗ ಅತಂತ್ರರಾಗಿದ್ದಾರೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕು. 10 ದಿನಗಳೊಳಗ ಈ ಕ್ರಮ ಕೈಗೊಳ್ಳದಿದ್ದಲ್ಲಿ ತಾಲ್ಲೂಕು ಪಂಚಾಯಿತಿ ಎದುರು ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು. ಗ್ರಾಮಸ್ಥರಾದ ಸುರೇಶ್, ಚಲುವಯ್ಯ, ಮಹದೇವ್ ಇನ್ನಿತರರು ಇದ್ದರು.

**ಸಾಮಾಜಿಕ ಹೋರಾಟಗಾರ ಅರವಿಂದ ಶರ್ಮ ಎಚ್ಚರಿಕೆ**

# ಕಟ್ಟಡ ನಿರ್ಮಾಣ ಕಾಮಗಾರಿಗೆ ಚಾಲನೆ



**ಕಟ್ಟಡ ಕಾರ್ಮಿಕರ ಮಕ್ಕಳ ವಸತಿಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ**

ಚಾಮರಾಜನಗರ, ತಾಲ್ಲೂಕಿನ ಯಲಕ್ಕೂರು, ಕರಡಿ ಮೋಳೆ ಗ್ರಾಮಗಳಿಗೆ ಸಂಪರ್ಕಿಸುವ ಮದ್ಯೆ ಕಾರ್ಮಿಕ ಇಲಾಖೆ ಅನುದಾನ 25 ಕೋಟಿ ರೂ.ವೆಚ್ಚದಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳ ವಸತಿಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಎಂಎಸ್ಐಎಲ್ ಅಧ್ಯಕ್ಷ. ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ರಾಜ್ಯಸರ್ಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿಯೇ ವಸತಿಶಾಲಾ ಕಟ್ಟಡ ನಿರ್ಮಾಣ ಮಾಡುತ್ತಿದೆ. ಇದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಉಚಿತ ಹಾಗೂ ಗುಣಮಟ್ಟದ ಶಿಕ್ಷಣಕೊಡಿಸಲು ಯಲಕ್ಕೂರು, ಕರಡಿಮೋಳೆ ಮದ್ಯೆ 7 ಎಕರೆ ವಿಸ್ತೀರ್ಣದಲ್ಲಿ 6ರಿಂದ ದ್ವಿತೀಯ ಪಿಯುಸಿ ವರಗೆ 300 ಮಕ್ಕಳು ಓದುವ ವಸತಿಶಾಲೆ ನಿರ್ಮಿಸ ಲಾಗುತ್ತಿದೆ. ಈಗಾಗಲೇ ಚಾಮರಾಜನಗರ ಜಿಲ್ಲೆಂ ಯಲ್ಲಿ ಈಗಾಗಲೇ ಚಾಮರಾಜನಗರ ವಿವಿ ನಿಲಯ, ಕಾನೂನುಕಾಲೇಜು, ಮೆಡಿಕಲ್ ಕಾಲೇಜು, ಕೇಂದ್ರಿಯ ವಿದ್ಯಾಲಯ, ಕೃಷಿವಿಜ್ಞಾನಕಾಲೇಜು ಗಳಿದ್ದು, ಶಿಕ್ಷಣಕ್ಕೆ ಯಾವುದೇ ಕೊರತೆಯಿಲ್ಲ. ಹಾಗಾಗಿ ಜಿಲ್ಲೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಪಡೆಯಲು ಮುಂದಾಗಬೇಕು ಎಂದರು.

ಸಂಬಂಧಪಟ್ಟ ಗುತ್ತಿಗೆದಾರರು ಕಾಲಮಿತಿಯೊಳಗೆ ಸುಸಜ್ಜಿತ ಕಟ್ಟಡ ಕಾರ್ಮಿಕರ ಮಕ್ಕಳ ವಸತಿಶಾಲೆ ನಿರ್ಮಿಸಿಕೊಡಬೇಕು ಎಂದು ಸೂಚನೆ ನೀಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಶಿವಣ್ಣ, ಎಂ. ನಂಜುಂಡ, ಮರಿಸ್ವಾಮಿ, ಪ್ರಕಾಶ್, ಯಲಕ್ಕೂರುಮಧು,ಕೃಷ್ಣ, ಮಹದೇವಸ್ವಾಮಿ, ನವೀನ ಇತರರು ಹಾಜರಿದ್ದರು.

# ಚಾಮರಾಜನಗರದಲ್ಲಿ ಭಗವಾನ್ ಬುದ್ಧ ಭಾವಚಿತ್ರ ಮೆರವಣಿಗೆ



ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಬುದ್ಧ ಪೂರ್ಣಿಮೆ ಅಂಗವಾಗಿ ಭಗ ವಾನ್ ಬುದ್ಧ ಭಾವ ಚಿತ್ರ ಮೆರವಣಿಗೆ ನಗರದಲ್ಲಿ ಅದ್ದೂರಿಯಾಗಿ ನಡೆಯಿತು.

ನಗರದ ಕರಿನಂಜನಪುರ ರಸ್ತೆಯ ಲ್ಲಿರುವ ಸಾರನಾಥ ಬೌದ್ಧ ವಿಹಾರದ ಮುಂಭಾಗದಲ್ಲಿ ಮೆರವಣಿಗೆಗೆ ಎಂಎಸ್ ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಬಳಿಕ ಮೆರವಣಿಗೆ ಸತ್ತಿರಸ್ತೆ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಗೆ ಪುಷ್ಪಾರ್ಚನೆ ಮಾಡಲಾಯಿತು. ಡಾ.ರಾಜ್ ಕುಮಾರ್ ರಂಗಮಂದಿರ ಬಳಿ ಮುಕ್ತಾಯವಾಯಿತು.

ಚಾಲನೆ ನೀಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಗೌತಮ ಬುದ್ಧನ ಸಂದೇಶವು ಮುಖ್ಯವಾಗಿ ಅಹಿಂಸೆ, ಶಾಂತಿ, ಕರುಣೆ ಮತ್ತು ಪ್ರೀತಿಯನ್ನು ಆಧರಿಸಿದೆ. ಜೀವನದಲ್ಲಿನ ದುಃಖ ನಿವಾರಣೆಗೆ ಅಷ್ಟಾಂಗ ಮಾರ್ಗ ಅನುಸರಿಸಲು ಅವರು ಬೋಧಿಸಿದರು ಎಂದರು.

ಮೆರವಣಿಗೆಯಲ್ಲಿ ಸಮತಾ ಸೈನಿ ಕದಳದ ಉಪಾಧ್ಯಕ್ಷ ಮಲ್ಲಿಕ್ ಯಲಕ್ಕೂರು, ಬಿಎಸ್ಐ ಜಿಲ್ಲಾಧ್ಯಕ್ಷ ಆರ್.ಬಸವರಾಜು, ಉಪಾಧ್ಯಕ್ಷ ಉಮೇಶ್ ಕುದರ್, ಸಿ. ಕೆ.ರವಿಕುಮಾರ್, ಮಹಿಳಾ ಶಾಖೆ ಜಿಲ್ಲಾಧ್ಯಕ್ಷೆ ನಾಗಶಿಲ್ಲ, ರಾಮಬಾಯಿ ಫೌಂಡೇಶನ್ ಅಧ್ಯಕ್ಷೆ ಪುಷ್ಪಾಮರಿಸ್ವಾಮಿ, ನೋಟರಿ ನಾಗಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ರಾಜು, ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಸಾಹಿತಿ ಮಂಜುನಾಥ್ ಪ್ರಸನ್ನ, ಸಿ.ಎಂ.ಕೃಷ್ಣ ನಗರಸಭಾ ಮಾಜಿ ಅಧ್ಯಕ್ಷೆ, ಚಿನ್ನಮ್ಮ , ಬ್ಯಾಡಮೂಡ್ಲು ಬಸವಣ್ಣ, ಸೋಮವಾರಪೇಟೆ ಸಿದ್ದರಾಜು, ಎಂ.ಎಸ್.ರವೀಂದ್ರ, ಆನಂದ್ ಇತರರು ಭಾಗವಹಿಸಿದ್ದರು.

**ಗೌತಮ ಬುದ್ಧ ಇಡೀ ವಿಶ್ವಕ್ಕೆ ಶಾಂತಿ, ಅಹಿಂಸೆ, ಸಂದೇಶ ಸಾರಿದ ಮಹಾನ್ ಮಾನವತಾವಾದಿ**
**ಸಿ.ಪುಟ್ಟರಂಗಶೆಟ್ಟಿ ಹೇಳಿಕೆ**

# 8ರಂದು ಬಸವಣ್ಣ ಪುತ್ಥಳಿ ಅನಾವರಣ

## ನಗರಸಭೆ ಆವರಣದಲ್ಲಿ ಸ್ಥಾಪನೆ । ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮಾಹಿತಿ

ರಾಮನಗರ: ಇದೇ ಮೇ 8ರಂದು ನಗರಸಭೆಯ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಆಚರಿಸಲಾಗುವುದು, ಜೊತೆಗೆ ಬಸವಣ್ಣನವರ ಪುತ್ಥಳಿಯನ್ನು ಸ್ಥಾಪಿಸಲಾಗುವುದು ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರಸಭೆ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಇದಕ್ಕೂ ಮುನ್ನ ಅವರು ನಗರಸಭೆ ಸದಸ್ಯರು, ವೀರಶೈವ ಸಮುದಾಯದ ಪ್ರಮುಖರು ಸೇರಿದಂತೆ ವಿವಿಧ ಸಮಾಜದ ಮುಖಂಡರು ಬಸವ ಜಯಂತಿ ಆಚರಣೆ ಕುರಿತು ನೀಡಿದ ಸಲಹೆಗಳನ್ನು ಸ್ವೀಕರಿಸಿದರು.

ವಚನಕಾರರು, ಸಮಾಜ ಸುಧಾರಕರು, ಶ್ರೇಷ್ಠ ದಾರ್ಶನಿಕರು ಆಗಿರುವ ವಿಶ್ವಗುರು ಬಸವಣ್ಣ ಅವರ ಪುತ್ಥಳಿಯನ್ನು ಸಿದ್ದಗಂಗಾ ಮತ್ತು ಸುತ್ತೂರು ಶ್ರೀಗಳಿಂದ ಅನಾವರಣಗೊಳಿಸಲಾಗುವುದು, ಈ ವಿಚಾರದಲ್ಲಿ ಅವರನ್ನು ಆಹ್ವಾನಿಸಲಾಗಿದೆ ಎಂದರು.

ಸದರಿ ಕಾರ್ಯಕ್ರಮಕ್ಕೆ ಬೇವೂರು ಮಠದ ಸ್ವಾಮೀಜಿಗಳನ್ನು ಸಹ ಭೇಟಿ ಮಾಡಿ ಆಹ್ವಾನಿ ಸಲಾಗಿದೆ. ನಗರಸಭೆ ಸದಸ್ಯರ ಸಹಕಾರದಲ್ಲಿ ಅರ್ಥ ಪೂರ್ಣವಾಗಿ ಜಯಂತಿ ಆಚರಿಸುವ ಮೂಲಕ ಅವರಿಗೆ ಗೌರವಿಸುವ ಕೆಲಸ ಮಾಡಲು ತೀರ್ಮಾ ನಿಸಿದ್ದೇವೆ. ತಮ್ಮೆಲ್ಲರ ಸಹಕಾರದಲ್ಲಿ ಎಲ್ಲ ವರ್ಗದ ವರನ್ನು ಜೋಡಿಸಿ ಕಾರ್ಯಕ್ರಮವನ್ನು ಯಶಸ್ವಿಗೊ ಳಿಸಲು ಶ್ರಮಿಸೋಣ ಎಂದು ತಿಳಿಸಿದರು.

ಅನುಭವ ಮಂಟಪದ ಮೂಲಕ ಜಗತ್ತಿನ ಮೊದಲ ಸಂಸತ್ತಿನ ಪರಿಕಲ್ಪನೆ ನೀಡಿ, ಶರಣರ ವೈಚಾರಿಕ ಬಸವಣ್ಣರವರ ಕ್ರಾಂತಿ ಕಲ್ಪನೆಗೂ ಮೀರಿದ್ದು, ಅವರ ವಚನಗಳು ಇಂದು ಮಾತ್ರವಲ್ಲದೆ ಎಂದೆಂದಿಗೂ ಪ್ರಸ್ತುತವಾಗಿವೆ. ಸೂರ್ಯ ಚಂದ್ರ ಇರುವರೆಗೂ ಅವರ ಚಿಂತನೆಗಳು ಇರುತ್ತವೆ. ಬಸವಣ್ಣರವರ ತತ್ವಗಳನ್ನು ಅನುಸರಿಸಿ ನಡೆದರೆ ಶ್ರೇಷ್ಠ ಜೀವನ ನಡೆಸಲು ಸಾಧ್ಯವಾಗಲಿದೆ ಎಂದು ಕೆ.ಶೇಷಾದ್ರಿ ತಿಳಿಸಿದರು.



### ಪುತ್ಥಳಿ ಸ್ಥಾಪನೆ ಸಂತಸದ ಸಂಗತಿ – ರಾಜಶೇಖರ್

ರಾ – ಚ ನಗರಾಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ರಾಜಶೇಖರ್ ಮಾತನಾಡಿ, ವೀರಶೈವ ಸಮಾಜದವರು ಬಸವಣ್ಣನವರ ಪುತ್ಥಳಿ ಪ್ರತಿಷ್ಠಾಪನೆ ಮಾಡುವ ಕುರಿತು ಚರ್ಚೆ ನಡೆಸುತ್ತಿತ್ತು. ಆದರೆ, ಯಾವ ಜಾಗದಲ್ಲಿ ಪುತ್ಥಳಿ ಸ್ಥಾಪನೆ ಮಾಡಬೇಕೆಂಬ ಗೊಂದಲ ಇತ್ತು. ಆದರೀಗ ನಗರಸಭೆ ಆವರಣದಲ್ಲಿ ಬಸವಣ್ಣರ ಪುತ್ಥಳಿ ಸ್ಥಾಪನೆಗೆ ಮಾಡುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು. ಸಮಾಜದ ಎಲ್ಲ ವರ್ಗದ ಜನರ ಆಶಯಗಳನ್ನು ಈಡೇರಿಸುವ ಜೊತೆಗೆ ನಗರಸಭೆ ಮೂಲಕ ಮಾದರಿ ಕಾರ್ಯಗಳನ್ನು ಕೆ.ಶೇಷಾದ್ರಿ ಮಾಡುತ್ತಿದ್ದಾರೆ. ಈ ಕಾರ್ಯ ಅವರನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ಅವರ ಪ್ರತಿ ಕಾರ್ಯಗಳಿಗೆ ನಾವು ಕೈಜೋಡಿಸುತ್ತೇವೆ ಎಂದು ತಿಳಿಸಿದರು.

ವೀರಶೈವ ಸಮಾಜದ ಮುಖಂಡ ಚಂದ್ರಶೇಖರ್ ಮಾತನಾಡಿ, ನಗರಸಭೆ ಅಧ್ಯಕ್ಷರಾಗಿ ಕೆ.ಶೇಷಾದ್ರಿರವರು ಎಲ್ಲ ವರ್ಗದ ಜನರನ್ನು ಜೊತೆಯಲ್ಲಿ ಕೊಂಡೊಯ್ಯುವ ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯವೈಖರಿ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ನಗರಸಭೆ ಸದಸ್ಯರಾದ ಅಜ್ಮತ್ ಉಲ್ಲಾ ಖಾನ್, ವಿಜಯ ಕುಮಾರಿ, ಪಾರ್ವತಮ್ಮ, ನಾಗಮ್ಮ, ಆಯುಕ್ತ ಜಯಣ್ಣ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ತಾಲೂಕು ಅಧ್ಯಕ್ಷ ಪೋಲೀಸ್ ಶಂಕರಪ್ಪ, ಮುಖಂಡರಾದ ಎಂ. ಆರ್.ಶಿವಕುಮಾರ ಸ್ವಾಮಿ, ಗುರುವೇಗೌಡ, ನಾಗರಾಜು, ಎ. ಜೆ. ಸುರೇಶ್, ವೇದಮೂರ್ತಿ, ಚಿಕ್ಕೇನಹಳ್ಳಿನಾಗರಾಜು, ವಿಜಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

### ಸರ್ವ ಸಮಾಜದ ನಾಯಕ ಶೇಷಾದ್ರಿ: ಯೋಗಾನಂದ

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಜಿಲ್ಲಾಧ್ಯಕ್ಷ ಎಚ್.ಎಸ್. ಯೋಗಾನಂದ ಮಾತನಾಡಿ, ಎಲ್ಲ ವರ್ಗದವ ರನ್ನು ಪ್ರೀತಿಸಿ ಜೊತೆಯಲ್ಲಿ ಕರೆದೊಯ್ಯುವ ಕೆ.ಶೇಷಾದ್ರಿರವರು ಸರ್ವ ಸಮಾಜದ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ನಗರಸಭೆ ಆವರಣದಲ್ಲಿ ಬಸವಣ್ಣರ ಪುತ್ಥಳಿ ಪ್ರತಿಷ್ಠಾಪನೆ ಮಾಡುವ ನಿರ್ಧಾರ ಕೈಗೊಂಡಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಜಗಜ್ಯೋತಿ ಬಸವಣ್ಣನವರನ್ನು ಒಂದು ವರ್ಗಕ್ಕೆ ಸೀಮಿತ ಮಾಡುವುದು ಬೇಡ. ಈ ಕಾರ್ಯಕ್ರಮದಲ್ಲಿ ಎಲ್ಲ ವರ್ಗದ ಜನರು ಪಾಲ್ಗೊಳ್ಳುವಂತೆ ಮಾಡಬೇಕಿದೆ. ಎಲ್ಲರೂ ಒಂದೇ ಎನ್ನುವ ವಾತಾವರಣವನ್ನು ಬಸವ ಜಯಂತಿ ಕಾರ್ಯಕ್ರಮದಲ್ಲಿ ಸೃಷ್ಟಿ ಮಾಡುವಂತೆ ಮನವಿ ಮಾಡಿದರು.


# ಕೆಸರಿನಲ್ಲಿ ಸಿಲುಕಿ ನಿತ್ರಾಣ ಗೊಂಡಿದ್ದ ಕಾಡಾನೆ ಸಾವು

ಚಾಮರಾಜನಗೆ, ನೀರು ಕುಡಿಯಲು ಬಂದು ಕೆಸರಿನಲ್ಲಿ ಸಿಲುಕಿಕೊಂಡು ನಿತ್ರಾಣಗೊಂಡಿದ್ದ ಹೆಣ್ಣಾನೆ ಚಿಕಿತ್ಸೆಗೆ ಸ್ಪಂದಿಸದೆ ಇತ್ತೀಚಿಗೆ ಕೊನೆಯುಸಿರಳೆದಿತ್ತು. ಮಲೆ ಮಹದೇಶ್ವರ ವನ್ಯಜೀವಿಧಾಮದ ಬಫರ್ ವಲಯದ ಹನೂರು ತಾಲೂಕಿನ ಅಜ್ಜೀಪುರ ಸಮೀಪದ ಉಡುತೊರೆ ಹಳ್ಳ ಜಲಾಶಯಕ್ಕೆ ಕಾಡಾನೆಗಳು ನೀರು ಕುಡಿಯಲು ಎಂದಿನಂತೆ ಬಂದಿದ್ದವು. ಈ ಪೈಕಿ 3 ಕಾಡಾನೆಗಳು ಕೆಸರಿನಲ್ಲಿ ಸಿಲುಕಿಕೊಂಡಿದ್ದವು. ಈ ವಿಚಾರ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಉಡು ತೊರೆ ಹಳ್ಳ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಗ್ನಿಶಾಮಕ ದಳದ ಸಿಬ್ಬಂದಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ಮೂರು ಆನೆಗಳನ್ನು ರಕ್ಷಣೆ ಮಾಡಿದ್ದರು.

ಎರಡು ಆನೆಗಳು ಚೇತರಿಸಿಕೊಂಡು ಕಾಡಿನತ್ತ ತೆರಳಿದರೇ ಒಂದಾನೆ ಮಾತ್ರ ತೀವ್ರವಾಗಿ ನಿತ್ರಾಣಗೊಂಡಿತ್ತು. ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಪಶುವೈದ್ಯಾಧಿಕಾರಿ ಡಾ. ರಮೇಶ್ ನಿರಂತರವಾಗಿ ಚಿಕಿತ್ಸೆ ಕೊಟ್ಟರೂ ಜೊತೆಗೆ ಸಾಕಾನೆ ಮಹೇಂದ್ರನನ್ನು ಬಿಟ್ಟು ಅಸ್ವಸ್ಥಗೊಂಡಿರುವ ಆನೆಯನ್ನು ಮೇಲೆಳಿಸಲು ಅರಣ್ಯ ಇಲಾಖೆ ಸಿಬ್ಬಂದಿಗಳು ಇನ್ನಿಲ್ಲದ ಪ್ರಯತ್ನ ಮಾಡಿದರು ಕೂಡ ಚೇತರಿಕೆ ಕಾಣಲಿಲ್ಲ. ಆನೆಗೆ ಇಷ್ಟವಾದ ಕಬ್ಬು, ಕಲ್ಲಂಗಡಿ ಹಣ್ಣು ಸೇರಿದಂತೆ ಇನ್ನಿತರ ಮೇವುಗಳನ್ನು ಸ್ಥಳದಲ್ಲಿ ಇಡಲಾಗಿದ್ದರೂ ಆನೆ ಮಾತ್ರ ಮೇಲೆಳದೇ ಮೃತಪಟ್ಟಿತ್ತು. ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಪಶು ವೈದ್ಯಾಧಿಕಾರಿ ಡಾ. ರಮೇಶ್ ನೇತೃತ್ವದಲ್ಲಿ ನಿತ್ರಾಣಗೊಂಡಿದ್ದ ಕಾಡಾನೆಗೆ ಸಾಕಷ್ಟು ಔಷಧೋಪಚಾರಗಳು ನಡೆಯುತ್ತಿತ್ತು. ಮೂರು ದಿನಗಳಿಂದ ನಿರಂತರವಾಗಿ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು. ಸ್ಥಳದಲ್ಲಿಯೇ ಆನೆಗೆ ಬೇಕಾದಂತಹ ಪೌಷ್ಟಿಕ ಆಹಾರ ಸಹಿತವಾಗಿ ವೈದ್ಯಾಧಿಕಾರಿಗಳು ಕೂಡ ಅಲ್ಲೇ ಮೊಕ್ಕಾಂ ಹೂಡಿದ್ದರು. ಆದರೆ ಚಿಕಿತ್ಸೆ ಫಲಿಸದೆ ಆನೆ ಕೊನೆ ಉಸಿರಳೆದಿದೆ ಎಂದು ಮಲೆ ಮಹದೇಶ್ವರ ವನ್ಯಜೀವಿಧಾಮದ ಡಿಸಿಎಫ್ ತಿಳಿಸಿದ್ದಾರೆ.

# ಚಾಮರಾಜನಗರ: ಸಫಾರಿಯಲ್ಲಿ ಕರಿ ಚಿರತೆ ಬಳಿಕ ಬಿಳಿ ಜಿಂಕೆ ದರ್ಶನ

**ಪ್ರವಾಸಿಗರು ಫಿಧಾ**



ಚಾಮರಾಜನಗರ, ಮಲೆ ಮಹದೇಶ್ವರ ವನ್ಯಜೀವಿಧಾಮದ ಸಫಾರಿಯಲ್ಲಿ ಪ್ರಾಣಿಗಳು ದರ್ಶನ ನೀಡುತ್ತಿದ್ದು, ಸಫಾರಿಗರು ಸಖತ್ ಖುಷ್ ಆಗಿದ್ದಾರೆ. ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಪಿ.ಜಿ. ಪಾಳ್ಯ ಸಫಾರಿಯಲ್ಲಿ ಕೆಲವು ದಿನಗಳ ಹಿಂದೆಯಷ್ಟೇ ಕರಿ ಚಿರತೆ ದರ್ಶನ ಕೊಟ್ಟಿತ್ತು. ಅದಾದ ಬಳಿಕ, ಸತತ ಎರಡು ದಿನ ಮತ್ತೆ ಬ್ಲ್ಯಾಕ್ ಫ್ಯಾಂಥರ್ ಕಂಡು ಪ್ರವಾಸಿಗರು ಪುಳಕಿತಗೊಂಡಿದ್ದರು.

ನಾಗರಹೊಳೆ ಸಫಾರಿಯಲ್ಲಿ ಮಾತ್ರ ಕರಿ ಚಿರತೆ ಕಾಣಿಸಿಕೊಳ್ಳುತ್ತಿತ್ತು. ಆದರೆ ಕಳೆದ 4 ದಿನಗಳಿಂದ ಪಿ.ಜಿ. ಪಾಳ್ಯ ಸಫಾರಿಯಲ್ಲೂ ಕರಿ ಚಿರತೆ ದರ್ಶನ ನೀಡಿದ್ದರಿಂದ ಪ್ರವಾಸಿಗರು ಕಳೆದ ಮಂಗಳವಾರದಂದು ಕರಿ ಚಿರತೆ ಜೊತೆ ಮತ್ತೊಂದು ಚಿರತೆ ಚಿನ್ನಾಟ ಆಡುತ್ತಿದ್ದ ದೃಶ್ಯವನ್ನು ಸಫಾರಿಗರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಕರಿ ಚಿರತೆ ಬಳಿಕ ಬಿಳಿ ಜಿಂಕೆ ದರ್ಶನ: ಕರಿ ಚಿರತೆ ಬಳಿಕ ಶುಕ್ರವಾರದಂದು ಬಿಳಿ ಜಿಂಕೆ ಕಾಣಿಸಿಕೊಂಡಿದ್ದು, ಸಫಾರಿಗರು ರೋಮಾಂಚಿತರಾಗಿದ್ದಾರೆ. ಮಲೆ ಮಹದೇಶ್ವರ ವನ್ಯಜೀವಿಧಾಮದ ಹನೂರು ಬಫರ್ ಜೋನ್ ವಲಯದ ವ್ಯಾಪ್ತಿಯಲ್ಲಿ ಸಫಾರಿಗೆ ತೆರಳಿದ್ದ ವೇಳೆ ಬಿಳಿ ಜಿಂಕೆ ಕಂಡು ಪ್ರವಾಸಿಗರು ಪುಳಕಿತರಾಗಿದ್ದಾರೆ. ವನ್ಯಜೀವಿ ಸಫಾರಿಯಲ್ಲಿ ಆನೆ, ಹುಲಿ, ಕಾಡೆಮ್ಮೆಗಳನ್ನು ಕಣ್ತುಂಬಿಕೊಳ್ಳುತ್ತಿದ್ದ ಸಫಾರಿಗರು ಈಗ ಕರಿ ಚಿರತೆ, ಬಿಳಿ ಜಿಂಕೆಯಂತ ಅಪರೂಪದ ಸೈಟಿಂಗ್‌ಗೆ ಫಿದಾ ಆಗಿದ್ದಾರೆ.

# ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಗೆ ಖಂಡನೆ

ಮೈಸೂರು: ಪಂಚ ರಾಜ್ಯ ಚುನಾವಣೆ ಮುಕ್ತಾಯದ ಬೆನ್ನಲ್ಲೇ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 993 ಏರಿಕೆ ಮಾಡಿ, ಕೇಂದ್ರ ಸರ್ಕಾರ ನರಿ ಬುದ್ಧಿಯನ್ನ ಮತ್ತೊಮ್ಮೆ ಪ್ರದರ್ಶಿಸಿದೆ. ವಿಶ್ವಗುರುವಿನ 56 ಇಂಚಿನ ಎದೆಯಲ್ಲಿ ಒಂದಿಂಚೂ ಕರುಣೆ ಅನ್ನೋದು ಇರುವುದಿಲ್ಲ ಎಂದು ಗೊತ್ತಾಗುತ್ತಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದರು.



ಕೇಂದ್ರದಿಂದ ವಾಣಿಜ್ಯ ಎಲ್‌ಪಿಜಿ ದರ ಏರಿಕೆಯ ನಡೆಯನ್ನು ತೀವ್ರವಾಗಿ ಖಂಡಿಸಿ ಮಾತನಾಡಿದರು. ಸ್ವಾತಂತ್ರ್ಯ ಬಂದ 79 ವರ್ಷಗಳಲ್ಲಿ ಯಾವ ಸರ್ಕಾರವೂ ಈ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಿರಲಿಲ್ಲ. ಇದು ಸುಲಿಗೆಯಲ್ಲ, ಕೇಂದ್ರ ಸರ್ಕಾರ ಬಕಾಸುರನಂತೆ ಜನರ ಜೀವ ಹಾಗೂ ಜೀವನವನ್ನೇ ನುಂಗುತ್ತಿದೆ. ಕೇಂದ್ರ ಸರ್ಕಾರದ ಜನ ವಿರೋಧಿ ನೀತಿ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹೆಚ್ಚಿಸಿದೆ ಎಂದು ವಾಗ್ದಾಳಿ ನಡೆಸಿದರು.

ಚುನಾವಣೆ ಅವಧಿಯಲ್ಲಿ ಮೋದಿ ಸರ್ಕಾರವು ಉದ್ದೇಶಪೂರ್ವಕವಾಗಿ ವಾಣಿಜ್ಯ ಬಳಕೆಯ ಗ್ಯಾಸ್ ಬೆಲೆ ಏರಿಕೆಯನ್ನು ತಡೆದಿತ್ತು. ಮೊದಲೇ ಬೆಲೆ ಏರಿಕೆ ಮಾಡಿದ್ದರೆ ಸೋಲು ಕಟ್ಟಿಟ್ಟ ಬುತ್ತಿ ಎಂಬುದನ್ನು ಅರಿತಿದ್ದ ಮೋದಿ ಸರ್ಕಾರ ಈಗ ಏರಿಕೆ ಮಾಡಿ ಜನರ ರಕ್ತ ಹೀರುತ್ತಿದೆ. ಕೇವಲ 4 ತಿಂಗಳ ಅವಧಿಯಲ್ಲಿ ಮೋದಿ ಸರ್ಕಾರ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು 6 ಬಾರಿ ಏರಿಕೆ ಮಾಡಿದ್ದು, ಒಟ್ಟು 1,518 ಹೊರೆಯನ್ನು ಬಳಕೆದಾರರ ಮೇಲೆ ಹೊರಿಸಿದೆ. ಇದೊಂದು ರೀತಿ ಯಲ್ಲಿ ಅಧಿಕೃತ ಲೂಟಿಯೇ ಹೊರತು ಆಡಳಿತದ ಕ್ರಮವಲ್ಲ ತಿಳಿದಿದ್ದಾರೆ.

ಈ ಹಿಂದೆ ಗೃಹಬಳಕೆಯ ಗ್ಯಾಸ್ ಬೆಲೆ 450 ರೂ. ಇತ್ತು, ಈಗ ಸಾವಿರ ರೂಪಾಯಿ ಕೊಟ್ಟರೂ ಸಿಗುತ್ತಿಲ್ಲ. ಖಾಸಗಿ ಕಂಪನಿಗಳು ತೈಲ ಬೆಲೆಯನ್ನು ಏರಿಕೆ ಮಾಡಿವೆ. ಈಗ ವಾಣಿಜ್ಯ ಎಲ್‌ಪಿಜಿ ಬೆಲೆ ಏರಿಕೆಯಿಂದ ಹೋಟೆಲ್‌ನಲ್ಲಿ ಆಹಾರಗಳ ಬೆಲೆಯೂ ಹೆಚ್ಚಾಗಲಿದೆ. ಫುಟ್‌ಪಾತ್ ಅಂಗಡಿಗಳನ್ನೇ ಅವ ಲಂಬಿಸಿರುವ ಗ್ರಾಹಕರ ಜೇಬಿಗೂ ಕತ್ತರಿ ಬೆಳಲಿದೆ. ಎಂದು ಹೇಳಿದರು.

# ಕಾರ್ಮಿಕ ದಿನಾಚರಣೆ: ಅಂಗನವಾಡಿ ಮಕ್ಕಳಿಗೆ ನೋಟ್ ಪುಸ್ತಕ, ಸಿಹಿ ವಿತರಣೆ




ಚಾಮರಾಜನಗರ,ಕಾರ್ಮಿಕ ದಿನಾಚರಣೆ ಅಂಗ ವಾಗಿ ಜಿಲ್ಲಾ ದಿನಸಿ ಮತ್ತು ಜವಳಿ ಅಂಗಡಿಗಳ ಕೂಲಿ ಕಾರ್ಮಿಕ ರ ಸಂಘದ ವತಿಯಿಂದ ನಗರದ 18ನೇ ವಾರ್ಡ್ ನ ಉಪ್ಪಾರ ಬೀದಿಯ 1ನೇ ಅಂಗನವಾಡಿ ಕೇಂದ್ರದ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು, ಸಿಹಿ ವಿತರಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಚೆನ್ನಶೆಟ್ಟಿ ನೋಟ್ ಪುಸ್ತಕ ವಿತರಿಸಿ ಮಾತನಾಡಿ, ಪ್ರತಿ ವರ್ಷವೂ ಕಾರ್ಮಿಕ ದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಿಕೊಂಡು ಬರುತ್ತಿದ್ದು, ಈ ಬಾರಿಯೂ ಅಂಗನವಾಡಿ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು , ಸಿಹಿ ವಿತರಿಸುವ ಮೂಲಕ ನಮ್ಮ ಸಂಘದ ವತಿಯಿಂದ ಆಚರಣೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯ ಕರ್ತೆ ರಾಜೇಶ್ವರಿ, ಸಹಾಯಕಿರಾದ ರತ್ನಮ್ಮ, ಮಹದೇವಮ್ಮ ಇತರರು ಹಾಜರಿದ್ದರು.

# ಕೆಂಪನಕಟ್ಟೆ ಕೆರೆಯಲ್ಲಿ ವ್ಯಕ್ತಿ ಶವ ಪತ್ತೆ

ಗುಂಡ್ಲುಪೇಟೆ: ತಾಲೂಕಿನ ತೆರಕಣಾಂಬಿ–ಕಿಲಗೆರೆ ಮಾರ್ಗ ಮಧ್ಯದಲ್ಲಿ ರುವ ಕೆಂಪನಕಟ್ಟೆ ಕೆರೆಯಲ್ಲಿ ವ್ಯಕ್ತಿಯ ಶವವೊಂದು ಪತ್ತೆಯಾಗಿದೆ.



ಚಾಮರಾಜನಗರ ತಾಲೂಕಿನ ಕಿಲಗೆರೆ ಗ್ರಾಮದ ರಾಜೇಶ್(29) ಮೃತಪಟ್ಟಿರುವ ವ್ಯಕ್ತಿ ಎಂದು ಗುರುತಿಸಲಾಗಿದೆ.

ಘಟನಾ ಸ್ಥಳಕ್ಕೆ ತೆರಕಣಾಂಬಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದು, ಎರಡು ಮೂರು ದಿನಗಳ ಹಿಂದೆಯೇ ಕೆರೆಗೆ ಬಿದ್ದು ಮೃತಪಟ್ಟಿರಬಹುದು ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

**ಡಾ.ಪಿ.ದೇವರಾಜು ಹೇಳಿಕೆ । ಕರಿನಂಜನಪುರದಲ್ಲಿ ಭಗವಾನ್‌ಬುದ್ಧ, ಅಂಬೇಡ್ಕರ್ ಜಯಂತಿ ಆಚರಣೆ**

# ಬುದ್ಧ, ಅಂಬೇಡ್ಕರ್ ಸಂದೇಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಿ

ಚಾಮರಾಜನಗರ, ಸಮಾನತೆಗಾಗಿ ಶ್ರಮಿಸಿದ ಬುದ್ಧ, ಅಂಬೇಡ್ಕರ್ ಸಂದೇಶಗಳನ್ನು ಎಲ್ಲರೂ ಅಳವಡಿಸಿ ಕೊಳ್ಳಬೇಕು ಎಂದು ಭೋಗಾಪುರ ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗಗಳ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ. ಪಿ.ದೇವರಾಜು ಹೇಳಿದರು.




ನಗರದ 10ನೇ ವಾರ್ಡನ ಕರಿನಂಜನಪುರ ಬಡಾವಣೆಯ ಶ್ರೀಮಂಟೇಸ್ವಾಮಿ ದೇವಸ್ಥಾನದ ಮುಂಭಾಗದದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜನ್ಮದಿನಾಚರತೆ ಹಾಗೂ 2570ನೇ ಬುದ್ಧ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸರ್ವರನ್ನು ಒಳಗೊಂಡ ಸಮ ಸಮಾಜ ನಿರ್ಮಾಣಕ್ಕಾಗಿ ಬುದ್ಧ, ಬಸವ, ಅಂಬೇ ಡ್ಕರ್ ಅವರ ನೀಡಿರುವ ಜೀವನ ಸಂದೇಶ, ಮೌಲ್ಯ ಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಅಂಬೇ ಡ್ಕರ್ ಅವರ ಪರಿಶ್ರಮ ಅಧ್ಯಯನ ಶೀಲತೆ, ಸಾಧನೆ ಯ ಜೀವನ ಮಾದರಿಯಾಗಿದೆ ಎಂದರು.ಪ್ರಜಾಪ್ರ ಭುತ್ವಕ್ಕೆ ಸಂವಿಧಾನವೇ ಅಡಿಪಾಯ. ಸಂವಿಧಾನ ದಿಂದ ಭಾರತದ ಪ್ರಜಾಪ್ರಭುತ್ವದ... ಬೇರುಗಳು ಬಲವಾಗಿವೆ. ದೇಶದಲ್ಲಿರುವವಷ್ಟು ಸ್ವಾತಂತ್ರ್ಯ ಬೇರೆ ಯಾವ ದೇಶದಲ್ಲೂ ಇಲ್ಲ... ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಘನತೆಯನ್ನು ಅಂಬೇಡ್ಕರ್ ಅವರು ಬರೆದಿರುವ ಕೊಟ್ಟಿರುವ ಸಂವಿಧಾನ ಎತ್ತಿ ಹಿಡಿದಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾದ ಅಧ್ಯಕ್ಷ ಸಿ.ಎನ್. ಉಮೇಶ್‌ಕುದರ್ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೇರೆಬೇರೆ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಭಾರತದೇಶಕ್ಕೆ ಒಂದು ಶ್ರೇಷ್ಠ ಸಂವಿಧಾನವನ್ನು ಬರೆದುಕೊಡುವ ಮೂಲಕ ದೇಶದಲ್ಲಿ ವಾಸಿಸುವ ಪ್ರತಿ ನಾಗರಿಕನಿಗೂ ಸಮಾನತೆ ಕಲ್ಪಿಸಿಕೊಟ್ಟಿದ್ದಾರೆ ಎಂದರು. ಚಿಂತಕ ಡಾ.ಬಿ.ಆರ್.ಕೃಷ್ಣಕುಮಾರ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು 1956 ಅ.14 ರಂದು ನಾಗ್ಪುರದಲ್ಲಿ ಸುಮಾರು 5 ಲಕ್ಷ ಅನುಯಾ ಯಿಗಳೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ತತ್ವಗಳನ್ನು ಒಳಗೊಂಡಿದ್ದರಿಂದ ಅವರು ಬೌದ್ಧ ಧರ್ಮವನ್ನು ಆರಿಸಿಕೊಂಡರು. ಬುದ್ಧ, ಅಂಬೇಡ್ಕರ್ ಅವರ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡರೆ ನೆಮ್ಮದಿ ಜೀವನ ಸಾಧ್ಯ ಎಂದರು. ಪ್ರಥಮ ದರ್ಜೆ ಗುತ್ತಿಗೆದಾರ ಚನ್ನಪ್ಪ, ಸ್ವಾಗತಿಸಿದರು. ಅರಣ್ಯ ಇಲಾಖೆ ವಲಯಾಧಿ ಕಾರಿ ರಾಜೇಂದ್ರ, ಯಜಮಾನರಾದ ಶಿವಮೂರ್ತಿ ಮಹೇಶ್, ಮಂಟಯ್ಯ, ಮುಖಂಡರಾದ ಪರಮೇಶ್, ಬಸವಣ್ಣ, ಚಿನ್ನಸ್ವಾಮಿ, ನಾರಾಯಣ್, ಸಿದ್ದಯ್ಯಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘದವರು, ಸರ್ಕಾರಿ ನೌಕರರು, ಮಹಿಳಾ ಸಂಘದವರು, ಗ್ರಾಮಸ್ಥರು ಭಾಗವಹಿಸಿದ್ದರು.

ವರ್ತಮಾನ

ಭಾನುವಾರ
ಮೇ 3, 2026

# ಶ್ರೀ ಕಾಳಿಕಾಂಬ ದೇವಸ್ಥಾನದ 14ನೇ ವರ್ಷದ ವಾರ್ಷಿಕೋತ್ಸವ:

## ಹೋಮ, ವಿಶೇಷ ಅಭಿಷೇಕ ಮತ್ತು ಅನ್ನ ಸಂತರ್ಪಣೆ



ಚಾಮರಾಜನಗರ, ನಗರದ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಕಮತೇಶ್ವರ ಸ್ವಾಮಿ ಸಮೇತ ಶ್ರೀ ಕಾಳಿಕಾಂಬ ದೇವಸ್ಥಾನದ 14ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ದೇವಿಗೆ ಹಾಗೂ ಪರಿವಾರ ದೇವತಾ ಮೂರ್ತಿಗಳಿಗೆ ವಿಶೇಷ ಪೂಜೆ, ಹೋಮ ಹವನ, ವಿಶೇಷ ಅಲಂಕಾರದೊಂದಿಗೆ ಪೂಜಾ ಕೈಂಕರ್ಯಗಳು ನಡೆದವು.

ಪ್ರಾತಃಕಾಲದ ಬ್ರಾಹ್ಮಿ ಮುಹೂರ್ತದಲ್ಲಿ ಲೋಕಾ ಕಲ್ಯಾಣಾರ್ಥವಾಗಿ ಗಂಗೆ ಪೂಜೆ, ಆಲಯ ಪ್ರವೇಶ, ಗಣೇಶ ಪೂಜೆ, ಪ್ರಾಯಶ್ಚಿತ ಹಾಗು ಶಾಂತಿ ಹೋಮ, ದುರ್ಗಾ ಹೋಮ ನಡೆದವು. ನಂತರ ಪೂರ್ಣಹುತಿ, ಕುಂಭಾಭಿಷೇಕ, ಶ್ರೀ ಮಹಾಗಣಪತಿ, ಶ್ರೀ ಕಾಳಿಕಾಂಬ ಶ್ರೀ ಕಮತೇಶ್ವರಸ್ವಾಮಿ, ಶ್ರೀಚಕ್ರ, ಶ್ರೀ ಸುಬ್ರಮಣ್ಯಸ್ವಾಮಿ, ಶ್ರೀ ಅಂಜನೇಯಸ್ವಾಮಿ, ಮತ್ತು ಪರಿವಾರ ದೇವತಾ ಮೂರ್ತಿಗಳಿಗೆ ಅಭಿಷೇಕಗಳೊಂದಿಗೆ ನಂಜನಗೂಡಿನ ಜುಂಜುವೀರಚಾರ್ ತಂಡದವರಿಂದ ಪೂಜಾ ಕೈಂಕರ್ಯಗಳು ನಡೆದವು.

ವಾರ್ಷಿಕೋತ್ಸವ ಅಂಗವಾಗಿ ದೇವಸ್ಥಾನ ಒಳಾವರಣವನ್ನು ವಿಶೇಷ ಹೂವುಗಳಿಂದ ಆಲಂಕಾರ ಗೊಳಿಸಲಾಗಿತ್ತು. ಶ್ರೀ ಕಮತೇಶ್ವರ ಸ್ವಾಮಿ ಸಮೇತ ಕಾಳಿಕಾಂಬ ದೇವಿಗೆ ವಿಶೇಷ ಹೂವಿನ ಅಲಂಕಾರದೊಂದಿಗೆ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಶ್ರೀ ಕಾಳಿಕಾಂಬ ಭಜನಾ ಮಂಡಲಿ ವತಿಯಿಂದ ಭಜನಾ, ಲಲಿತಾ ಸಹಸ್ರಾನಮ ಪಾರಾಯಣ ನಡೆಯಿತು. ಮಧ್ಯಾಹ್ನ ಮಹಾಮಂಗಳಾರತಿಯೊಂದಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮ್ಯಾನೇಜಿಂಗ್ ಟ್ರಸ್ಟ್ ಎಸ್. ನಂದೀಶ್, ಅಧ್ಯಕ್ಷರಾದ ಮುರುಗೇಶ್, ಸಹ ಕಾರ್ಯದರ್ಶಿ ಸುಂದರ್, ಟ್ರಸ್ಟಿಗಳಾದ ಗಣೇಶ್, ಸುಂದರ್, ವಿಜಯಕುಮಾರ್, ಚನ್ನವೀರಯ್ಯ, ವಿಶ್ವಕರ್ಮ ಸಮಾಜದ ಯಜಮಾನರಾದ ಅನಂತಕುಮಾರ್, ಹಾಗು ಸಮಾಜದ ಮುಖಂಡರಾದ ಕಾಶಿನಾಗೇಂದ್ರಪ್ರಸಾದ್, ಸುರೇಶ್, ಆರ್.ಸಿ. ನಾಗರಾಜಚಾರ್ಯ, ನಾಗರಾಜು, ರವಿಕುಮಾರ್, ಸುಬ್ರಮಣ್ಯ, ನಾಗೇಂದ್ರನ್, ಮಿತ್ರೇಶ್, ಪ್ರಸನ್ನಕುಮಾರ್, ನಾಗೇಂದ್ರಬಾಬು, ಮಹೇಶ್, ಶ್ರೀನಿವಾಸಪ್ರಸಾದ್, ಶ್ರೀಕಾಂತ್, ಪ್ರದೀಪ್, ಲೀಲಾವತಿ ಶಂಕರ್, ಶಶಿರೇಖಾ, ರೂಪ, ಸೌಮ್ಯ, ನಂದಿತಾ, ನಾಗಲಕ್ಷ್ಮಿ, ಚೈತ್ರ, ಮಂಜುಳಾ, ಕಲ್ಯಾಣ , ಆಶಾ, ರಾಜೇಶ್ವರಿ, ದೀಪಾ, ಆಶ್ವಿನಿ, ರುಕ್ಷ್ಮಿಣ , ಜ್ಯೋತಿ, ಕಾಳಿಕಾಂಬ ದೇವಿಯ ಭಕ್ತರು ಮೊದಲಾದವರು ಇದ್ದರು.

# ದೇವಸ್ಥಾನದ 14ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ



ಚಾಮರಾಜನಗರ, ನಗರದ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಕಮತೇಶ್ವರ ಸ್ವಾಮಿ ಸಮೇತ ಶ್ರೀ ಕಾಳಿಕಾಂಬ ದೇವಸ್ಥಾನದ 14ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ದೇವಿಗೆ ಹಾಗೂ ಪರಿವಾರ ದೇವತಾ ಮೂರ್ತಿಗಳಿಗೆ ವಿಶೇಷ ಪೂಜೆ, ಹೋಮ ಹವನ, ವಿಶೇಷ ಅಲಂಕಾರದೊಂದಿಗೆ ಪೂಜಾ ಕೈಂಕರ್ಯಗಳು ನಡೆದವು.

ಪ್ರಾತಃಕಾಲದ ಬ್ರಾಹ್ಮಿ ಮುಹೂರ್ತದಲ್ಲಿ ಲೋಕಾ ಕಲ್ಯಾಣಾರ್ಥವಾಗಿ ಗಂಗೆ ಪೂಜೆ, ಆಲಯ ಪ್ರವೇಶ, ಗಣೇಶ ಪೂಜೆ, ಪ್ರಾಯಶ್ಚಿತ ಹಾಗು ಶಾಂತಿ ಹೋಮ, ದುರ್ಗಾ ಹೋಮ ನಡೆದವು. ನಂತರ ಪೂರ್ಣಹುತಿ, ಕುಂಭಾಭಿಷೇಕ, ಶ್ರೀ ಮಹಾಗಣಪತಿ, ಶ್ರೀ ಕಾಳಿಕಾಂಬ ಶ್ರೀ ಕಮತೇಶ್ವರಸ್ವಾಮಿ, ಶ್ರೀಚಕ್ರ, ಶ್ರೀ ಸುಬ್ರಮಣ್ಯಸ್ವಾಮಿ, ಶ್ರೀ ಅಂಜನೇಯಸ್ವಾಮಿ, ಮತ್ತು ಪರಿವಾರ ದೇವತಾ ಮೂರ್ತಿಗಳಿಗೆ ಅಭಿಷೇಕಗಳೊಂದಿಗೆ ನಂಜನಗೂಡಿನ ಜುಂಜುವೀರಚಾರ್ ತಂಡದವರಿಂದ ಪೂಜಾ ಕೈಂಕರ್ಯಗಳು ನಡೆದವು.

ವಾರ್ಷಿಕೋತ್ಸವ ಅಂಗವಾಗಿ ದೇವಸ್ಥಾನ ಒಳಾವರಣವನ್ನು ವಿಶೇಷ ಹೂವುಗಳಿಂದ ಆಲಂಕಾರ ಗೊಳಿಸಲಾಗಿತ್ತು. ಶ್ರೀ ಕಮತೇಶ್ವರ ಸ್ವಾಮಿ ಸಮೇತ ಕಾಳಿಕಾಂಬ ದೇವಿಗೆ ವಿಶೇಷ ಹೂವಿನ ಅಲಂಕಾರದೊಂದಿಗೆ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಶ್ರೀ ಕಾಳಿಕಾಂಬ ಭಜನಾ ಮಂಡಲಿ ವತಿಯಿಂದ ಭಜನಾ, ಲಲಿತಾ ಸಹಸ್ರಾನಮ ಪಾರಾಯಣ ನಡೆಯಿತು. ಮಧ್ಯಾಹ್ನ ಮಹಾಮಂಗಳಾರತಿಯೊಂದಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಮ್ಯಾನೇಜಿಂಗ್ ಟ್ರಸ್ಟ್ ಎಸ್. ನಂದೀಶ್, ಅಧ್ಯಕ್ಷರಾದ ಮುರುಗೇಶ್, ಸಹ ಕಾರ್ಯದರ್ಶಿ ಸುಂದರ್, ಟ್ರಸ್ಟಿಗಳಾದ ಗಣೇಶ್, ಸುಂದರ್, ವಿಜಯಕುಮಾರ್, ಚನ್ನವೀರಯ್ಯ, ವಿಶ್ವಕರ್ಮ ಸಮಾಜದ ಯಜಮಾನರಾದ ಅನಂತಕುಮಾರ್, ಹಾಗು ಸಮಾಜದ ಮುಖಂಡರಾದ ಕಾಶಿನಾಗೇಂದ್ರ ಪ್ರಸಾದ್, ಸುರೇಶ್, ಆರ್.ಸಿ. ನಾಗರಾಜಚಾರ್ಯ, ನಾಗರಾಜು, ರವಿಕುಮಾರ್, ಸುಬ್ರಮಣ್ಯ, ನಾಗೇಂದ್ರನ್, ಮಿತ್ರೇಶ್, ಪ್ರಸನ್ನಕುಮಾರ್, ನಾಗೇಂದ್ರಬಾಬು, ಮಹೇಶ್, ಶ್ರೀನಿವಾಸಪ್ರಸಾದ್, ಶ್ರೀಕಾಂತ್, ಪ್ರದೀಪ್, ಲೀಲಾವತಿ ಶಂಕರ್, ಶಶಿರೇಖಾ, ರೂಪ, ಸೌಮ್ಯ, ನಂದಿತಾ, ನಾಗಲಕ್ಷ್ಮಿ, ಚೈತ್ರ, ಮಂಜುಳಾ, ಕಲ್ಯಾಣ , ಆಶಾ, ರಾಜೇಶ್ವರಿ, ದೀಪಾ, ಆಶ್ವಿನಿ, ರುಕ್ಷ್ಮಿಣ , ಜ್ಯೋತಿ, ಕಾಳಿಕಾಂಬ ದೇವಿಯ ಭಕ್ತರು ಮೊದಲಾದವರು ಇದ್ದರು.

# ಅಂಬೇಡ್ಕರ್ ಜನ್ಮದಿನಾಚರಣೆ



ಗುಂಡ್ಲುಪೇಟೆ: ತಾಲ್ಲೂಕಿನ ಚಿಕ್ಕತುಪ್ಪೂರು ಗ್ರಾಮದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಯುವ ಜನ ಸಂಘ ಸಂಘದ ವತಿಯಿಂದ ಅದ್ದೂರಿಂಯಾಗಿ ಡಾ ಬಿ ಅರ್ ಅಂಬೇಡ್ಕರ್ ರವರ 135 ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಕವಿ ಸಿದ್ದಲಿಂಗಯ್ಯ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಗಂಗಾರಾಮ್ ಚಂಡಾಳ ರವರು ಅಂಬೇಡ್ಕರ್ ರವರು ಸಂವಿಧಾನದ ಮೂಲಕ ಸರ್ವ ಜನಾಂಗಕ್ಕೂ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮೂಲಭೂತ ಹಕ್ಕುಗಳನ್ನು ಕೊಡಿಸುವುದರ ಮೂಲಕ ಭಾರತೀಯರ ಮನೆ ಮನಗಳಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ ಎಂದು ತಿಳಿಸಿದರು.

ಮಹಿಳಾ ಚಿಂತಕಿ ಡಾ.ಪ್ರೇಮ ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರ್ ರವರು ಮಹಿಳೆಯರಿಗಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ತಾವೊಬ್ಬ ಶ್ರೇಷ್ಠ ಮಹಿಳಾವಾದಿಯಾದರು. ಮಹಿಳೆಯರ ಸಬಲೀಕರಣಕ್ಕಾಗಿ 12 ಗಂಟೆಗಳ ಕೆಲಸದ ಅವಧಿಯನ್ನು 8 ಗಂಟೆಗೆ ಇಳಿಸಿದ ಕೀರ್ತಿ ಜೊತೆಗೆ ಸಂಬಳ ಸಹಿತ ಹೆರಿಗೆ ರಜೆಯನ್ನು ಸಂವಿಧಾನದ ಮೂಲಕ ಕಲ್ಪಿಸಿಕೊಟ್ಟರು. ವಿರೋಧಿಗಳು ಹೆದರುವುದು ನಮ್ಮ ಜ್ಞಾನಕ್ಕೆ ಮಾತ್ರ ಎಂದು ಅಂಬೇಡ್ಕರ್ ಹೇಳಿದ್ದಾರೆ ಆಗಾಗಿ ನಾವೆಲ್ಲರೂ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡೋಣ ಎಂದರು. ಈ ಸಂದರ್ಭದಲ್ಲಿ ಗ್ರಾಮದ ಅಧ್ಯಕ್ಷ ಮಹೇಶ್ ಕೆ, ಮಹಾನಾಯಕ ಡಾ.ಬಿ.ಆರ್ ಅಂಬೇಡ್ಕರ್ . ಯುವಜನ ಸಂಘದ ಅಧ್ಯಕ್ಷ ಯೋಗೇಶ ಕೆ .ಅಂಬೇಡ್ಕರ್ ಬೀದಿಯ ಯಜಮಾನರುಗಳಾದ ಲಿಂಗಯ್ಯ, ರಾಜ, ಮಂಜ, ನಾಯಕ ಸಮುದಾಯದ ಯಜಮಾನರಾದ ರಾಮನಾಯಕ, ನಾಗ ರಾಜು, ವಿಶ್ವ ಕರ್ಮ ಮುಖಂಡರಾದ ಗೋವಿಂದ ಚಾರಿ , ಅಂಚೆ ಇಲಾಖೆಯ ಸಿ. ಸ್ವಾಮಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಪಿನ್ನಮ್ಮ , ಮಾದೇಶ ಉಪಸ್ಥಿತರಿದ್ದರು.

# ಬುದ್ಧರ ಶಾಂತಿ ಚಿಂತನೆ ಬಹಳ ಅಗತ್ಯ



ಗುಂಡ್ಲುಪೇಟೆ: ಜಗದ ಜಂಜಾಟಗಳಿಗೆ ಬುದ್ದರ ಶಾಂತಿ ಚಿಂತನೆ ಬಹಳ ಅಗತ್ಯ ಎಂದು ತಹಶೀಲ್ದಾರ್ ಎಂ. ಎಸ್. ತನ್ಮಯ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ 2570 ನೇ ವೈಶಾಖ ಬುದ್ದ ಪೂರ್ಣಿಮೆಯ ದಿನ ಬುದ್ದನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು. ಬುದ್ದ ಪೂರ್ಣಿಮೆಯು ಸುದಿನ ಆಗಿದೆ. ಪರಿಶುದ್ಧವಾದ ಪ್ರೀತಿಯನ್ನು ಹಂಚಿ ಏಷ್ಯಾದ ಮಹಾ ಬೆಳಕು ಎನಿಸಿದವರು ಮಹಾನ್ ಬುದ್ದರು ಎಂಬುದಾಗಿ ತಿಳಿಸಿದರು. ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ಮಾತನಾಡಿ, ಯುದ್ದ ಉನ್ಮಾದದಿಂದ ಮನುಕುಲ ವಿನಾಶದ ಅಂಚಿನಲ್ಲಿದೆ ಎಂದು ಅಭಿಪ್ರಾಯ ಪಟ್ಟರು.

ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು ಬುದ್ಧರ ಹಾದಿಯಲ್ಲಿ ಸಾಗಿ ಸಂವಿಧಾನದಲ್ಲಿ ಅದರ ಆಶಯವನ್ನು ಸೇರಿಸಿದ್ದಾರೆ. ಭಗವಾನ್ ಗೌತಮ ಬುದ್ದರು ಸಾವಿರಾರು ವರ್ಷಗಳ ಹಿಂದೆಯೇ ಶಾಕ್ಯ ಮತ್ತು ಕೋಲಿ ರಾಜ್ಯಗಳ ನಡುವೆ ರೋಹಿಣಿ ನದಿ ನೀರಿನ ಹಂಚಿಕೆಯ ವಿಚಾರದಲ್ಲಿ ಯುದ್ಧ ನಿರಾಕರಣೆ ಮಾಡಿ ಶಾಂತಿ, ಕರುಣೆ ಹಾಗೂ ಮೈತ್ರಿ ಭಾವಗಳನ್ನು ಜಗತ್ತಿಗೆ ಹಂಚಿದ್ದಾರೆ. ಆದರೆ ಪ್ರಸ್ತುತ ಜಗತ್ತಿನಲ್ಲಿ ಬಂಡವಾಳ ಶಾಹಿಗಳ ಕಪಿಮುಷ್ಟಿಯಲ್ಲಿ ಆಡಳಿತ ವ್ಯವಸ್ಥೆ ಸಿಕ್ಕಿ ನಲುಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ಕಸಬಾ ರಾಜಸ್ವ ನಿರೀಕ್ಷಿಕರಾದ ಮನೋಹರ, ಜವರೇಗೌಡ, ಮಾನವ ಬಂಧುತ್ವ ವೇದಿಕೆ ತಾಲ್ಲೂಕು ಸಂಚಾಲಕ ಆರ್ ಸೋಮಣ್ಣ , ರಾಘವಾಪುರ ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಆರ್ ಡಿ ಉಲ್ಲಾಸ್, ವಕೀಲರಾದ ಎಂ ಎನ್ ಸಂಪತ್ , ಕಾಳಸ್ವಾಮಿ, ತೊಂಡವಾಡಿ, ಮುಖಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಹದೇವಾಚಾರಿ , ಹಿರಿಯ ಹೋರಾಟಗಾರ ಬ್ರಹ್ಮಾನಂದ , ಮುತ್ತಣ್ಣ , ಶಂಕರ್ , ಮಂಟೇಶ್ , ನಾಗರತ್ನ , ಇತರ ನೌಕರರ ಸಿಬ್ಬಂದಿ ಭಾಗವಸಿದ್ದರು.

# 1.19 ಕೋಟಿ ರೂ ಪ್ರೋತ್ಸಾಹ ಧನ

## ಬಮೂಲ್‌ವತಿಯಿಂದ ಹಾಲು ಉತ್ಪಾದಕರ ಮಕ್ಕಳಿಗೆ ವಿತರಣೆ – ಡಿ.ಕೆ.ಸುರೇಶ್



ರಾಮನಗರ: ಬೆಂಗಳೂರು ಹಾಲು ಒಕ್ಕೂಟದಿಂದ (ಬಮೂಲ್) ಸುಮಾರು 3354 ಹಾಲು ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದೇವೆ. ರಾಮನಗರ ತಾಲ್ಲೂಕಿನಲ್ಲಿ 1 ಕೋಟಿ 19 ಲಕ್ಷ ರೂ ಪ್ರೋತ್ಸಾಹಧನ ವಿತರಣೆ ಮಾಡಲಾಗುತ್ತಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ನಗರದ ಆರ್‌ವಿಸಿಎಸ್ ಕಲ್ಯಾಣ ಮಂಟಪದಲ್ಲಿ ಬಮೂಲ್ ಕಲ್ಯಾಣ ಟ್ರಸ್ಟ್ ಮತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆ ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಅತಿ ಹೆಚ್ಚು ಹಾಲು ಪೂರೈಕೆ ಮಾಡಿದ ಹಾಲು ಉತ್ಪಾದಕ ರೈತರಿಗೆ ಗೌರವ ಸಮರ್ಪಿಸಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಇನ್ನೂ ಹೆಚ್ಚಿನ ಮಕ್ಕಳನ್ನು ಪ್ರತಿಭಾ ಪುರಸ್ಕಾರಕ್ಕೆ ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶ ಹೊಂದಲಾಗಿದೆ. ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಚಿಂತನೆ ನನ್ನದಾಗಿದೆ ಎಂದು ಹೇಳಿದರು.

ಪ್ರತಿಯೊಬ್ಬರು ಸವಾಲುಗಳ ಮಧ್ಯೆ ಬದುಕಬೇಕಿದೆ. ಪ್ರತಿಯೊಬ್ಬರಿಗೂ ಅವಕಾಶ ಸಿಗುತ್ತದೆ. ಆದರೆ, ಪ್ರಯತ್ನಗಳು ನಿಲ್ಲಬಾರದು. ಪ್ರಯತ್ನ ನಿಲ್ಲಿಸಿದಾಗ ನೀವು ಮಾಡುವ ಕೆಲಸದಲ್ಲಿ ವಿಫಲರಾಗುತ್ತೀರಿ. ಅದನ್ನು ದುಡಿಮೆಯ ಶಕ್ತಿಯಿಂದ ಸುಲಭ ಮಾಡಿಕೊಳ್ಳಬೇಕು. ರೈತರು ಹೈನುಗಾರಿಕೆ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದೇವೆ ಎಂಬ ಹಿಂಜರಿಕೆಯ ಭಾವನೆಯನ್ನು ಬಿಡಿ, ನಿಮ್ಮಗಳಲ್ಲಿ ಆರ್ಥಿಕ ಬದಲಾಣೆ ತರಲು ಬಮೂಲ್ ಆಡಳಿತ ಮಂಡಳಿ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಬದ್ದರಿದ್ದೇವೆ ಎಂದು ಅವರು ತಿಳಿಸಿದರು.

### ಹಸುವಿನ ಆರೋಗ್ಯ ವಿಮೆ ಮೊತ್ತ ಏರಿಕೆ

ಗ್ರಾಮೀಣ ಭಾಗದ ಬಹುತೇಖ ರೈತರು ಹೈನುಗಾರಿಕೆ ಕ್ಷೇತ್ರವನ್ನು ನಂಬಿ ಬದುಕು ನಡೆಸುತ್ತಿದ್ದಾರೆ. ಅವರಿಗೆ ಆರ್ಥಿಕ ಮೂಲ ಸಹ ಆಗಿದೆ. ಹಸುಗಳನ್ನು ತಮ್ಮ ಮಕ್ಕಳಂತೆ ಪೋಷಣೆ ಮಾಡಬೇಕು. ಹೆಚ್ಚು ಇಳುವರಿ ಬರುವ ಹಸುಗಳನ್ನು ಸಾಕಾಣೆ ಮಾಡಿ, ಬಮೂಲ್ ವತಿಯಿಂದ ಈಗಿರುವ 80 ಸಾವಿರ ರೂ ಹಸುವಿಗೆ ಆರೋಗ್ಯ ವಿಮೆಯ ಹಣವನ್ನು 1 ಲಕ್ಷದ 20 ಸಾವಿರಕ್ಕೆ ಹೆಚ್ಚಿಸಲಾಗಿದೆ. ಹೆಣ್ಣು ಕರುಗಳು ಜನಿಸುವಂತೆ ಸೆವೆನ್ಸ್ ಅಭಿವೃದ್ದಿ ಪಡಿಸಲಾಗಿದೆ. ಒಂದು ಮನೆಯಲ್ಲಿ ಒಂದು ಹೆಣ್ಣು ಕರು ಜನಿಸಿದರೆ 1 ಲಕ್ಷ ರೂ ಆದಾಯ ಬಂದಂತೆ ಎಂದು ಹೇಳಿದರು.

### ವಿಶ್ವದ ಜೊತೆ ಸ್ಪರ್ಧೆ ಮಾಡಲು ಅಣಿಯಾಗಿ

ಶಿಕ್ಷಣದ ಗುಣಮಟ್ಟ ಸುಧಾರಿಸಿದಂತೆ ಪೈಪೋಟಿಯೂ ಸಹ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳು ವಿಶ್ವದ ಜೊತೆ ಸ್ಪರ್ಧೆ ಮಾಡಲು ಅಣಿಯಾಗಬೇಕಿದೆ. ಇದಕ್ಕಾಗಿ ಆಯ್ಕೆಗಳು ಸರಿಯಾಗಿ ಇರಬೇಕು. ಅದನ್ನು ಬಿಟ್ಟು ಮೊಬೈಲ್ ನೋಡಿಕೊಂಡು ಕಾಲ ಕಳೆದರೆ ಪ್ರಯೋಜನವಿಲ್ಲ ಎಂದು ಅವರು ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದರು.

ಮೊಬೈಲ್ ಅನ್ನು ಅವಶ್ಯಕತೆಗೆ ಅನುಗುಣವಾಗಿ ಬಳಸಬೇಕು. ಮಕ್ಕಳ ಚಿಂತನೆ ಬದುಕು ಸೃಷ್ಟಿ ಮಾಡಿಕೊಳ್ಳುವ ರೀತಿಯಲ್ಲಿ ಇರಬೇಕು. ನಿಮ್ಮ ಕೈಯಲ್ಲಿರುವ ತಂತ್ರಜ್ಞಾನವನ್ನು ಜೀವನ ರೂಪಿಸಿಕೊಳ್ಳಲು ಬಳಸಿಕೊಳ್ಳಬೇಕು. ಎಐ ತಂತ್ರಜ್ಞಾನಕ್ಕೆ ಪರ್ಯಾಯ ಮತ್ತೊಂದು ಆವಿಷ್ಕಾರವನ್ನು ಹುಡುಕಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ. ರಾಜು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಗಾಣಕಲ್ ನಟರಾಜ್, ಬಮೂಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್, ರಾಮನಗರ ಶಿಬಿರ ವ್ಯವಸ್ಥಾಪಕ ಡಾ. ಗಣೇಶ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಯರೇಹಳ್ಳಿ ಮಂಜು, ಜಿಪಂ ಮಾಜಿ ಅಧ್ಯಕ್ಷ ರಮೇಶ್, ತಾಪಂ ಮಾಜಿ ಅಧ್ಯಕ್ಷರಾದ ಡಿ.ಎಂ.ಮಹದೇವಯ್ಯ, ಪ್ರಾಣೇಶ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಎಚ್.ರಾಜು, ಬಿಡದಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಬಿ.ಗಂಗಾಧರ್‌ಗೌಡ, ಗ್ರಾಪಂ ಮಾಜಿ ಅಧ್ಯಕ್ಷರಾದ ರಾಮಯ್ಯ, ಪ್ರಭು, ಮುಖಂಡರಾದ ಜಯಣ್ಣ, ಬೈರೇಗೌಡ, ಕೆ.ರವಿ, ಕೆಂಪರಾಮು ಆಂಜನಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಬಮೂಲ್ ಲಾಭದತ್ತ ನಡೆಯುತ್ತಿದೆ, ಡಿ.ಕೆ.ಸುರೇಶ್ ಬಗ್ಗೆ ಪಿ.ನಾಗರಾಜ್ ಮೆಚ್ಚುಗೆ

**ಬಮೂಲ್ ನಿರ್ದೇಶಕ ಪಿ.ನಾಗರಾಜ್ ಮಾತನಾಡಿ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರ ಮನವೊಲಿಸಿ ಮೂರು ಬಾರಿ ಸಂಸದರಾಗಿದ್ದ ಡಿ.ಕೆ.ಸುರೇಶ್ ಅವರನ್ನು ಬೆಂಗಳೂರು ಹಾಲು ಒಕ್ಕೂಟಕ್ಕೆ ಅಧ್ಯಕ್ಷರನ್ನಾಗಿ ಮಾಡಿದೆವು. ಸಹಕಾರಿ ಕ್ಷೇತ್ರದಲ್ಲಿ ಹಲವು ಕ್ರಾಂತಿಕಾರಕ ಬದಲಾವಣೆಗಳನ್ನು ತರುವ ಮೂಲಕ ಹಾಲು ಉತ್ಪಾದಕರು ಹಾಗೂ ಹೈನುಗಾರಿಕೆ ಕ್ಷೇತ್ರದ ಅವಲಂಬಿತರಿಗೆ ಹಲವು ಯೋಜನೆಗಳನ್ನು ಸಾಕಾರ ಮಾಡುವ ಜೊತೆಗೆ ಅನುಕೂಲಗಳನ್ನು ಕಲ್ಪಿಸಿದ್ದಾರೆ. ಎಂದರು. ಡಿ.ಕೆ.ಸುರೇಶ್ ಅವರಿಗೆ ಕೆಲಸ ಮಾಡುವ ಛಲ ಇದೆ. ರೈತರ ಬಗೆಗೆ ಕಾಳಜಿ ಇದೆ. ಅಷ್ಟೇ ಅಲ್ಲದೆ ಉತ್ಪಾದನೆ, ಮಾರುಕಟ್ಟೆ ಬಗ್ಗೆ ಅನುಭವ ಹಾಗೂ ಅಪಾರ ಜ್ಞಾನವಿದೆ. ಒಂದು ಪೈಸೆವನ್ನು ಲೆಕ್ಕ ಹಾಕಿ ಬಮೂಲ್ ಅನ್ನು ಲಾಭದತ್ತ ಕೊಂಡೊಯ್ಯುತ್ತಿದ್ದಾರೆ. ಇದರಿಂದ ಈ ವರ್ಷ 60 ಕೋಟಿ ರೂ ಲಾಭ ಗಳಿಸಿದೆ. ನಾನು ಬಮೂಲ್ ಅಧ್ಯಕ್ಷನಾಗಿದ್ದಾಗ ಹೈನುಗಾರರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಸಂಕಲ್ಪ ತೊಟ್ಟು ಬಮೂಲ್ ಕಲ್ಯಾಣ ಟ್ರಸ್ಟ್ ಸ್ಥಾಪಿಸಿದೆ. ಅದರಿಂದ ಪ್ರತಿವರ್ಷ ಸಾವಿರಾರು ಮಕ್ಕಳು ಅದರ ಪ್ರಯೋಜನ ಪಡೆಯುತ್ತಿದ್ದಾರೆ, ಪಶು ಆಹಾರದಲ್ಲಿ ಕ್ರಾಂತಿ, ಹಾಲಿಗೆ ಪ್ರೋತ್ಸಾಹಧನ, ನೂತನ ಸಂಘಗಳ ರಚನೆ ಮಾಡಿದ ಕೆಲಸಗಳು ನನಗೆ ತೃಪ್ತಿ ನೀಡಿದೆ ಎಂದು ಮೆಲಕು ಹಾಕಿದರು.**

# 7ರಿಂದ ಹಾರ್ಟ್ ಸಂಸ್ಥೆ ಕಾರ್ಯಾರಂಭ

ಮೈಸೂರು: ಹಾರ್ಟ್ ಸಂಸ್ಥೆ ವತಿಯಿಂದ ತಾವು ಸಂಸ್ಥಾಪಕ ಅಧ್ಯಕ್ಷರಾಗಿರುವ ಹೃದಯ ಸ್ಪಂದನ ಹಿರಿಯ ಆರೈಕೆ ಕೇಂದ್ರವನ್ನು ಮಾನಂದವಾಡಿ ರಸ್ತೆ, ಕೋಟೆಹುಂಡಿ ಬಳಿ ತೆರೆದಿದ್ದು ಇದು ಮೇ 7 ರಿಂದ ಕಾರ್ಯಾರಂಭಗೊಳ್ಳಲಿದೆ ಎಂದು ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಿಜವಾಗಿಯೂ ಅಶಕ್ತರು, ನೋಡಿಕೊಳ್ಳುವವರು ಇಲ್ಲದ 20 ಮಂದಿ ಹಿರಿಯ ನಾಗರಿಕರಿಗೆ ಇದರಲ್ಲಿ ಅವಕಾಶವಿದೆ. ಊಟ, ವಸತಿ, ಆಪ್ತ ಸಮಾಲೋಚನೆ ಉಚಿತವಾಗಿ ಇರಲಿವೆ. ಸಮಾಜದಲ್ಲಿ ಮಾನವೀಯ ಮೌಲ್ಯ ಬಲವರ್ಧನೆ ಉದ್ದೇಶ ಇದು ಹೊಂದಿದೆ. ಇಲ್ಲಿ ಕುಟುಂಬ ಸದಸ್ಯರು ಹಾಗೂ ಹಿರಿಯ ನಾಗರಿಕರ ನಡುವಿನ ಸಂಬಂಧ ಪುನರ್ ಸ್ಥಾಪನೆಗೆ ಯತ್ನಿಸಲಾಗುವುದು. ಇವರ ನಡುವೆ ಏರ್ಪಟ್ಟ ಕಂದಕ ದೂರ ಮಾಡಿಸುವ ಮೂಲಕ ಪರಸ್ಪರ ಅರಿವು, ಪ್ರೀತಿ ಮೂಡಿಸಲು ಶ್ರಮಿಸಲಾಗುವುದೆಂದರು. ಹೀಗಾಗಿ ಹೆಚ್ಚಿನ ಮಾಹಿತಿಗೆ ದೂ. 93536 30903 ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಸಂಸ್ಥೆಯ ಸದಸ್ಯ ಡಾ. ಮಹಾಬಲೇಶ್ವರ ಮಮದಾಪುರ, ಶಿವಲಿಂಗ ಇದ್ದರು.



# ಪ್ರಕಾಶ್ ಬೆಲ್ಲದ್‌ಗೆ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ

ಚಾಮರಾಜನಗರ, ಮೈಸೂರಿನ ಜೆಎಸ್ ಎಸ್ ಮಹಾ ವಿದ್ಯಾಪೀಠವು ಚಾಮರಾಜನಗರ ಜಿಲ್ಲೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತರಿಗೆ ನೀಡುವ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಜಿಲ್ಲೆಯ ಹಿರಿಯ ವರದಿಗಾರರಾದ ಪ್ರಕಾಶ್ ಬೆಲ್ಲದ್ ಆಯ್ಕೆಯಾಗಿದ್ದಾರೆ.

ಜಿಲ್ಲೆಯ ಗಡಿಭಾಗದ ತಾಳವಾಡಿ ತಾಲ್ಲೂಕಿನ ಸೊತ್ತನಪುರಂ ಗ್ರಾಮದ ಪ್ರಕಾಶ್ ಬೆಲ್ಲದ್ 1996 ರಲ್ಲಿ ಪತ್ರಿಕಾರಂಗ ಪ್ರವೇಶಿಸಿ ವಿವಿಧ ಪತ್ರಿಕೆಗಳಲ್ಲಿ 30 ವರ್ಷ ಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ಚಾಮರಾಜನಗರದಲ್ಲಿ ವಾಸವಿದ್ದು, ಸ್ಥಳೀಯ ರೇಷ್ಮೆನಾಡು ಪತ್ರಿಕೆಯಲ್ಲಿ ವರದಿ ಗಾರರಾಗಿ ಸೇವೆ ಆರಂಭಿಸಿದ ಪ್ರಕಾಶ್ ಅವರು ನಂತರ ಆಂದೋಲನ, ಪ್ರಜಾನುಡಿ, ಉಷಾಕಿರಣ, ಜನಮಿತ್ರ ಪತ್ರಿಕೆಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ಪ್ರಸ್ತುತ ವರ್ತ ಮಾನ ಪತ್ರಿಕೆಯ ಜಿಲ್ಲಾ ವರದಿಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಆಯ್ಕೆಯಾದ ಪ್ರಕಾಶ್ ಬೆಲ್ಲದ್ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದ ಅಧ್ಯಕ್ಷರಾದ ಆರ್.ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿಣಿ ಸದಸ್ಯರು ಅಭಿನಂದಿಸಿದ್ದಾರೆ.

### ಪ್ರಶಸ್ತಿ ಪ್ರದಾನ ಸಮಾರಂಭ

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಮಹಾವಿದ್ಯಾಪೀಠದ ಸಹಯೋಗದಲ್ಲಿ ಶ್ರೀ ಶಿವರಾತ್ರೀ ಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂ ಭವು ಮೇ 5 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸೆಮಿನಾರ್ ಹಾಲ್ನಲ್ಲಿ ನಡೆಯಲಿದೆ. ಸಮಾರಂಭವನ್ನು ಮೈಸೂರಿನ ಹಿರಿಯ ಪತ್ರಕರ್ತ ರಾದ ಸಿ.ಕೆ.ಮಹೇಂದ್ರ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಪ್ರಶಸ್ತಿ ಪ್ರದಾನ ಮಾಡುವರು. ಸಂಘದ ಜಿಲ್ಲಾಧ್ಯಕ್ಷರಾದ ಆರ್.ಎನ್. ಸಿದ್ದಲಿಂಗಸ್ವಾಮಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟ ಗಾರಿಕೆ ವಿಭಾಗದ ನಿರ್ದೇಶಕರಾದ ಎನ್. ಎಂ.ಶಿವ ಶಂಕರಪ್ಪ ಭಾಗವಹಿಸುವರು. ಸಮಾರಂಭಕ್ಕೆ ಜಿಲ್ಲೆಯ ಎಲ್ಲ ಪತ್ರಕರ್ತರು ಹಾಗೂ ಪ್ರಕಾಶ್ ಬೆಲ್ಲದ್ ಅವರ ಹಿತೈಷಿಗಳು ಆಗಮಿಸಬೇಕೆಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಪ್ರಕಟಣೆಯಲ್ಲಿ ಕೋರಿದೆ.

# ಕಾರ್ಮಿಕರ ದಿನ: ಪೌರ ಕಾರ್ಮಿಕರ ಸನ್ಮಾನ



ಗುಂಡ್ಲುಪೇಟೆ: ಪಟ್ಟಣದ ಹಳೆ ಪ್ರವಾಸಿ ಮಂದರಿ ದಲ್ಲಿ ಜಯ ಕರ್ನಾಟಕ ರಕ್ಷಣಾ ಸೇನೆ ವತಿಯಿಂದ ಕಾರ್ಮಿಕರ ದಿನಾಚರಣೆಯ ಪ್ರಯುಕ್ತ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು

ಗೌರವಾಧ್ಯಕ್ಷೆ ಪುಟ್ಟಮ್ಮ ಮಂಜುನಾಥ್ ಮಾತನಾಡಿ ಹಳ್ಳಿ ಮತ್ತು ನಗರಗಳ ಸ್ವಚ್ಚತೆ ಮತ್ತು ಉತ್ತಮ ಆರೋಗ್ಯಕ್ಕಾಗಿ ಸಾರ್ವಜನಿಕವಾಗಿ ಹಗಲಿರುಳು ಶ್ರಮಿಸಿ ಸಮಾಜದ ನೈಜ ವೈದ್ಯರಾಗಿ ಸೇವೆ ಸಲ್ಲಿಸುವ ನಿಮಗೆ ಆಯಸ್ಸು ಆರೋಗ್ಯ ಕರುಣಿಸಲಿ ಎಂದು ಹಾರೈಸಿ ಮೆಚ್ಚುಗೆ ವ್ಯಕ್ತಪಡಿಸಿದರು

ಜಿಲ್ಲಾಧ್ಯಕ್ಷ ಈಶ್ವರ್ ಎಸ್. ಮಾತನಾಡಿ ಕಾಯಕವೇ ಕೈಲಾಸ ಎಂಬುದು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ಹಗಲಿರುಳು ಶ್ರಮಿಸಿ ಸಮಾಜದ ಕಲ್ಮಶವನ್ನು ತೊಡೆದುಹಾಕಿ ಸಮಾಜವು ಉತ್ತಮ ಆರೋಗ್ಯಕ್ಕೆ ಕಾರಣಕರ್ತರಾದ ಪೌರ ಕಾರ್ಮಿಕರಿಗೆ ಎಲ್ಲರೂ ಸಹಕರಿಸಿ ಉತ್ತಮ ವೇತನ ಸಾಮಾಜಿಕ ಭದ್ರತೆ ಹಾಗೂ ಉತ್ತಮ ಬದುಕು ಕಲ್ಪಿಸುವುದು ಸಮಾಜದ ಜೊತೆಗೆ ಸರಕಾರಗಳ ಜವಾಬ್ದಾರಿ ಆಗಿದೆ ಇದು ಕಾರ್ಯಗತವಾಗಬೇಕು ಎಂದು ತಿಳಿಸಿದ್ದರು ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ಸೈಯದ್ ಅನ್ಸಾರ್ ಜಿಲ್ಲಾ ಪ್ರದಾನ ಕಾರ್ಯದರ್ಶಿ ನಾಗರಾಜು ಲಕ್ಕೂರು ಜಿಲ್ಲಾ ಉಪಾಧ್ಯಕ್ಷ ಬೆಳವಾಡಿ ರಾಜಪ್ಪ ಜಿಲ್ಲಾ ಕಾರ್ಯಾಧ್ಯಕ್ಷ ಮಂಜು ಬೊಮ್ಮನಹಳ್ಳಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಭಾಸ್ಕರ್ ತಾಲ್ಲೂಕು ಗೌರವಾಧ್ಯಕ್ಷ ಶಿವನಂಜಪ್ಪ ಚಾಮರಾಜನಗರ ತಾಲ್ಲೂಕು ಅಧ್ಯಕ್ಷೆ ಸವಿತಾ ಬಿ ಟೌನ್ ಅಧ್ಯಕ್ಷ ಅಜಿತ್ ಕುಮಾರ್ ಕಲಾವಿದ ರಾಮೇಗೌಡ ರಾಜು ಹೊಸಮನೆ ಯುಟ್ಯೂಬ್ ರ್ ರಾಜೀವ್ ರಾಜಶೆಟ್ಟಿ ಕ.ಸಾ.ಪ.ಪ್ರತಿನಿಧಿ ಮುಬಾರಕ್ ಲತಾ ಬಣ್ಣಮ್ಮ ಮಹದೇವಮ್ಮ ಜಯಲಕ್ಷ್ಮಮ್ಮ ರಾಜಮ್ಮಣಿ ಮೂರ್ತಿ ಶಶಿಕಲಾ ವಿವಿಧ ಸಂಘದ ಸದಸ್ಯರು ಹಾಜರಿದ್ದರು. .

## ಕಾರ್ಮಿಕರ ದಿನಾಚರಣೆ, 10 ಮಂದಿ ಕಾರ್ಮಿಕರಿಗೆ ಸೇಪ್ಟಿ ಕಿಟ್ ವಿತರಣೆ

# ಕಾರ್ಮಿಕರು ದೇಶದ ಸಂಪತ್ತು, ಬೆನ್ನೆಲುಬು




ಚಾಮರಾಜನಗರ: ಕರುನಾಡ ಕಾರ್ಮಿಕರ ವೇದಿಕೆ ವತಿಯಿಂದ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.

ನಗರದ ಐಎಲ್ ಸಿ ರಸ್ತೆಯಲ್ಲಿರುವ ನಂದಿಭವನದ ಸಮೀಪದಲ್ಲಿರುವ ಕರುನಾಡ ಕಾರ್ಮಿಕರ ವೇದಿಕೆ ಕಚೇರಿಯಲ್ಲಿ ನಡೆದ ಕಾರ್ಮಿಕ ದಿನಾಚರಣೆಯಲ್ಲಿ 10 ಮಂದಿಗೆ ಸೇಪ್ಟಿ ಕಿಟ್ ವಿತರಿಸಲಾಯಿತು.

ಕಾರ್ಮಿಕರಿಗೆ ಸೇಪ್ಟಿ ಕಿಟ್ ವಿತರಿಸಿದ ಮಹಿಳಾ ಘಟಕ ಅಧ್ಯಕ್ಷೆ ನಾಗು ರಮೇಶ್ ಮಾತನಾಡಿ, ಕಾರ್ಮಿಕರು ದೇಶದ ನಿಜವಾದ ಸಂಪತ್ತು ಮತ್ತು ಬೆನ್ನೆಲುಬು. ದೇಶದ ಆರ್ಥಿಕ ಅಭಿವೃದ್ಧಿ, ಮೂಲಸೌಕರ್ಯ ನಿರ್ಮಾಣ ಮತ್ತು ಉತ್ಪಾದನಾ ರಂಗದಲ್ಲಿ ಕಾರ್ಮಿಕರ ಶ್ರಮ ಅಪಾರವಾಗಿದೆ ಎಂದರು. ಕಾರ್ಮಿಕ ದಿನಾಚರಣೆಯ ಅಂಗವಾಗಿ ನಮ್ಮ ಸಂಘಟನೆ ಯ ವತಿಯಿಂದ 10ಮಂದಿ ಕಾರ್ಮಿಕರಿಗೆ ಸೇಪ್ಟಿ ಕಿಟ್ ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಕಾರ್ಮಿಕ ಪರ ಹೆಚ್ಚಿನ ಕಾರ್ಯಕ್ರಮ ರೂಪಿಸಲಾಗು ತ್ತದೆ. ಎಲ್ಲರಿಗೂ ಕಾರ್ಮಿಕ ದಿನಾಚರಣೆಯ ಶುಭ ಕೋರಿದರು.

ಅಧ್ಯಕ್ಷತೆ ವಹಿಸಿದ್ದ ವೇದಿಕೆ ಜಿಲ್ಲಾಧ್ಯಕ್ಷ ಆರ್. ಕುಮಾರ್ ಮಾತನಾಡಿ,ಕಾರ್ಮಿಕರು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸು ತ್ತಾರೆ. ಇಡೀ ದೇಶದ ಪ್ರಗತಿಯು ಕಾರ್ಮಿ ಕರ ಶ್ರಮದ ಮೇಲೆ ಅವಲಂಬಿತವಾಗಿದೆ ಎಂದರು. ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರವು ಸಾಮಾಜಿಕ ಭದ್ರತೆ, ಅಪಘಾತ ವಿಮೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡುತ್ತಿದೆ. ಇದನ್ನು ಜಿಲ್ಲೆಯ ಅರ್ಹ ಕಾರ್ಮಿಕರಿಗೆ ತಲುಪಿಸಲು ಸಂಘ ಕೆಲಸ ಮಾಡುತ್ತದೆ. ಕಾರ್ಮಿಕರ ಶ್ರಮ ಮತ್ತು ತ್ಯಾಗವನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಕರುನಾಡ ಕಾರ್ಮಿಕ ವೇದಿಕೆಯ ಮಹಿಳಾ ಘಟಕ ಉಪಾಧ್ಯಕ್ಷೆ ಎನ್.ರೂಪ ಕರುನಾಡ ಕಾರ್ಮಿಕರ ವೇದಿಕೆ ಜಿಲ್ಲಾಧ್ಯಕ್ಷ ಆರ್. ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಗೋವಿಂದ್, ಖಜಾಂಚಿ ಬಸವರಾಜು, ಸಂಘಟನಾ ಕಾರ್ಯದರ್ಶಿ ಸಚಿನ್, ರುದ್ರ, ಕುಮಾರ್, ಸುನೀಲ್, ಮಹೇಶ್, ಹೊನ್ನಪ್ಪ, ರಾಮಚಂದ್ರ, ಮಹೇಶ್ ಇತರರು.

## ಬೇಸಿಗೆಗೆ ಕುಡಿಯುವ ನೀರು ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಿ: ಸಚಿವ ಎನ್. ಚಲುವರಾಯಸ್ವಾಮಿ



ಮಂಡ್ಯ: ಬೇಸಿಗೆಯ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳಿಗೆ ನಿಗಾವಹಿಸಲು ಅಧಿಕಾರಿಗಳು ಗಮನಹರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ ಅವರು ತಿಳಿಸಿದರು.

ಇಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಬೇಸಿಗೆ ಪ್ರಯುಕ್ತ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈ ಮಾಸಿಕ ಪ್ರಗತಿ ಪರಿಶೀಲನಾ (ಕೆಡಿಪಿ) ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ ಮುಂದಿನ ದಿನದಲ್ಲಿ ಅಗತ್ಯಕ್ಕಿಂತ ಹೆಚ್ಚು ಮಳೆಯಾಗದಿರುವ ಹಿನ್ನಲೆಯಲ್ಲಿ ಸಭೆ ಮಾಡಲಾಗಿದ್ದು ಹೀಗಾಗಿ ಕುಡಿಯುವ ನೀರಿಗೆ ಸಮಸ್ಯೆಯಾಗದ ರೀತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ವರ್ಷದ ಆರಂಭದ ಹಿನ್ನಲೆಯಲ್ಲಿ ಕ್ರಿಯಾ ಯೋಜನೆ ರೂಪಿಸಿ ಅದಕ್ಕೆ ಅನುಮತಿ ಪಡೆದು ಜೂನ್ ಗೆ ಕಾರ್ಯ ಯೋಜನೆ ಮಾಡಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ 289 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳನ್ನು ಗುರುತಿಸಲಾಗಿದ್ದು 256 ಕಡೆ ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ ಹೀಗಾಗಲೇ 167 ಕೊಳವೆ ಬಾವಿಯಲ್ಲಿ ನೀರಿನ ಅಭಾವ ಇದ್ದು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸೂಕ್ತ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಬರಗಾಲದ ಹಿನ್ನಲೆಯಲ್ಲಿ ಎಲ್ಲಾ ಅಧಿಕಾರಿಗಳು ಪ್ರತಿ ವಾರ ಟಾಸ್ಕ್ ಫೋರ್ಸ್ ಸಭೆ ಮಾಡಬೇಕು ಕುಡಿಯುವ ನೀರಿಗೆ ಸಮಸ್ಯೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಹಸಿ ಮತ್ತು ಒಣ ಮೇವು ಸೌಲಭ್ಯವು 43 ವಾರಗಳಿಗೆ ಆಗುವಷ್ಟು ಮೇವು ಇದ್ದು ಜಿಲ್ಲೆಯಲ್ಲಿ ಯಾವುದೇ ಸಮಸ್ಯೆ ಇಲ್ಲ ಮೇವು ಲಭ್ಯತೆ ಇರುತ್ತದೆ ಮೇವಿಗೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಯಲ್ಲಿಗಳಲ್ಲಿ ಯಾವುದೇ ತೊಂದರೆಯಾಗದಂತೆ ವೈದ್ಯರುಗಳಿಗೆ ಕಾರ್ಯನಿರ್ವಹಿಸುವಂತೆ ಕ್ರಮ ವಹಿಸುವಂತೆ ತಿಳಿಸಿದರು.

ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ರವರು ಮಾತನಾಡಿ ಜಿಲ್ಲೆಯಲ್ಲಿ 289 ಗ್ರಾಮಗಳಲ್ಲಿ 256 ಕಡೆ ಖಾಸಗಿ ಬೋರೆವೆಲ್ ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ ಹೀಗಾಗಲೇ 167 ಕೊಳವೆ ಬಾವಿಯಲ್ಲಿ ನೀರಿನ ಅಭಾವ ಇದೆ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಇನ್ನು ಕೆಲವೆಡೆ ನೀರಿನ ಗುಣಮಟ್ಟದ ಪರೀಕ್ಷೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (KSPCB) ಅಧ್ಯಕ್ಷರಾದ ಹಾಗೂ ಮಳವಳ್ಳಿ ಶಾಸಕರಾದ ಪಿ. ಎಂ. ನರೇಂದ್ರಸ್ವಾಮಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ಶಾಸಕರಾದ ಎ. ಬಿ. ಬಂಡಿಸಿದ್ದೇಗೌಡ, ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ. ರವಿಕುಮಾರ್, ಮೇಲುಕೋಟೆ ಕ್ಷೇತ್ರದ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಕೃಷ್ಣರಾಜ ಪೇಟೆ ಶಾಸಕರಾದ ಹೆಚ್. ಟಿ. ಮಂಜು, ವಿಧಾನ ಪರಿಷತ್ ಶಾಸಕರಾದ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ಎ. ಜೆ. ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಶಿವಾನಂದಮೂರ್ತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀ ಭಗೀರಥ ಜಯಂತೋತ್ಸವ ಆಚರಣೆ



ಕೆ.ಆರ್.ನಗರ: ತಾಲೂಕಿನ ಕಾಳಮ್ಮನ ಕೊಪ್ಪಲು ಗ್ರಾಮದಲ್ಲಿ ಶ್ರೀ ಭಗೀರಥ ಉಪ್ಪಾರರ ಸಂಘದ ವತಿಯಿಂದ ಶ್ರೀ ಭಗೀರಥ ಜಯಂತೋತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಭಗೀರಥ ಮಹರ್ಷಿಗಳ ಭಾವಚಿತ್ರಕ್ಕೆ ತಳಿರು ತೋರಣ ಹಾಗೂ ಹೂವಿನಿಂದ ಅಲಂಕಾರ ಮಾಡಿ, ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡುವ ಮೂಲಕ ಸಂಭ್ರಮಾಚರಣೆ ನಡೆಯಿತು.

ಕಾರ್ಯಕ್ರಮದಲ್ಲಿ ಮುಖಂಡರುಗಳಾದ ಎಂ. ಶಿವಣ್ಣ, ರಂಗೇಗೌಡ, ಜ. ರಾಮೇಗೌಡ, ದೇವೇಗೌಡ, ಕೆ.ಟಿ. ಶಿವಣ್ಣ, ಕೃಷ್ಣೆಗೌಡ, ತಮ್ಮೇಗೌಡ, ಕಾ. ರಾಮೇಗೌಡ, ಕೆ.ಟಿ. ಮೋಹನ್ ಕುಮಾರ್, ಕೆ.ಎ. ನಾಗರಾಜು, ಸ್ವಾಮಿಗೌಡ, ಕೆಇಬಿ ದೇವರಾಜು, ಕೆ.ಡಿ. ರಂಗೇಗೌಡ, ಕೆ.ಎನ್. ಪವನ್, ಅಶೋಕ, ಮಹದೇವ, ಪ್ರದೀಪ್, ಸ್ವಾಮಿ, ರಂಗೇಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

# ರೈಟ್ ಟು ಡ್ರೈ





| ರೂಪ ಮಂಜುನಾಥ ಹೊಳೆನರಸೀಪುರ

ನಮ್ಮ ಅಜ್ಜಿಯರ ಕಾಲದಿಂದ ನಮ್ಮವರೆಗೂ ನಮಗೆ ನಮ್ಮ ದೇಶಗಳಲ್ಲಿ ಬಟ್ಟೆ ಒಣಹಾಕುವುದು ಒಂದು ಸಂಭ್ರಮದ ಕಲೆಯೇ ಆಗಿತ್ತು. ಬೆಳಿಗ್ಗೆ ಎದ್ದು, ಬಟ್ಟೆ ಒಗೆದು, ಅಂಗಳದ ಹಗ್ಗದ ಮೇಲೆ ಸಾಲಾಗಿ ಹಾಕಿ,ಸುಡುವ ಬಿಸಿಲಿದ್ದರೆ, ಆಹಾ, ಇವತ್ತು ಬಿಸಿಲು ಎಷ್ಟೊಂದು ಚೆನ್ನಾಗಿದೆ ! ಎನ್ನುತ್ತ ಉಲ್ಲಾಸ, ಉತ್ಸಾಹ ತೋರುತ್ತಲೋ, ಅದೇ ಮೋಡವಾಗಿದ್ದರೆ, ಅಯ್ಯೋ ..ಏನಿವತ್ತು ಬಿಸಿಲೇ ಕಾಣೇ. ಸಂಜೆ ಹೊತ್ತಿಗೆ ಬಟ್ಟೆ ಒಣಗುವುದೋ ಇಲ್ಲವೋ , ಎಂದು ಗೊಣಗಿಕೊಳ್ಳುತ್ತಲೋ,ಬಟ್ಟೆಯನ್ನು ಸಾಲಾಗಿ ಹಗ್ಗ ಅಥವಾ ತಂತಿಯ ಮೇಲೆ ಹರವಿ ಹಾಕುವುದು ನಮ್ಮಂಥ ಹೆಂಗಳೆಯರ ದಿನ ನಿತ್ಯದ ಕೈಂಕರ್ಯವಾಗಿತ್ತು.ಇತ್ತೀಚೆಗೆ ಬಹುಪಾಲು ಅದೆಲ್ಲಾ ಮನೆಕೆಲಸದವರು ಪಾಲೋ, ಇಲ್ಲಾ ವಾಶಿಂಗ್ ಮೆಶೀನುಗಳ ಪಾಲಾಗಿ ಗತಕಾಲದ ಈ ಕಾರ್ಯಕ್ರಮ ಗೃಹಿಣಿಯರ ಮೆನು ಕಾರ್ಡಿಂದ ಡಿಲೀಟ್ ಆಗೋಗಿದೆ ಅಂತಿಟ್ಕೊಳೀ!

ನಮ್ಮ ಅಮ್ಮ ಹಿಂದೆಲ್ಲಾ ಹೇಳುತ್ತಿದ್ದರು ಮಗಳೇ, ಬಿಸಿಲಿಗೆ ಒಣಗಿದ ಬಟ್ಟೆಯ ಪರಿಮಳವೇ ಬೇರೆ.ಸೂರ್ಯನ ಶಾಖದಲ್ಲಿ ಒಣಗಿದ ಗರಿಗರಿ ಬಟ್ಟೆ ಮಡಿಗೆ ಹಾಕಿದಷ್ಟೇ ಶ್ರೇಷ್ಠವಾಗುವುದು ಎಂದು. ಅವರ ಮಾತು ಕೇಳಿ ಅಪ್ಪಿತಪ್ಪಿ ಅಮೆರಿಕದಲ್ಲಿ, ನಾವೇನಾದರೂ ಬಟ್ಟೆಯನ್ನ ಮನೆಯ ಹಿಂದೋ, ಮುಂದೋ ಒಣಹಾಕಿದ್ವಾ, ತಕೋಳ್ರಪ್ಪಾ, ಪೊಲೀಸ್ನೋರು ಹಿಂದೆಲೇ ಬಂದು ಕೈಕೋಳ ಹಾಕೋದೇ ಸೈ!

ಅಯ್ಯಾ, ಇದೆಂಥ ನ್ಯಾಯಾ ನಮ್ಮ ಮನೆ, ನಮ್ಮ ಅಂಗಳ, ನಾವೇನಾದ್ರೂ ಮಾಡ್ಕೋತೀವಿ. ಅದನ್ನ ಕೇಳೋಕೆ ನೀವ್ಯಾರ್ರೀ ಭಾರತದಲ್ಲಾಗಿದ್ರೆ, ಇದೇ ಬಹಳ ಸುಸಂಸ್ಕೃತವಾದ ಡೈಲಾಗ್. ಆದ್ರೆ, ಅಮೆರಿಕದಲ್ಲಿ, ಅದೆಲ್ಲಾ ನಡೆಯೋಲ್ಲ ಬಿಡಿ. ಏ ರೂಲ್ ಇಸ್ ಎ ರೂಲ್ ಈವನ್ ಫಾರ್ ಎ ಫೂಲ್ , ಅನ್ನೋದು ಇಲ್ಲಿಯ ಪಾಲಿಸಿ!

ನಾನು ಮೂರು ವರ್ಷದ ಹಿಂದೆ ಅಮೆರಿಕಕ್ಕೆ ಬಂದಾಗ ಮಗನ ಮನೆಯಲ್ಲಿ ಬಟ್ಟೆ ಒಣಗಿಸುವ ಡ್ರೈಯರ್ ಕೆಟ್ಟುಹೋಗಿತ್ತು.ನಾನು, ಅಯ್ಯಾ ಹೋಗ್ಲಿ ಬಿಡೋ. ನಿಮ್ಮನೆ ಹಿತ್ತಲು ಬೇಕಾದಷ್ಟು ದೊಡ್ಡದಿದೆ.ಇನ್ನು ಬಿಸಿಲಿಗಂತೂ ನಿಮ್ಮೂರಲ್ಲಿ ಬರವೇ ಇಲ್ಲ.. ಒಂದು ಹಗ್ಗ ತಗೊಂಡ್ ಬಾ. ಆ ಕಡೆಯಿಂದ ಈ ಕಡೆಗೆ ಕಟ್ಟಿ ಬಟ್ಟೇನ ಬಿಸಿಲಲ್ಲೇ ಒಣಗಿಸಿದ್ರಾಯ್ತು. ಬಟ್ಟೆ ಗರಿಗರಿಯಾಗಿ ಘಮ್ ಅಂತವೆ , ಅಂದಿದ್ದೆ. ಅವನೇನೋ,ನಾನು ಮಹಾ ಅಪರಾಧವೇ ಮಾಡಿಬಿಟ್ನೇನೋ ಅನ್ನುವಂತೆ, ಅಯ್ಯಯ್ಯಪ್ಪಾ ನಿಮ್ ದಮ್ಮಯ್ಯ! ಅಂತ ಕೆಲ್ಸ ಮಾತ್ರ ಮಾಡಕ್ಕೋಗಬೇಡಿ. ಇವತ್ತೋ ನಾಳೇಲೋ ರಿಪೇರಿ ಮಾಡೋರ್ನ ಕರಿಸ್ತೀನಿ , ಅಂತ ಸಿಡಸಿಡ ಅಂದು ಆಫೀಸಿಗೆ ಬರಬರ ನಡೆದಿದ್ದ.ನಾನು, ಎಲಾ ಇವನಾ ಬಟ್ಟೆ ಹೊರಗೆ ಹರವಾಕ್ತೀನಿ ಅಂದ್ನಪ್ಪಾ! ಅದಕ್ಯಾಕ್ ಇವ ಹಿಂಗೆ ಹಾರಾಡ್ತಿದಾನೇ ಇದ್ರಲ್ಲೇನಿದೆ ತಪ್ಪು , ಅಂತ ತಲೇನ ಪರಪರ ಕೆರಕೊಂಡ್ರೂ ಏನೂ ಹೊಳೀಲಿಲ್ಲ. ಅವ ಹಂಗೆ ಆಡಿದ್ದರ ಕಾರಣ, ಮೂರು ವರ್ಷ ಆದ ಮೇಲೆ ಯಾವುದೋ ಯೂ ಟ್ಯೂಬ್ ವಿಡಿಯೋ ನೋಡಿದಾಗ ತಿಳೀತು ಕಣ್ರೀ.

ಹೌದು, ನೀವು ಓದಿದ್ದು ಸರಿಯೇ. ಅಮೆರಿಕದ ಹಲವು ರಾಜ್ಯಗಳಲ್ಲಿ ಹೊರಗಡೆ ಬಟ್ಟೆ ಒಣಹಾಕುವುದು ನಿಷಿದ್ಧ! ಅಲ್ಲಿಯ Homeowners Association ಎಂಬ ಮಹಾನ್ ಸಂಸ್ಥೆ, ನೆರೆಹೊರೆಯ ಸೌಂದರ್ಯ ಕಾಪಾಡಲು ಈ ಕಾನೂನು ತಂದಿದೆ. ಅಂದರೆ, ನಿಮ್ಮ ಅಂಗಳದಲ್ಲಿ ತೂಗಾಡುವ ನಿಮ್ಮ ಚಡ್ಡಿ–ಲಂಗ ನೋಡಿ ಪಕ್ಕದ ಮನೆಯವರ ಮನಸ್ಸಿಗೆ ಖೇದವಾಗುವುದಂತೆ! ಅವರ ಮನಸ್ಸು, ಕಣ್ಣುಗಳು ಎಷ್ಟು ಸೂಕ್ಷ್ಮ ಎಂದರೆ, ಒಣಗಿ ಹಾಕಿರುವ ಬಟ್ಟೆ ನೋಡಲು ಆಗುವುದಿಲ್ಲ ಆದರೆ ಬಟ್ಟೆ ಇಲ್ಲದ ಅರೆನಗ್ನರನ್ನ ಆನಂದದಿಂದ ನೋಡಬಲ್ಲರು! ಇದಲ್ಲವೇ ವಿಪರ್ಯಾಸ ಇಲ್ಲಿ ಒಣಗಲು ಹಾಕಿದ ಬಟ್ಟೆ ನೋಡಲು ಅಸಭ್ಯ , ಆದರೆ ಬಿಕಿನಿ, ಮೂರಿಂಚಿನ ಚಡ್ಡಿ, ಕಾಸಗಲದ ಕಂಚುಕಗಳು ಎಲ್ಲೆಡೆ ರಾರಾಜಿಸುತ್ತವೆ!



ಸ್ವಿಟ್ಜರ್ಲೆಂಡ್‌ನಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಅಲ್ಲಿ ಭಾನುವಾರ ಬಟ್ಟೆ ಒಣಹಾಕುವಂತಿಲ್ಲ. ಏಕೆಂದರೆ ಅದು ದೇವರ ದಿನ. ದೇವರಿಗೂ ನಿಮ್ಮ ಒದ್ದೆ ಪಂಚೆ, ಚಡ್ಡಿ, ಬನಿಯನ್ನು,ಮುಂತಾದವುಗಳನ್ನ ನೋಡಲು ಇಷ್ಟವಿಲ್ಲ ಎಂದು ಕಾಣುತ್ತದೆ! ಇಷ್ಟೇ ಅಲ್ಲ, ಮನೆ ಮುಂದಿನ ಹುಲ್ಲು ಕತ್ತರಿಸಬಾರದು, ಬಟ್ಟೆ ಒಣಹಾಕಬಾರದು, ಗಲಾಟೆ ಮಾಡಬಾರದು ಇನ್ನು ಭಾನುವಾರ ಏನು ಮಾಡಬೇಕು ಎಂದು ಕೇಳಿದರೆ, ತೆಪ್ಪಗೆ ಗುಂಡು ಹಾಕಿ ರಜೆ ದಿನವನ್ನ ಮಜಾ ಮಾಡಿ ಅಥವಾ ಸುಮ್ಮನೆ ಊರೆಲ್ಲಾ ಗಿರಗಿರನೆ ಸುತ್ತಿ ಬನ್ನಿ ಎನ್ನುತ್ತಾರೆ. ಸರಕಾರಿ ನಿಯಮದಿಂದ ಸ್ವಿಸ್ ಜನ ಎಂತಹ ಸಂತೋಷದ ಜೀವನ ನಡೆಸುತ್ತಾರೆ ಅಲ್ಲವೇ

ಬಟ್ಟೆ ಒಣಹಾಕುವ ವಿಷಯದಲ್ಲಿ ವಿಶ್ವದ ವಿವಿಧ ದೇಶಗಳಲ್ಲಿ ಹಲವು ರೀತಿಯ ನಿಯಮಗಳಿವೆ. ಇದು ತುಂಬಾ ಆಸಕ್ತಿಕರ ವಿಷಯ!

ಕೆನಡಾದ Nova Scotia ಪ್ರಾಂತ್ಯ 2010ರಲ್ಲಿ ಬಟ್ಟೆಯ ಹರಡುವ ಹಗ್ಗದ ನಿಷೇಧವನ್ನು ತಡೆಯುವ ಕಾಯ್ದೆ ಅಂಗೀಕರಿಸಿ, ಮಾಲೀಕರು ಬಟ್ಟೆ ಒಣಗಿಸಲು ಅನುಮತಿ ನೀಡಿದೆ.

ಅನೇಕ ಯುರೋಪಿಯನ್ ದೇಶಗಳ ಅಪಾರ್ಟ್‌ಮೆಂಟ್‌ಗಳಲ್ಲಿ ಬಾಲ್ಕನಿಯಲ್ಲಿ ಬಟ್ಟೆ ಒಣಹಾಕುವುದನ್ನು ನಿವಾಸ ನಿಯಮಗಳ ಮೂಲಕ ನಿರ್ಬಂಧಿಸಲಾಗಿದೆ .ಪ್ರಮುಖವಾಗಿ ಐತಿಹಾಸಿಕ ಪ್ರದೇಶಗಳಲ್ಲಿ ಮತ್ತು ಪ್ರವಾಸಿ ಕೇಂದ್ರಗಳಲ್ಲಿ.

ಸೌಂದರ್ಯ ದೃಷ್ಟಿ ಯ ಹೆಸರಿನಲ್ಲಿ ಬಟ್ಟೆ ಒಣಹಾಕುವ ನಿಷೇಧ ಮುಖ್ಯವಾಗಿ ಶ್ರೀಮಂತ ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುತ್ತದೆ . ಭಾರತ, ಇಟಲಿ, ಸ್ಪೇನ್‌ನಂಥ ದೇಶಗಳಲ್ಲಿ ಇದು ಸಹಜ ಮತ್ತು ಸ್ವಾಭಾವಿಕ ಚಟುವಟಿಕೆ.

ಆದೇ, ಇತ್ತ ನಮ್ಮ ಭಾರತದಲ್ಲಿ ನೋಡಿ, ಬಟ್ಟೆ ಒಣಹಾಕಲು ಅಂಗಳ ಸಾಲದೆ ಕಿಟಕಿ, ಕಂಬಿ, ಮಾಡಿನ ಹೆಂಚು, ಪಕ್ಕದ ಮನೆಯ ಕಾಂಪೌಂಡು, ಎದುರು ಮನೆಯ ಗೋಡೆ, ಹಿಂದಿನ ಮನೆಯ ಮರ ಗಿಡ ಏನಿದ್ದರೂ, ಎಲ್ಲವನ್ನೂ ಬಳಸುತ್ತೇವೆ. ಅಪಾರ್ಟ್‌ಮೆಂಟ್‌ನ ಬಾಲ್ಕನಿಯಲ್ಲಿ ಸೀರೆ, ಶರ್ಟು, ಟವೆಲ್ .ಒಂದು ಮಿನಿ ಬಟ್ಟೆ ಅಂಗಡಿಯ ಶೋಕೇಸು ತೆರೆದಿಟ್ಟಂತೆ ಭಾಸವಾಗುತ್ತದೆ. ಬಟ್ಟೆಗಳನ್ನು ಒಣಹಾಕಿದಾಗ, ಗಾಳಿಯಲ್ಲಿ ಲಯಬದ್ಧವಾಗಿ ಹಾರಾಡುವ ಬಣ್ಣ ಬಣ್ಣದ ಸೀರೆಗಳು, ಪಂಚೆಗಳು ನೋಡುವುದೇ ಕಣ್ಣಿಗೆ ಚಂದ. ಅದೊಂದು ಸುಂದರ ದೃಶ್ಯಕಾವ್ಯವೇ ಸರಿ! ನಾವು ಇದನ್ನು ಅಸ್ಥಿರ ಕಲೆ ಎಂದು ಪರಿಗಣಿಸುತ್ತೇವೆ ಗಾಳಿಗೆ ತೂಗಾಡುವ ಬಣ್ಣಬಣ್ಣದ ಬಟ್ಟೆಗಳು ನಮ್ಮ ಜೀವಂತಿಕೆಯ ಸಂಕೇತ!ಆ ಮನೆಯಲ್ಲಿ ಸಂಸಾರವಿದೆ ಎಂದು ರಂಗು ರಂಗಿನ ವಸ್ತ್ರಗಳ ಮೂಲಕ ತೋರಿಸುವ ಗುರುತು!ನಮ್ಮ ಮನೆಗಳ ಅಂಗಳದಲ್ಲಿ ಬಟ್ಟೆ ಕಾಣದಿದ್ದರೆ, ಓಹೋ ಮನೆಯಲ್ಲಿ ಯಾರೂ ಇಲ್ಲವೆಂದು ಕಾಣ್ತದೆ , ಎಂದು ಕಳ್ಳಕಾಕರು ಮನೆ ದೋಚಲು ಪ್ಲಾನ್ ಕೂಡಾ ಮಾಡುವುದು ಸಹಜ! ಅಲ್ವಾ ಬಟ್ಟೆ ನಮ್ಮ ಮಾನದ ರಕ್ಷಣೆಯ ಜೊತೆಗೆ ನಮ್ಮ ಮನೆಯ ರಕ್ಷಣೆಯನ್ನೂ ಮಾಡುವುದಾದರೆ, ಬಟ್ಟೆ ಒಣಹಾಕುವುದರಲ್ಲಿ ತಪ್ಪೇನಿದೆ ಅಲ್ವಾ

ಆದರೆ ಅಮೆರಿಕದಲ್ಲಿ ಅಲ್ಲಿ ಈ ಸಾಮಾನ್ಯ ಕೆಲಸಕ್ಕೇ ದಂಡ ತೆರಬೇಕಾದ ಪರಿಸ್ಥಿತಿ ಬಂದಿದೆ! ಬಟ್ಟೆ ಒಣಹಾಕಲು ಕಾನೂನಿನ ಅನುಮತಿ ಪಡೆಯಬೇಕಾಗಿದೆ ಮತ್ತು ಅದಕ್ಕಾಗಿ Right to Dry ಎಂಬ ವಿಚಿತ್ರ ಎನಿಸುವ ಚಳವಳಿಯೇ ಹುಟ್ಟಿಕೊಂಡಿದೆ! ಓದುತ್ತಿರುವ ನೀವು ಹಣೆಗೆ ಕೈ ಇಟ್ಟುಕೊಳ್ಳಲು ಸಿದ್ಧರಾಗಿ 1930ರ ದಶಕದಲ್ಲಿ ಅಮೆರಿಕಕ್ಕೆ ವಿದ್ಯುತ್ ಚಾಲಿತ ಡ್ರೈಯರ್ ಯಂತ್ರ ಲಗ್ಗೆ ಇಟ್ಟಿತು. ಹೊಸ ಯುಗ ಬಂತು! ಮಾನವ ಬಿಡುಗಡೆ ಆದ! ಎಂದು ಜಾಹೀರಾತುದಾರರು ಕೂಗಿದರು. ಎರಡನೇ ಮಹಾಯುದ್ಧದ ನಂತರ Live Better Electrically ಎಂಬ ಪ್ರಚಾರ ನಡೆಯಿತು. ಅದರ ಅಂತರಾರ್ಥ ಸರಳವಾಗಿತ್ತು: ವಿದ್ಯುತ್ ಬಳಸಿ, ಆಧುನಿಕರಾಗಿ!

ಕ್ರಮೇಣ ಅಲ್ಲಿ ಒಂದು ವಿಚಿತ್ರ ಮನೋಭಾವ ಬೆಳೆಯಿತು ಬಿಸಿಲಿಗೆ ಬಟ್ಟೆ ಒಣಹಾಕುವವರು ಬಡವರು ಎಂಬ ಹಣೆಪಟ್ಟಿ! ಡ್ರೈಯರ್ ಇಟ್ಟುಕೊಂಡವರು ಪ್ರತಿಷ್ಠಿತರು ಎಂಬ ಅಹಂ! ಉಚಿತ ಸೌರಶಕ್ತಿ ಬಳಸುವವನು ದರಿದ್ರ; ಹಣ ತೆತ್ತು ವಿದ್ಯುತ್ ವ್ಯಯಿಸುವವನು ಶ್ರೀಮಂತ! ಎಂಥ ವಿಪರ್ಯಾಸ ಅಲ್ಲವೇ

ಅಮೆರಿಕದಲ್ಲಿ HOA (Homeowners Association) ಎಂಬ ಒಂದು ವ್ಯವಸ್ಥೆ ಇದೆ. ಅಲ್ಲಿ ಸುಮಾರು 2.5 ಲಕ್ಷ ಇಂತಹ ಸಂಘಗಳಿದ್ದು 6 ಕೋಟಿ ಜನರ ಬದುಕನ್ನು ನಿಯಂತ್ರಿಸುತ್ತವೆ. ಮನೆಯ ಮುಂಭಾಗ ಹೇಗಿರಬೇಕು, ಮನೆಗೆ ಯಾವ ಬಣ್ಣ ಹಚ್ಚಬೇಕು, ಮನೆಯ ಮುಂದೆ ಯಾವ ಮರ ನೆಡಬೇಕು,ಗಿಡಗಳ ಬಣ್ಣ ನಿರ್ದಿಷ್ಟವಾಗಿರಬೇಕು, ಆ ಮರಗಳಿಗೆ ಎಷ್ಟು ಗ್ಯಾಲನ್ ನೀರು ಬೇಕೂ ಕಸದ ಪ್ರಮಾಣ ಎಷ್ಟಿರಬೇಕು ಇವೆಲ್ಲ ಇವರೇ ತೀರ್ಮಾನಿಸುತ್ತಾರೆ!

ಅದರಲ್ಲಿ ಬಟ್ಟೆ ಒಣಹಾಕುವ ಹಗ್ಗ ಕಟ್ಟುವುದನ್ನೂ ನಿಷೇಧಿಸಿದರು. ಅದಕ್ಕೆ ಅವರು ಕೊಟ್ಟ ಕಾರಣಗಳು ಎರಡು:

**ಅಕ್ಕಪಕ್ಕದ ಮನೆಯವರಿಗೆ ನಿಮ್ಮ ಒಳಉಡುಪು ಕಾಣಿಸಿದರೆ ಅಸಹ್ಯ!**

ಹೊರಗೆ ಹಗ್ಗ ಕಟ್ಟಿದರೆ ಬಡಾವಣೆಯ ಆಸ್ತಿ ಮೌಲ್ಯ (Property Value) ಕಡಿಮೆ ಆಗುತ್ತದೆ!

ನಮ್ಮ ಭಾರತೀಯರಾಗಿದ್ದರೆ: ಅರೆರೆರೆರೇ,ಇದ್ಯಾವ ಸೀಮೆ ರೂಲಿಸ್ ಕಣ್ರೀ ಬಿಸಿಲಿಗೆ ಒಣಗಿದ ಬಟ್ಟೆಯ ಆ ತಾಜಾ ವಾಸನೇನ ಒಂದು ಸಾರಿಯಾದ್ರೂ ಮೂಸಿ ನೋಡ್ರೀ .. ಮನೆ ಮುಂದೆ ಬಟ್ಟೆ ಒಣ ಹಾಕಲು ಜಾಗ ಇದ್ದಷ್ಟೂ, ಮನೆಯ ಮೌಲ್ಯವೇ ಹೆಚ್ಚಾಗುತ್ತೆ ಮಾರ್ರೇ .! ಅಂತ ಮೂಗು ಮುರಿಯುತ್ತಿದ್ದರು.

ಈ ವಿಷಯ ಎಷ್ಟು ಗಂಭೀರವಾಯಿತೆಂದರೆ Drying for Freedom ಎಂಬ ಒಂದು ಸಾಕ್ಷ್ಯಚಿತ್ರವೇ ತಯಾರಾಯಿತು. ಬಟ್ಟೆ ಒಣಗಿಸುವ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಥೆ ಅದು! ಒಬ್ಬ ಮಹಿಳೆ ಊಟಂ ಒಪ್ಪಿಗೆ ಇಲ್ಲ ಎಂಬ ಕಾರಣಕ್ಕೆ ಒಳ್ಳೆಯ ಮನೆಯೊಂದನ್ನು ಕೊಳ್ಳಲು ನಿರಾಕರಿಸಿದರು. ಕಾರಣ ಅಲ್ಲಿ ಹಗ್ಗ ಕಟ್ಟಲು ಅನುಮತಿ ಇರಲಿಲ್ಲ! ಮತ್ತೊಬ್ಬರು ಕೇಳಿದರು: ನಮ್ಮ ತಾತ–ಅಜ್ಜಿಯರಿಗೆ ಇದನ್ನು ಕೇಳಿಸಿದರೆ ತಲೆ ತಿರುಗುತ್ತಿತ್ತು ಬಿಸಿಲಿಗೆ ಬಟ್ಟೆ ಹಾಕುವುದಕ್ಕೂ ಕಾನೂನು ಬೇಕೇ

ಒಂದು ಡ್ರೈಯರ್ ಯಂತ್ರ ಒಂದು ಸುತ್ತು ಬಟ್ಟೆ ಒಣಗಿಸಿದಾಗ ಸುಮಾರು 2 ಕೆ.ಜಿ. ಇಂಗಾಲದ ಡೈ ಆಕ್ಸೈಡ್ ಬಿಡುಗಡೆ ಮಾಡುತ್ತದೆ! ಬಿಸಿಲಿನಲ್ಲಿ ಒಣಗಿಸಿದರೆ ಶೂನ್ಯ ಪರಿಸರ ಹಾನಿ!ಖರ್ಚಿನ ಲೆಕ್ಕ ಹಾಕಿದಾಗ, ಒಂದು ಹಗ್ಗ ಮತ್ತು ಒಂದಷ್ಟು ಕ್ಲಿಪ್, ಒಂದು ಸುತ್ತಿಗೆಗೆ ಕೇವಲ 20 ಡಾಲರ್ ಖರ್ಚಾದರೆ, ಡ್ರೈಯರ್ ನಿರ್ವಹಣೆಗೆ 200 ಡಾಲರ್ ಬೇಕು!ಅದು ಸಾಲದೆಂಬಂತೆ,ಅಮೆರಿಕದಲ್ಲಿ ಪ್ರತಿ ವರ್ಷ ಸುಮಾರು 2,900 ಡ್ರೈಯರ್ ಬೆಂಕಿ ಅಪಘಾತಗಳಾಗಿ ಕೋಟ್ಯಂತರ ರೂಪಾಯಿ ನಷ್ಟವಾಗುತ್ತದೆ. ಅಂಗಳದಲ್ಲಿ ಕಟ್ಟಿದ ಹಗ್ಗ ಎಂದೂ ಮನೆ ಸುಟ್ಟ ಉದಾಹರಣೆ ಇಲ್ಲ!ಅದು ನಮ್ಮ ಪುಕ್ಕಟೆ ಆಪ್ತ ರಕ್ಷಕ!

Alexander Lee ಎಂಬ ಪರಿಸರ ಹೋರಾಟಗಾರ ಈ ವ್ಯವಸ್ಥೆ ವಿರುದ್ಧ ದನಿ ಎತ್ತಿದರು. ಇದರ ಫಲವಾಗಿ ಫ್ಲೋರಿಡಾ ಮೊದಲ ಬಾರಿಗೆ ಈ ಹಕ್ಕನ್ನು ಮಾನ್ಯ ಮಾಡಿತು. ಇಂದು ಕ್ಯಾಲಿಫೋರ್ನಿಯಾ, ಟೆಕ್ಸಾಸ್ ಸೇರಿದಂತೆ 19 ರಾಜ್ಯಗಳಲ್ಲಿ ಈ ಕಾನೂನು ಇದೆ. ಕೆಲವು ರಾಜ್ಯಗಳು ಇದನ್ನು Solar Access Laws (ಸೌರಶಕ್ತಿ ಬಳಕೆ ಹಕ್ಕು) ಅಡಿ ತಂದಿವೆ.ಬಿಟ್ಟಿಯಾಗಿ ಬಿಸಿಲಿಗೆ ಬಟ್ಟೆ ಒಣಗಿಸುವುದೂ ಒಂದು ಸೌರಶಕ್ತಿಯ ಬಳಕೆ ಎಂಬುದು ಎಷ್ಟು ಅರ್ಥಪೂರ್ಣ ಜಾಣತನ ಅಲ್ವಾ

ನಮ್ಮ ಅಂಗಳದಲ್ಲಿ ಹಾರಾಡುವ ಬಟ್ಟೆಗಳಲ್ಲಿ ಒಂದು ದೊಡ್ಡ ಜೀವನ ತತ್ವ ಅಡಗಿತ್ತು ಅದು ಪ್ರಕೃತಿಯ ಜೊತೆಗಿನ ಸಹಬಾಳ್ವೆ. ಅದನ್ನು ಹಳೆಯ ಕಾಲದ ಬಡತನ ಎಂದು ಅಮೆರಿಕ ತಿರಸ್ಕರಿಸಿ ಯಂತ್ರಕ್ಕೆ ಮಾರುಹೋದರು. ಪರಿಸರ ಹಾಳಾದ ಮೇಲೆ, ಜೇಬು ಖಾಲಿಯಾದ ಮೇಲೆ ಅವರಿಗೆ ಮತ್ತೆ ಪ್ರಕೃತಿಯ ಅರಿವಾದೀತು.

ನಮ್ಮ ದೇಶದಲ್ಲೂ ಈಗ ಕಾಂಕ್ರೀಟ್ ಕಾಡುಗಳು ಬೆಳೆಯುತ್ತಿವೆ. ಬಟ್ಟೆ ಒಣಹಾಕಲು ಜಾಗವಿಲ್ಲದೆ ಜನರು ಪರದಾಡುತ್ತಿದ್ದಾರೆ. ನಮ್ಮ ಅಂಗಳದ ಹಗ್ಗ ಅದು ನಮ್ಮ ಪರಂಪರೆಯ ಒಂದು ಸಣ್ಣ ಕೊಂಡಿ ಇದ್ದಂತೆ. ಅದನ್ನು ತುಂಡರಿಸಿದರೆ, ನಮ್ಮ ನೆಲ–ಜಲ–ಗಾಳಿಯ ಜೊತೆಗಿನ ನಂಟೂ ಕಡಿದುಹೋಗುತ್ತದೆ.

ಕೊನೆಯ ಮಾತು: ಅಂಗಳ ಇರುವವರೆಗೆ ಹಗ್ಗ ಕಟ್ಟಿ, ಬಿಸಿಲಿಗೆ ಬಟ್ಟೆ ಒಣಹಾಕಿ. ಅದು ಬರೀ ಹಕ್ಕಲ್ಲ ಅದು ನಾವು ಪ್ರಕೃತಿಗೆ ನೀಡುವ ಗೌರವ!ಪ್ರಕೃತಿಯನ್ನು ಆಪ್ತವಾಗಿ ಬಳಸಿಕೊಳ್ಳುವ ಒಂದು ಮಾರ್ಗ!ಭೂಗೋಳಕ್ಕೆ ನಾವು ನೀಡುವ ಕೊಡುಗೆ ಕೂಡಾ!

ಆದರೆ ಇನ್ನು ಮುಂದೆ ವಿದೇಶ ಪ್ರವಾಸಕ್ಕೆ ಹೋದಾಗ, ಆ ದೇಶದ ನಿಯಮಗಳನ್ನ ತಿಳಿಯದೇ ಅಪ್ಪಿತಪ್ಪಿ ಹೋಟೆಲ್ ಕಿಟಕಿಯಲ್ಲಿ ಬನಿಯನ್, ಚಡ್ಡಿ, ಒಳಉಡುಪುಗಳು ಅಷ್ಟೇ ಅಲ್ಲಾ ಏನೇ ಒಣಹಾಕಿಬಿಟ್ಟೀರೀ! ಜಾಗ್ರತೆ! ಬಟ್ಟೆ ಒಣಗುವ ಮೊದಲೇ ನಿಮ್ಮ ಕೈಗಳಿಗೆ ಕೋಳ ಬಿದ್ದಿರುತ್ತದೆ. ಬಟ್ಟೆ ತೂಗಾಡಿಸಿದ ಅಪರಾಧಕ್ಕೆ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕಾಗಬಹುದು!ಏಕೆಂದರೆ, Ignorence of law is not an excuse ಕಾನೂನಿನ ಅಜ್ಞಾನವು ನೆಪವಾಗಲಾರದು! ವಂದನೆಗಳು.

# ಸುಡುವ ಸೂರ್ಯನಿಗೊಂದು ಪತ್ರ

ಅಪ್ಪ ಜಗತ್ಪಾಲಕ ಸೂರ್ಯದೇವನೇ,



| ವೀಣಾ ಹೇಮಂತ್‌ಗೌಡ ಪಾಟೀಲ್

ನಿನಗೆ ಹೀಗೊಂದು ಪತ್ರ ಬರೆಯುವ ಪ್ರಮೇಯ ಬದುಕಿನಲ್ಲಿ ಬರುತ್ತದೆ ಎಂದು ಖಂಡಿತವಾಗಿಯೂ ಅಂದುಕೊಂಡಿರಲಿಲ್ಲ ಆದರೇನು ಮಾಡುವುದು ಇದೀಗ ನಿನಗೆ ಪತ್ರ ಬರೆಯಲೇಬೇಕಾದ, ಬರೆದು ಕ್ಷಮೆ ಕೇಳಿಕೊಳ್ಳಲೇಬೇಕಾದ ಕಾಲ ಕೂಡಿ ಬಂದಿದೆ.

ನೀನು ನಮ್ಮನ್ನು ಕ್ಷಮಿಸುವೆ ಎಂಬ ಭರವಸೆ ನನಗಿಲ್ಲ. ಆದರೆ ನಮ್ಮ ಸ್ವಯಂಕೃತ ಅಪರಾಧದ ತಪ್ಪೊಪ್ಪಿಗೆಯನ್ನು ನಿನ್ನ ಮುಂದೆ ಹೇಳಿಕೊಂಡು ನನ್ನ ಮನದ ಭಾರವನ್ನು ಹಗುರವಾಗಿಸಿಕೊಳ್ಳುವ ಆಶಯ ನನ್ನದು.

ನಮ್ಮ ಬದುಕನ್ನು ಬೆಳಗುವ ನಮ್ಮೆಲ್ಲ ದೈನಂದಿನ ಕೃತ್ಯಗಳಿಗೆ ಸಾಕ್ಷಿಯಾಗುವ ನಮಗೆ ಆಹಾರ ತಯಾರಿಸಿಕೊಳ್ಳಲು ಬೇಕಾಗುವ ಸಸ್ಯಗಳಿಗೆ ಸಂಜೀವಿನಿಯಾಗಿರುವ, ನಿನ್ನ ಅಸ್ತಿತ್ವವಿಲ್ಲದೆ ನಾವ್ಯಾರು ಇಲ್ಲ ಎಂಬ ಅರಿವನ್ನು ಹೊಂದಿದ್ದರೂ ಕೂಡ, ತಿಳಿದು ಕೂಡ ಅಜ್ಞರಂತೆ ವರ್ತಿಸುತ್ತಿರುವ ನಿನ್ನ ಮಕ್ಕಳ ತಪ್ಪು ಕ್ಷಮಿಸಲಾರದ ಮಹಾಪರಾಧ... ನಿಜ.

ಕೇವಲ ನಾಲ್ಕೈದು ದಶಕಗಳ ಹಿಂದೆ ಉದ್ಯಮಗಳು ತೆವಳುತ್ತಿರುವ ಕಾಲದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಅವಶ್ಯಕತೆ ಇತ್ತು.... ಇದೀಗ ಸರ್ಕಾರದ ಕಟ್ಟುನಿಟ್ಟಿನ ನಿಯಮಾವಳಿಗಳ ಚಾಪೆಯ ಕೆಳಗೆ ನುಸುಳುವ ಕಲೆ ಜನರಿಗೆ ಗೊತ್ತಾಗಿದೆ. ಮತ್ತೆ ಕೆಲವರು ರಂಗೋಲಿಯ ಕೆಳಗೆ ನುಸುಳುವ ಚಾಣಾಕ್ಷತೆಯನ್ನು ಕೂಡ ಹೊಂದಿದ್ದಾರೆ..... ಎಲ್ಲೋ ಒಬ್ಬಿಬ್ಬರು ಹೀಗೆ ಮಾಡಿದ್ದರೆ ನೀನು ಕೂಡ ಹೋಗಲಿ ಬಿಡು ಎಂದು ಕ್ಷಮಿಸಿ ಬಿಡುತ್ತಿದ್ದೆ ಅಲ್ವೇ

ಆದರೆ ಉದ್ಯಮಗಳು ಉಗುಳುವ ಹೊಗೆಯನ್ನು ನಿನ್ನ ಅತಿ ನೇರಳೆ ಕಿರಣಗಳ ತಾಪವನ್ನು ತಡೆಯಲೆಂದು ಇರುವ ರಕ್ಷಾ ಕವಚ ಓಜೋನನ್ನು ಒಂದು ಇಡೀ ಆಸ್ಟ್ರೇಲಿಯಾ ಖಂಡದಷ್ಟು ಛಿದ್ರಗೊಳಿಸಿದ ಮೇಲೆ ನಿನಗೆ ಕೋಪ ಬರದಿದ್ದರೆ ಹೇಗೆ


ಉಣ್ಣುವ ತಟ್ಟೆಯನ್ನು ಛೇದ ಮಾಡುವಂತಹ ವಿಸ್ಮೃತಿ ನಮಗೇಕೆ ಬಂತು ಎಂದು ನಿನಗೆ ಕೋಪ ಬಂದಿದ್ದರೆ ಖಂಡಿತವಾಗಿಯೂ ಅದು ನಿನ್ನ ತಪ್ಪಲ್ಲ.

ಹಾಗೆಂದು ಎಲ್ಲ ತಪ್ಪನ್ನು ಉದ್ಯಮಗಳ ಮೇಲೆ, ಅವುಗಳು ಕಾರುವ ಕರಿ ಹೊಗೆಗಳ ಮೇಲೆ ಹಾಕಿ ನಾವು ಸಾಚಾ ಸಿದ್ದಪ್ಪಗಳು ಎಂದುಕೊಂಡರೆ ಅದು ನಮ್ಮ ಮೂರ್ಖತನವಾದೀತು. ನಿನ್ನ ಈ ಪ್ರಕೋಪಕ್ಕೆ ನಾವು ಮನುಷ್ಯರು ಕೂಡ ನಮ್ಮ ತಪ್ಪಿನ ಸಿಂಹಪಾಲನ್ನು ಸಲ್ಲಿಸಿದ್ದೇವೆ.

ನಮ್ಮದೇ ಸಂತಾನವನ್ನು ಹೆಚ್ಚಿಸಿಕೊಳ್ಳುವ ನಮ್ಮದೇ ಬದುಕನ್ನು ಮತ್ತಷ್ಟು ಮಗದಷ್ಟು ಚೆನ್ನಾಗಿ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಕಾಡನ್ನು ಕಡಿದು ನಾಡಾಗಿಸಿದ್ದೇವೆ.... ಕಾಡಿನ ಪ್ರಾಣಿಗಳು ಅವು ಕೂಡ ನಿನ್ನ ಮಕ್ಕಳಲ್ಲವೇ ಅವುಗಳ ಮನೆಗೆ ಬೆಂಕಿ ಇಟ್ಟು ಅವರನ್ನು ನೆಲೆಗೇಡಿಯನ್ನಾಗಿಸಿ ನಾವು ಬೆಚ್ಚಗಿನ ಗೂಡಿನಲ್ಲಿ ಇರಲು ಸಾಧ್ಯವೇ ಧಗೆಯ ಒಡಲೇ ನಮ್ಮ ಬದುಕು

ಆಗುತ್ತದೆ ಎಂಬ ಅರಿವಿಲ್ಲದೆ ಅಭಿವೃದ್ಧಿಯ ಹೆಸರಿನಲ್ಲಿ, ಮೂಲ ಸೌಕರ್ಯಗಳನ್ನು ಹೆಚ್ಚಿಸುವ ನೆವದಲ್ಲಿ ಕಾಡನ್ನು ನಾಶ ಮಾಡಿರುವುದು, ಗಿಡ ಮರಗಳಿಗೆ ಕೊಡಲಿಯ ಪ್ರಹಾರ ಮಾಡಿ ಅವುಗಳನ್ನು ಧರಾಶಾಹಿಯಾಗಿಸಿರುವುದು ನಮ್ಮದೇ ಸ್ವಯಂಕೃತ ಅಪರಾಧವಲ್ಲವೇ

ಒಳ್ಳೆಯ ಬೆಳೆ ಬೇಕು ಎಂಬ ಆಶಯ ತಪ್ಪಲ್ಲ ಆದರೆ ಕಿಸೀ ಬಿ ಕೀಮತ್ ಪರ್ ಎಂಬ ಹಿಂದಿಯ ಹೇಳಿಕೆಯಂತೆ ಖಂಡಿತವಾಗಿಯೂ ಅಲ್ಲ. ನಮ್ಮ ಹೆಚ್ಚಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅದೆಷ್ಟೇ ಕೆಳಮಟ್ಟಕ್ಕೆ ಇಳಿಯಲು ಮನುಷ್ಯ ಸಿದ್ಧನಾಗಿದ್ದಾನೆ. ಉಳಿವಿಗಾಗಿನ ಈ ಹೋರಾಟದಲ್ಲಿ ಕೇವಲ ತನ್ನ ಉಳಿವಿನ ಕುರಿತು ಮಾತ್ರ ಯೋಚಿಸುತ್ತಿರುವ ಆತ ಅತಿಯಾದ ದುರಾಸೆಯಿಂದ ಭೂಮಿ ತಾಯಿಯ ಒಡಲಿಗೆ ವಿಷ ಹಾಕುತ್ತಿದ್ದಾನೆ. ಏನನ್ನಾದರೂ ತೆರುವ, ಎಷ್ಟನ್ನಾದರೂ ತೆರುವ ಮೂಲಕ ನಾವು ಫಲವತ್ತಾದ ಭೂಮಿ ತಾಯಿಯ ಮಡಿಲಿಗೆ ಹಾಲಾಹಲದಂತಹ ರಾಸಾಯನಿಕಗಳನ್ನು ಬೆರೆಸಿದರೆ



ಆಕೆಯಾದರೂ ಹೇಗೆ ಸುಮ್ಮನಿದ್ದಾಳು ಅಮೃತದಂತಹ ಬದುಕನ್ನು ನಮಗೆ ಕೊಡಮಾಡಿರುವ ಭೂಮಿತಾಯಿಯ ಮಡಿಲಿನಲ್ಲಿ ಗರಿಕೆ ಹುಲ್ಲು ಕೂಡ ಬೆಳೆಯದಂತೆ ಬಂಜರು ಮಾಡಿ ಇದೀಗ ಗೋಳಿಟ್ಟರೆ ಏನು ಪ್ರಯೋಜನ

ಸಹಿಸಿ ಸಾಕಾದ ಆಕೆ ಕೂಡ ಧಗೆಯ ಒಡಲಾಗಿ ನಮಗೆ ಶಿಕ್ಷೆ ನೀಡುತ್ತಿದ್ದಾಳೆ.... ಇನ್ನು ಆಪೋಷನ ತೆಗೆದುಕೊಳ್ಳುವುದಷ್ಟೇ ಬಾಕಿ.

ಇನ್ನು ಭೂಮಿ ತಾಯಿಯ ಒಡಲಿಗೆ ನಾವು ಹಾಕಿದ ವಿಷ, ಕಾರ್ಖಾನೆಗಳ ರಾಸಾಯನಿಕಗಳು ನಾವು ಕುಡಿಯುವ ಗಂಗೆಯನ್ನು ಕಲುಷಿತಗೊಳಿಸಿದೆ. ತನ್ನ ಒಡಲಲ್ಲಿರುವ ಆಮ್ಲಜನಕವನ್ನು, ಲವಣ ಮತ್ತು ಖನಿಜಗಳನ್ನು ಪೋಷಕಾಂಶಗಳ ರೂಪದಲ್ಲಿ ನಮಗೆ ನೀರಿನ ಮೂಲಕ ನೀಡುವ, ನಾವೆಲ್ಲರೂ ಗಂಗಾಮಾತೆ ಎಂದು ಪೂಜಿಸುವ ಜಲವನ್ನು ಕಲುಷಿತಗೊಳಿಸಿದ ಮಹಾಪರಾಧ ಕೂಡ ನಮ್ಮದೇ. ನಾವು ಹುಲು ಮಾನವರಂತೆಯೇ ಜಲಚರಗಳು ಕೂಡ ನಿನ್ನ ಮಕ್ಕಳು.

ನಿನ್ನ ಒಡಲಿಗೆ ನಮ್ಮೆಲ್ಲ ಕಲ್ಮಶಗಳನ್ನು ಎಸೆಯುವ, ರಾಸಾಯನಿಕಗಳನ್ನು ಬೆರೆಸುವ, ನಿನ್ನೊಡಲನ್ನು ಮಲಿನಗೊಳಿಸುವ ನಿನ್ನಲ್ಲಿಯೇ ತಮ್ಮ ಬದುಕನ್ನು ಕಂಡುಕೊಂಡಿರುವ ನಿನ್ನ ಮಕ್ಕಳಾದ ಜಲಚರ ವಾಸಿಗಳಿಗೆ ಕೇಡು ಬಗೆಯುವ ನಮ್ಮ ಕುರಿತು ನಿನಗೆ ಪ್ರೀತಿಯಾದರೂ ಹೇಗೆ ಹುಟ್ಟೀತು ನಿನ್ನ ದ್ವೇಷಕ್ಕೂ ನಾವು ಅನರ್ಹರು ಎಂದು ಮಾತ್ರ ಹೇಳಬಲ್ಲೆ. ತಿಳಿಯದೆ ಮಾಡುವುದು ಮೂಢತನ ಎಂದಾದರೆ ತಿಳಿದು ಕೂಡ ಮಾಡುವ ನಮ್ಮ ಅಜ್ಞಾನಕ್ಕೆ ಬೆಲೆ ತೆರಬೇಕಾದವರು ನಾವೇ ಅಲ್ಲವೇ !

ಈ ಹಿಂದೆ ಪ್ರತಿಯೊಬ್ಬರ ಮನೆಗಳಲ್ಲಿ ಹಿತ್ತಲಿರುತ್ತಿತ್ತು ಅಲ್ಲಿ ದಿನಬಳಕೆಯ ತರಕಾರಿಗಳ ಜೊತೆಗೆ ಹೂವು ಹಣ್ಣು ಗಳ ಗಿಡಮರಗಳ ಜೊತೆಗೆ ದೊಡ್ಡದಾದ ಹುಣಸೆ ಮರಗಳು ಕೂಡ ಇರುತ್ತಿದ್ದವು . ನಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸಿ ಇತರರಿಗೆ ಕೊಡುವಷ್ಟು ಕೂಡ ವಿಶಾಲತೆ ನಮ್ಮದಾಗಿತ್ತು. ಆದರೆ ಆಧುನಿಕತೆಯ ಹೆಸರಿನಲ್ಲಿ ಅಲಂಕಾರಿಕ ಗಿಡಗಳನ್ನು ಮಾತ್ರ ನೆಟ್ಟು ನೀರು ದೊರೆಯುವುದಿಲ್ಲ ಎಂಬ ನೆಪ ವಡ್ಡಿ ಗಿಡ ಮರಗಳಿಗೆ ಕೊಡಲಿ ಹಾಕಿರುವ ನಮ್ಮ ಬುದ್ಧಿಗೇಡಿತನಕ್ಕೆ ನೀನಾದರೂ ಏನು ಮಾಡುತ್ತಿ



ಆಗಲೂ ಕೂಡ ಬೇಸಿಗೆ ಇತ್ತು ಆದರೆ ದಿನದ ಕೆಲಸಗಳನ್ನು ಮಾಡಿ ಪೂರೈಸಿ ದಣಿದ ದೇಹ ಮನೆಯ ಹಿತ್ತಲಿನಲ್ಲಿ ಕಟ್ಟೆಯ ಮೇಲೆ ಮರದ ಕೆಳಗೆ ಬರಿ ನೆಲದ ಮೇಲೆ ಮಲಗಿದರು ಕೂಡ ಬೀಸುವ ಮರಗಳ ತಂಗಾಳಿ ನಮಗೆ ವಿಶ್ರಾಂತಿಯ ಜೊತೆಗೆ ನೆಮ್ಮದಿಯನ್ನು ಕೂಡ ನೀಡುತ್ತಿದ್ದವು.

ಈಗ ಮನೆ ಮನೆಗಳಲ್ಲಿ ಫ್ಯಾನ್‌ಗಳು, ಏರ್ ಕೂಲರ್ ಗಳು ಎಸಿಗಳ ಭರಾಟೆ ಇದೆ, ನಿಜ! ಆದರೆ ಭೂಮಿ ತಾಯಿಯ ಮಡಿಲಲ್ಲಿ ಬೆಳೆದ ಮರಗಳು ಕೊಡುವ ನೆರಳು ಮತ್ತು ಗಾಳಿಯನ್ನು ನೀಡಲು ಯಾರಿಂದಲೂ ಸಾಧ್ಯವಿಲ್ಲ. ನಮಗೆ ಶುದ್ಧ ಆಮ್ಲಜನಕವನ್ನು, ನೆರಳನ್ನು ಫಲ ಪುಷ್ಪಗಳನ್ನು ನೀಡುವ ಅಂತಹ ಮರಗಳನ್ನು ಬೇರು ಬಿಟ್ಟು ಕಾಂಪೌಂಡ್ ನಾಶ ಮಾಡುತ್ತವೆ ಎಂಬ ಕಾರಣಕ್ಕಾಗಿ ಕಡಿದೊಗೆದಿರುವ ನಾವು ಮನೆಯ ಯಾವ ಮೂಲೆಯಲ್ಲಿ ಹೋದರೂ ನೆಮ್ಮದಿಯ ನೆಳಲು ಕಾಣದೆ ನಿಟ್ಟುಸಿರು ಬಿಡುವಂತಹ ಪರಿಸ್ಥಿತಿ ನಮ್ಮದಾಗಿದೆ.

ಇನ್ನು ನಾವು ಬಳಸುವ ಎ.ಸಿ ಗಳು ವಾತಾವರಣದಲ್ಲಿ ಮೀಥೇನ್ ಅನಿಲವನ್ನು ಬಿಡುಗಡೆ ಮಾಡಿ ವಾಯು ಮಾಲಿನ್ಯವನ್ನು ಉಂಟು ಮಾಡುತ್ತವೆ. ಇದರ ಪ್ರಮಾಣ ಹೆಚ್ಚಿದಷ್ಟು ನಾವು ಮನುಷ್ಯರಿಗೆ ಅಪಾಯ ತಪ್ಪಿದ್ದಲ್ಲ.

ಭೂಮಿಯನ್ನು ಮಾತ್ರವಲ್ಲ ಆಕಾಶವನ್ನು ಕೂಡ ನಮ್ಮ ಅತಿಯಾದ ದಾಹಕ್ಕೆ ಆಪೋಷಣೆ ತೆಗೆದುಕೊಂಡು ಅಲ್ಲೂ ಕೂಡ ವಾಯು ಮಾಲಿನ್ಯದ ಮೂಲಕ ಹಾಳು ಮಾಡಿರುವ ನಮ್ಮ ಮೌಢ್ಯತೆಯನ್ನು ಸಹಿಸುವುದು ನಿನಗೆ ಕೂಡ ಅಸಾಧ್ಯ ಅಲ್ಲವೇ

ಹೀಗೆ ನೆಲ,ಜಲ, ವಾಯುವನ್ನು ಹಾಳು ಮಾಡಿರುವ ನಾವು ಗಿಡ ಮರಗಳನ್ನು ಕಡಿದೊಗೆದು ಪರಿಸರವನ್ನು ನಾಶ ಮಾಡಿದ್ದೇವೆ. ಪರಿಣಾಮವಾಗಿ ವಾತಾವರಣದ ತಾಪಮಾನ ಹೆಚ್ಚಾಗಿದೆ. ಸಹಸ್ರಾರು ವರ್ಷಗಳಿಂದ ಒಂದು ಸೆಂಟಿಮೀಟರ್ ಇನ್ನಷ್ಟು ಕರಗದ ಬೃಹದಾಕಾರದ ಹಿಮದ ನೀರ್ಗಲ್ಲುಗಳು ಇನ್ನಿಲ್ಲದಂತೆ ಕರಗಿ ಹರಿಯುತ್ತಿವೆ ಪರಿಣಾಮವಾಗಿ ವಿಪರೀತ ಬಿಸಿಲು ಚಳಿ ಮಳೆಗಳ ತೊಂದರೆಗಳಿಂದ ನಾವು ನಲುಗುತ್ತಿದ್ದೇವೆ.

ನಮ್ಮ ಪೂರ್ವಜರು ನಮಗೆ ಸ್ವಚ್ಛ,ಶುದ್ಧವಾದ ಹಾಗೂ ಬದುಕಲು ಯೋಗ್ಯವಾದ ಪರಿಸರವನ್ನು ನೀಡಿದ್ದರು ಅದು ಅವರ ಕರ್ತವ್ಯವಾಗಿತ್ತು.

ಈ ಭೂಮಿಯ ಪ್ರಜೆಗಳಾದ ನಾವುಗಳು ನಮ್ಮ ಮುಂದಿನ ಪೀಳಿಗೆಗೆ ಅಷ್ಟೇ ಬದುಕಲು ಯೋಗ್ಯವಾದ ವಾತಾವರಣವನ್ನು ಹೊಂದಿರುವ ಪರಿಸರವನ್ನು ಬಿಟ್ಟು ಕೊಡಬೇಕಾದ ಜವಾಬ್ದಾರಿ ಹೊತ್ತಿದ್ದು ಆ ನಿಟ್ಟಿನಲ್ಲಿ ಇನ್ನು ಮುಂದೆ ಯಾದರೂ ಕಾರ್ಯನಿರ್ವಹಿಸಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈಗಾಗಲೇ ಆಗಿ ಹೋಗಿರುವ ಪ್ರಮಾದವನ್ನು ಸರಿಪಡಿಸಲು ಇಂದಿನಿಂದಲೇ ಕಾರ್ಯ ನಿರ್ವಹಿಸುತ್ತೇವೆ ಎಂಬ ಭರವಸೆಯನ್ನು ಭೂಮಿಯ ವಾಸಿಗಳಾದ ನಾವು ನಿನಗೆ ನೀಡುತ್ತೇವೆ. ಇನ್ನಾದರೂ ನಿನ್ನ ಕೋಪ ತಾಪವನ್ನು ಬದಿಗಿಟ್ಟು ಎಳೆಯ ಹದವಾದ ಬಿಸಿಲನ್ನು ಮಾತ್ರ ನಮಗೆ ನೀಡು. ನಿನ್ನ ಮಕ್ಕಳನ್ನು ಕಾಪಾಡು ಎಂದು ಕೇಳಿಕೊಳ್ಳುವ


ನಿನ್ನ ಮಕ್ಕಳು

# ಮಕ್ಕಳಲಿ ಮರೆಯಾಗುತಿರುವ ನೈತಿಕತೆ..!

ಮನದ ಮಾತು...



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.



ನಮ್ಮ ಸಮಾಜ ಬದಲಾವಣೆ ಮತ್ತು ಸುಧಾರಣೆ ಕಂಡಂತೆ ಜಗತ್ತಿನಲ್ಲಿ ಪ್ರಗತಿಗಳು ಮತ್ತು ಆವಿಷ್ಕಾರಗಳು ಹೆಚ್ಚಾಗಿವೆ. ಇವು ಕೆಲಸಗಳನ್ನು ಸುಲಭವಾಗಿ ಮಾಡಿದರು ಮಾನಸಿಕ ವ್ಯವಸ್ಥೆ ಮತ್ತು ಭಾವನಾಲೋಕವನ್ನು ಕೆಲವು ಸಾರಿ ಜಟಿಲವಾಗಿ ಮಾಡಿಬಿಡುತ್ತವೆ. ಮೊದಲಾದರೆ ಮಕ್ಕಳಿರಲವ್ವ ಮನೆ ತುಂಬಾ ಎನ್ನುತ್ತಾ ಪ್ರತಿ ಮನೆಯಲ್ಲಿ 8 10 ಮಕ್ಕಳಿರುತ್ತಿದ್ದವು... ಚಿಕ್ಕಪ್ಪ ದೊಡ್ಡಪ್ಪ ಚಿಕ್ಕಮ್ಮಂದಿರ ನೆರಳಲ್ಲಿ ಅಜ್ಜಿ ಅಜ್ಜರ ಒಡನಾಟದಲ್ಲಿ ಅಣ್ಣ ತಮ್ಮಂದಿರ ಭಾಗಿತ್ವದಲ್ಲಿ ಬೆಳೆಯುವ ಮಕ್ಕಳಿಗೆ ಸಹಜವಾಗಿ ಜೀವನ ಪಾಠ ಮತ್ತು ನೈತಿಕತೆಯ ಅರಿವು ಆಗುತ್ತಿತ್ತು ಕಷ್ಟ ಒಗ್ಗಟ್ಟು ಮಾನಸಿಕ ದೃಢತೆ ಇವೆಲ್ಲವನ್ನೂ ಕೂಡ ಕುಟುಂಬಗಳು ಕಲಿಸಿಕೊಡುತ್ತಿದ್ದವು. ಆದರೆ ಇಂದಿನ ದಿನಗಳಲ್ಲಿ ಕೆಲಸಕ್ಕೆ ಕಚೇರಿಗೆ ಹೋಗುವ ತಂದೆ ತಾಯಿಗಳು ಮನೆಯಲ್ಲಿ ಒಂಟಿಯಾಗಿ ಬೆಳೆಯುವ ಮಕ್ಕಳು ಜೀವನದ ನೈತಿಕ ಶಿಕ್ಷಣದಿಂದ ದೂರ ಉಳಿದುಬಿಟ್ಟಿದ್ದಾರೆ...ಸಣ್ಣ ಸಣ್ಣ ವಿಷಯಗಳಿಗೆ ಮನಸ್ತಾಪ ಮಾಡಿಕೊಳ್ಳುವುದು,ಅಂದುಕೊಂಡಂತೆ ಆಗದಿದ್ದರೆ ಡಿಪ್ರೆಶನ್ ಗೆ ಹೋಗುವ ಪೀಳಿಗೆ.... ಹೆಚ್ಚುವ ಹಠಮಾರಿತನ ಏಕಾಂಗಿ ಭಾವ. ಇದರೊಟ್ಟಿಗೆ ಮಕ್ಕಳು ಸದಾಕಾಲ ಯಾಂತ್ರಿಕ ಉಪಕರಣಗಳಜೊತೆ ಒಡನಾಡುವದರಿಂದ ಭಾವನಾತ್ಮಕವಾಗಿ ವಿಮುಖರಾಗುತಿದಾರೆ. ಸದಾಕಾಲ ಮೊಬೈಲ ಎಂಬ ಉಪದ್ರವಿ ಜಂತುವನು ಒತ್ತುತ್ತಲೆ ಬೇರೊಂದು ಪ್ರಪಂಚಕೆ ಅವರು ಕಣ್ಣುತೆರದಿರುತ್ತಾರೆ. ಅಂಗೈಯಲ್ಲೇ ಅರಮನೆ ಎಂಬಂತೆ ಬೇಕಾದವನ್ನು ಬೇಡದನ್ನು ತೋರಿಸುವ ಗಣಕ.

ಹಾಗಾದರೆ ಮಕ್ಕಳನು ಸೂಕ್ತವಾಗಿ ಬೆಳಸಲು ಏನು ಅವಶ್ಯಕ. ಕೆಲವು ಸಲಹೆ ಸೂಚನೆಗಳು ಮತ್ತು ಗಾಢವಾಗಿ ಬೇರೂರಿ ನಿಲ್ಲುವ ಆದರ್ಶಗಳು ಮಕ್ಕಳನು ಒಂದು ಬೌದ್ಧಿಕ ಉನ್ನತಿಗೆ ಕೊಂಡೊಯ್ಯುವದು.

**ಶಿಸ್ತು ಮತ್ತು ಸ್ವಾವಲಂಬನೆ:** ಮಕ್ಕಳು ಎದ್ದ ತಕ್ಷಣ ತಮ್ಮ ಹಾಸಿಗೆ ತಾವೇ ಮಡಚಿ ಇಡುವದು. ಕುಡಿದ ತಟ್ಟೆ ಲೋಟಗಳನು ತೊಳೆದು ಇಡುವುದು. ಶಾಲೆಯಿಂದ ಬಂದ ತಕ್ಷಣ ಅವರ ವಸ್ತುಗಳನ್ನು ಸ್ವಸ್ಥಾನದಲ್ಲಿ ಇಡುವುದು ಇವೆಲ್ಲವೂ ಸಣ್ಣ ಸಣ್ಣ ವಿಷಯಗಳ ಆದರೂ ಬದುಕನ್ನು ಚೊಕ್ಕಟ್ಟವಾಗಿರುವುದಕ್ಕೂ ಮತ್ತು ಸ್ವಾವಲಂಬನೆಗು ಮಾರ್ಗದರ್ಶೆಯಾಗುತ್ತದೆ.ಮನೆಯ ಸಣ್ಣ ಪುಟ್ಟ ಕೆಲಸಗಳಲ್ಲಿ ಮಕ್ಕಳನ್ನು ಸೇರಿಸುವುದು?ಅಡುಗೆ ಮನೆಯಲ್ಲಿ ನೀರು ತರುವುದು, ತರಕಾರಿ ತೊಳೆಯುವುದು, ತಟ್ಟೆಗಳನ್ನು ಜೋಡಿಸುವುದು?ಇವು ಕೇವಲ ಕೆಲಸವಲ್ಲ, ಬದುಕಿನ ಪಾಠಗಳು. ?ಇದು ಹೆಣ್ಣುಮಕ್ಕಳ ಕೆಲಸ, ಇದು ಗಂಡುಮಕ್ಕಳ ಕೆಲಸ? ಎಂಬ ಭೇದಭಾವವನ್ನು ತೊಡೆದುಹಾಕಿ, ಸಮಾನತೆಯ ಬೀಜವನ್ನು ಬಾಲಮನಸ್ಸಿನಲ್ಲಿ ಬಿತ್ತಬೇಕು.

**ಸ್ವಚ್ಛತೆ ಮತ್ತು ಸೌಂದರ್ಯ:** ಮಕ್ಕಳು ಎದ್ದ ಕೂಡಲೇ ಸ್ನಾನ ಮಾಡುವುದು ಮತ್ತು ನೀಟ್ ಆಗಿ ಬಟ್ಟೆಗಳನ್ನು ಧರಿಸಿಕೊಂಡು ಸ್ವಚ್ಛವಾಗಿ ಇರುವುದು ಅತಿ ಮುಖ್ಯ. ಮನೆಯಲ್ಲೇ ಇರುತ್ತೇವೆ ಎಂದು , ಅಸಡ್ಡೆಯಿಂದ ಮತ್ತು ಅಶುದ್ಧತೆಯಿಂದ ಇರುವುದು ಸೋಮಾರಿತನದ ಲಕ್ಷಣ. ಸ್ನಾನ ಮಾಡಿ ತಯಾರಾಗುವುದು ಅದು ಸೌಂದರ್ಯದ ಪ್ರತೀಕವಲ್ಲ ಮಕ್ಕಳು ತಮ್ಮನ್ನು ತಾವು ಪ್ರೀತಿಸಿಕೊಳ್ಳುವುದು ಮತ್ತು ತಮ್ಮನ್ನು ಪ್ರದರ್ಶಿಸುವ ಉತ್ತಮ ವ್ಯಕ್ತಿತ್ವ. ಅಲ್ಲದೆ ತಮ್ಮ ಬಗ್ಗೆ ಒಂದು ಧನಾತ್ಮಕ ಭಾವನೆಯನ್ನು ಉಂಟುಮಾಡುವುದು.... ಜೀವನ ಪ್ರೀತಿ ಬೆಳಿಯಬೇಕು. ಸೌಂದರ್ಯ ಅನ್ನೋದು ಅಲಂಕಾರ ಅಲ್ಲ ನೀಟಾಗಿ ಬಾಚಿಕೊಂಡಿರುವುದು ಒಳ್ಳೆಯ ಬಟ್ಟೆಗಳನ್ನು ಧರಿಸುವುದು ಇದು ನಮಗೆ ನಾವು ಕೊಡುವ ಗೌರವ.ಸ್ವಚ್ಛವಾಗಿ, ಸೊಗಸಾಗಿ ಇರುವುದು ಕೇವಲ ದೇಹದ ಅಲಂಕಾರವಲ್ಲ; ಅದು ಆತ್ಮಗೌರವದ ಪ್ರತಿಬಿಂಬ. ತಮ್ಮನ್ನು ತಾವು ಗೌರವಿಸುವುದು, ತಮ್ಮ ಅಸ್ತಿತ್ವವನ್ನು ಪ್ರೀತಿಸುವುದು?ಇವು ವ್ಯಕ್ತಿತ್ವದ ಸುಂದರ ಅಡಿಪಾಯಗಳು.

**ಕೇಳುವಿಕೆ ಮತ್ತು ಆಲೈಸುವಿಕೆ:** ಯಾರಾದರೂ ಏನಾದರೂ ವಿಷಯ ಹೇಳಿದಾಗ ಅದನ್ನು ಕೇಳುವುದು, ಕೇವಲ ಕಿವಿಯಿಂದ ಅಲ್ಲ ಹೃದಯದಿಂದ ಕೇಳಬೇಕು. ಇದು ಇನ್ನೊಬ್ಬರನ್ನು ಗೌರವಿಸುವುದು ಮತ್ತು ತಾಳ್ಮೆಯನ್ನು ಹೆಚ್ಚಿಸುವುದು , ವಿಷಯಗಳ ಅವಲೋಕನ ಮಾಡಲು ಒಂದು ಅವಕಾಶವನ್ನು ಕೂಡ ನೀಡುವುದು. ಒಳ್ಳೆಯ ಕೇಳುಗ ಮಾತ್ರ ಒಳ್ಳೆಯ ಮಾತುಗಾರ.

**ಸತ್ಯವನು ಮಾತಾಡುವದು:** ಸದಾಕಾಲ ಸತ್ಯವನು ಮಾತಾಡುವದು ಮತ್ತು ಪ್ರಾಮಾಣಿಕರಾಗಿರುವದು. ಕೆಲವು ಸಾರಿ ಸಂದರ್ಭಗಳು ಅವಘಡವಾಗಿರಬಹುದು, ಪರಿಸ್ಥಿತಿ ಕಠಿಣವಾಗಿದ್ದರೂ ಮಕ್ಕಳನು ಸತ್ಯವಂತರಾಗಿರಲು ಪ್ರೇರೆಪಿಸಬೇಕು. ಕಠಿಣವಾದ ಸ್ಥಿತಿಯಲಿ ಗಟ್ಟಿಯಾಗಿ ನಿಲ್ಲುವದು ಒಂದು ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ದಾರಿ ಆಗುವದು. ಇದು ವಿಶ್ವಾಸ ಮತ್ತು ಧೈರ್ಯ ಬೆಳೆಸುವದು.



**ಗುರಿ ಮುಟ್ಟುವ ಛಲ:** ಹಲವು ಮಕ್ಕಳಲಿ ಈಗ ನಾವು ಕಾಣಬಹುದು, ಭಾವುಕ ಚಂಚಲತೆ. ಕ್ರಿಕೇಟ್ ನೋಡಿದ ತಕ್ಷಣ ಕ್ರಿಕೇಟಿಗನಾಗ ಬೇಕು, ಉಪಗ್ರಹ ಸಿನೇಮಾ ನೋಡಿ ವಿಜ್ಞಾನಿ ಆಗಬೇಕು, ಸಂಗೀತ... ಹೀಗೆ ಹಲವು ಹತ್ತು ಕವಲೊಡೆದ ದಾರಿಗಳಿಂದ ಸರಿಯಾದ ಮಾರ್ಗ ತಿಳಿಯದೇ ಇರುವದು. ಅದಕ್ಕೆ ಹಿಡಿದ ಕೆಲಸ ಕೊನೆಯವರಗೂ ಮಾಡುವ ಛಲ ಮಕ್ಕಳಲಿ ಹುಟ್ಟಿಸ ಬೇಕು. ದಾರಿ ದೂರಾಗಿರಬಹುದು, ಕಾಲು ಕುಂಟಿರಲು ಊರ ನೆನಪೇ ಒಲವು ಮಂಕುತಿಮ್ಮ... ಎಂಬಂತೆ ಅದು ಎಷ್ಟೇ ಕಷ್ಟ ವಾದರೂ ತುದಿ ಮುಟ್ಟುವರಗೆ ಎಷ್ಟೇ ಕಷ್ಟವಾದರೂ ಆ ಕೆಲಸವನ್ನು ಪೂರ್ತಿಗೊಳಿಸಬೇಕೆಂಬ ಅರಿವು ಮೂಡಿಸಬೇಕು. ಸೋಲು ಗೆಲವುಗಳ ಹೊರತಾಗಿ ಸತತ ನಡೆಯುವ ಛಲ ಬೇಕು.

**ಕರುಣೆ ಮತ್ತು ಅಂತಃಕರಣ:** ಯಾವಾಗಲೂ ಮಕ್ಕಳು ಕರುಣೆ ಮತ್ತು ದಯೆಯಿಂದ ನಡೆದುಕೊಳ್ಳುವಂತೆ ಉತ್ಸಾಹಿಸಬೇಕು. ನಮ್ಮನ್ನು ಯಾರು ಗಮನಿಸದೇ ಇದ್ದಾಗಲೂ ಕೂಡ ನಾವು ಕರುಣೆ ಮತ್ತು ದಯೆಯಿಂದ ಇರಬೇಕು. ಒಳ್ಳೆಯ ವ್ಯಕ್ತಿತ್ವ ಯಾರ ಅಂಕೆಯಲ್ಲಿ ಇರದೆ ಅದು ಒಳಗಿನಿಂದ ಹುಟ್ಟಿಬರುವಂತಹ ಗುಣ. ಪ್ರಾಣಿಗಳಲ್ಲಿ, ವಯಸ್ಸಾದವರಲ್ಲಿ, ಕಷ್ಟದವರಲ್ಲಿರುವ ಬಗ್ಗೆ, ಅಸಹಾಯಕರ ಬಗ್ಗೆ ಯಾವಾಗಲೂ ದಯೆಯಿಂದ ನಡೆದುಕೊಳ್ಳಬೇಕು. ಈ ಭಾವವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಬೇಕು. ಯಾರಾದರೂ ನಮ್ಮನ್ನು ಗಮನಿಸಿದಾಗ ಮಾತ್ರ ನಾವು ಸಚ್ಚಾರಿತರಾಗಿರಬಾರದು , ಸಚ್ಚಾರಿತ್ರ ಎಂಬುದು ಒಳಗೂ ಹೊರಗೂ ಕಾಣುವ ಪಾರದರ್ಶಕ ಕನ್ನಡಿಯಂತೆ ಒಳಗಿಂದ ಹೊರಗೆ ಮೊಳೆಯುವ ಬೀಜದಂತೆ ಹುಟ್ಟಿನಲ್ಲೇ ಅದನ್ನು ಬೆಳಸಿಕೊಂಡು ಪೋಷಿಸಬೇಕು.

**ಸಣ್ಣ ಸಣ್ಣ ವಿಷಯಗಳಲ್ಲಿ ಸಂತೋಷ ಕಾಣುವುದು:** ಸಣ್ಣ ಸಣ್ಣ ವಿಷಯಗಳನ್ನು ಕೂಡ ಸಂಭ್ರಮಿಸುವುದನ್ನು ಮಕ್ಕಳಿಗೆ ಹೇಳಿಕೊಡಬೇಕು. ಸಂತೋಷ ಮತ್ತು ಯಶಸ್ಸು ಎರಡು ವಿಭಿನ್ನವಾದ ವಿಷಯಗಳು. ಸಂತೋಷವನ್ನು ಇರುವದರಲ್ಲಿ ನಾವೇ ಹುಡುಕಿ ಕಂಡು ಕಾಣಿ ಸಂಭ್ರಮಿಸಬೇಕು ಯಶಸ್ಸು ನಾವು ಕೊಡುವ ಶ್ರಮಕ್ಕೆ ಸಿಗುವ ಬೆಲೆ! ಹೀಗಾಗಿ ಯಶಸ್ವಿಯಾದವನು ಮಾತ್ರ ಸಂತೋಷವಾಗಿರುತ್ತಾನೆ ಎಂಬ ಪರಿಕಲ್ಪನೆ ಇರಲಾರದೆ ಸಹಜವಾಗಿ ಸಂತೋಷವಾಗಿರುವುದು ನಮ್ಮ ಹಕ್ಕು ಎಂಬಂತೆ ಸದಾ ಪ್ರಸನ್ನವಾಗಿರಬೇಕು.

**ಮಾತನಾಡುವ ಕಲೆ:** ಮಾತನಾಡುವುದು ಒಂದು ಕಲೆ , ಹೇಳುವುದನ್ನು ನಿಧಾನವಾಗಿಯೂ ನಿಖರವಾಗಿಯೂ ನೇರವಾಗಿಯೂ ಹೇಳಬೇಕು. ಹೇಳುವಾಗ ದ್ವಂದಭಾವ ಬರದಂತೆ ಇನ್ನೊಬ್ಬರ ಮನಸಿಗೆ ನೋವಾಗದಂತೆ ವಿಷಯವನ್ನು ಹೇಳಬೇಕು. ಈ ರೀತಿ ತಮ್ಮ ಬೇಕು ಬೇಡ ಅಗತ್ಯಗಳನ್ನು ವಿನಯದಿಂದ ಹೇಳುವ ಕಲೆಯನ್ನು ಮಕ್ಕಳು ಬೆಳೆಸಿಕೊಳ್ಳಬೇಕು.

**ಉತ್ತಮ ಸ್ನೇಹಿತರು:** ಇಂದಿನ ಕಾಲದಲ್ಲಿ ಮಕ್ಕಳು ಹೆಚ್ಚು ಮೊಬೈಲ್ ಮತ್ತು ಟಿವಿ ಬಳಕೆಗೆ ಕಾರಣ ಅವರ ಏಕಾಂಗಿತ್ವ! ಆದ್ದರಿಂದ ಒಳ್ಳೆಯ ಸ್ನೇಹಿತರೊಡನೆ ಒಡನಾಟ ಉತ್ತಮ ವಿಚಾರಗಳ ವಿನಿಮಯ ಮತ್ತು ಸದಾ ಚಟುವಟಿಕೆಯಿಂದ ಇರುವ ವ್ಯಕ್ತಿತ್ವವನ್ನು ಹೊಂದಿದ ಮಕ್ಕಳು ಸಹಜವಾಗಿ ಮೊಬೈಲಿಂದ ದೂರವಾಗುತ್ತಾರೆ.

ಆದರೆ ಇದನ್ನು ಕೇವಲ ಮಕ್ಕಳಿಂದ ಬಯಸುವುದಲ್ಲ ಹಿರಿಯರು ಕೂಡ ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ.

**ಕ್ಷಮೆ ಕೇಳಲು ಹಿಂಜರಿಯಬಾರದು:** ತಪ್ಪು ಮಾಡಿದಾಗ ಕ್ಷಮೆ ಕೇಳಲು ಹಿಂಜರಿಯಬಾರದು. ಸಹಾಯ ಕೇಳುವಾಗ ದಯವಿಟ್ಟು ಎಂಬ ಪದ, ಕೆಲಸವಾದ ಮೇಲೆ ಧನ್ಯವಾದ ಹೇಳುವ ನಯವಂತಿಕೆ ಇರಲಿ.

**ಮಕ್ಕಳಿಗೆ ಸಮಯ ಕೊಡಿ:** ನೀವು ಯಾರಿಗಾದರೂ ಅಮೂಲ್ಯವಾದ ಉಡುಗೊರೆಯನ್ನು ಕೊಡ ಬಯಸಿದರೆ ಅದು ನಿಮ್ಮ ಸಮಯ!! ಅದಕ್ಕಿಂತ ಅಮೂಲ್ಯವಾದದ್ದು ಬೇರೊಂದು ಇಲ್ಲ. ತುಂಬಾ ಬಿಜಿಯಾಗಿರುವ ಪಾಲಕರು ಮಕ್ಕಳನ್ನು ಕೇವಲ ಶಾಲೆ ಸಂಬಂಧಿತ ಅಂಕಗಳಾಗಲಿ ಅವರ ಅಗತ್ಯಗಳಾಗಲಿ ಇಂತಹ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತಾರೆ,ಆದರೆ ಕೆಲಸದ ಸಮಯದಂತೆ ಒಂದಿಷ್ಟು ನಿರ್ದಿಷ್ಟವಾದ ನಿಗದಿತ ಸಮಯವನ್ನು ಮಕ್ಕಳಿಗೆ ಕೊಡಿ. ಆತ್ಮೀಯವಾಗಿ ಅವರೊಡನೆ ಒಡನಾಡಿದಾಗ ಅವರ ಮನಸ್ಸಿನ ಒಳತುಡಿತಗಳ ಅರ್ಥವಾಗುತ್ತವೆ.

**ಮಕ್ಕಳ ಮುಂದೆ ಹಿರಿಯರ ನಡುವಳಿಕೆ:** ಮಕ್ಕಳ ಮುಂದೆ ಸದಾಕಾಲ ಮೊಬೈಲ ನೋಡುವದು, ಸಿಡಿಮಿಡಿ ಮಾಡುವದು, ಜಗಳವಾಡುವದು, ಅವಾಚ್ಯ ಶಬ್ದಗಳನು ಬೈಯುವದು ಇಂತಹದನು ಹಿರಿಯರು ಮಾಡಿದರೆ ಮಕ್ಕಳು ಅದರ ಪ್ರತಿಫಲನವಾಗಿ ಅದನೇ ಮಾಡುವರು. ಗಂಡ ಹೆಂಡತಿ ಪರಸ್ಪರ ಗೌರವಿಸುವದು, ಸಜ್ಜನಿಕೆ ಮತ್ತು ಗೌರವದ ನಡತೆಯನು ಹಿರಿಯರು ಸ್ವತಃ ತಾವು ಬೆಳಸಿಕೊಂಡರೆ ಮಕ್ಕಳಿಗೆ ಮಾದರಿ ಆಗುವದು ವಿನಃ ನಾ ಹೇಳುವಂತೆ ಮಾಡು ನಾ ಮಾಡುವಂತೆ ಮಾಡಬೇಡ ಎಂದರೆ ದೋಸೆ ಮಾಡಿ ಹೋಳಿಗೆ ಎಂದು ಬಡಿಸಿದಂತೆ.

**ಒತ್ತಾಯದ ಅನುಗ್ರಹ:** ದೇವರುಕೂಡ ಎಷ್ಟೇ ಒಳ್ಳೆಯವನಾಗಿದ್ದರೂ ಸಹ ಅವನ ಮನ ಒಲಿಯದಿದ್ದರೆ ಅನುಗ್ರಹ ಸಾಧ್ಯವಿಲ್ಲ. ಹಾಗೇ ಸದಾ ಉಪದೇಶ ಮಾರ್ಗವನು ಬಿಟ್ಟು ಮಕ್ಕಳೊಂದಿಗೆ ಸಹಕರಿಸಿ ಸ್ನೇಹ ಬೆಳಸಿ ವಿಷಯ ಮನನಮಾಡಿಸಿ. ಕೇವಲ ಮಾತಿನಿಂದ ಅಲ್ಲ ಕೆಲವು ಸಾರಿ ಮಕ್ಕಳನು ಉತ್ತಮ ಪ್ರವಾಸಕೆ ಕೊಂಡೊಯ್ದು ಅಲ್ಲಿಯ ಪ್ರಗತಿ ನೋಡಿ ಮಕ್ಕಳಿಗೆ ಮಾದರಿ ಆಗಲಿ. ದುಬೈನಂತಹ ಮರಭೂಮಿಯಲಿ ಕೂಡ ಹೂವರಳಿ ಹಣ್ಣಾಗಬಹುದು ಎಂದರೆ ಅದು ಅವರ ಕಾರ್ಯ ಕ್ಷಮತೆ ಮತ್ತು ದಕ್ಷತೆ. ಅದೇ ರೀತಿ ಬಡತನ, ಗ್ರಾಮೀಣ ಜೀವನ ಇವುಗಳನ್ನು ಅನುಭವಿಸಿದರೆ ಮಾತ್ರ ಮಕ್ಕಳು ಇರುವ ಸವಲತ್ತು ಬಗ್ಗೆ ಗೌರವ ಹೊಂದುವರು.

**ಗೌರವ ನೀಡಿ:** ಮಕ್ಕಳನು ಸದಾ ಬಯ್ಯುವದು... ಅವರ ತಪ್ಪುಗಳನು ಗುರುತಿಸಿ ಹೀಯಾಳಿಸುವದು... ಇವೆಲ್ಲ ಸಾಮಾನ್ಯ!!

ಆದರೆ ಇದರಿಂದ ಮಕ್ಕಳ ವ್ಯಕ್ತಿತ್ವ ಕುಂದುವದು... ಮಕ್ಕಳಿಗೆ ಗೌರವ ನೀಡಿ, ಅವರು ಹೇಳವದನು ಆಲೈಸಿ ಆಗ ಅವರಿಗೂ ತಮ್ಮ ಬಗ್ಗೆ ವಿಶ್ವಾಸ ಮತ್ತು ಮಾಡುವ ಕೆಲಸದ ಬಗ್ಗೆ ಜವಾಬ್ದಾರಿ ಬೆಳೆಯುವದು. ಅವರು ಏನೇ ಹೇಳಲು ಬಂದರೆ ಅದನ್ನು ಗಮನದಿಂದ ಕೇಳಿ,ಬಾಂಧವ್ಯಗಳಿಗೆ ವಿಶ್ವಾಸ ಬೆಳೆಯುವದು.

ಅದು ಲಘುವಾದ ವಿಷಯವಾದರೂ ಗಮನವಿಟ್ಟು ಕೇಳುವದು ಅವರಿಗೆ ನೀಡುವ ಮಹತ್ವ ಮತ್ತು ಪ್ರೀತಿಯನ್ನು ಸಾರುತ್ತದೆ. ಮಕ್ಕಳು ಕೂಡ ಕೇಳುವಿಕೆಯನ್ನು ಕಲಿಯುತ್ತಾರೆ.

ಹಲವಾರು ಕುಟುಂಬಗಳಲ್ಲಿ ಮಕ್ಕಳು ದೊಡ್ಡವರಾದರೂ ತಂದೆಯೊಡನೆ ಮನಸ್ತಾಪ ಜಗಳಗಳು ಇರುತ್ತವೆ . ಹಾಗಂತ ಪ್ರೀತಿ ಇಲ್ಲದೆ ಇರುವದಿಲ್ಲ!! ಆದ್ದರಿಂದ ಮಕ್ಕಳಿಗೆ ಹೀಗೆ ಆಗಬೇಕು ಎಂದು ಒತ್ತಡ ಹಾಕಿ ಕೊಟ್ಟ ಸೌಲಭ್ಯಗಳನ್ನು ಮಾಡಿದ ಉಪಕಾರ ಎಂಬುವಂತೆ ಎಣಿಸಿ ಅವರೊಂದಿಗೆ ಮಾನಸಿಕ ಸಂಬಂಧವನ್ನು ಕೆಡಿಸಿಕೊಳ್ಳಬಾರದು. ಒಂದೇ ಹೊಲದಲ್ಲಿ ಬಿತ್ತಿದ ಬೀಜಗಳಿಗೆ ಸಮಾನ ನೀರು ಗೊಬ್ಬರ ಸೂರ್ಯನ ಬಿಸಿಲು ಬಿದ್ದರೂ ಫಸಲು ಒಂದೇ ರೀತಿ ಬರುವುದಿಲ್ಲ. ಇನ್ನು ಬೀಜಗಳ ಸ್ಥಿತಿ ಹೀಗಿರುವಾಗ ಮಕ್ಕಳಂತೂ ಮನುಷ್ಯರು. ಇನ್ನೊಬ್ಬರನ್ನು ಹೋಲಿಸಿ , ಅವರ ಪ್ರಗತಿಯನ್ನು ಕಂಡು ಇವರನ್ನು ಹೀಯಾಳಿಸಿ , ಹಿಂದೆ ನಮಗೆ ಬಂದ ಕಷ್ಟವನು ಆದರೂ ಓದಿ ಬೆಳೆದ ರೀತಿಯನ್ನು ವಿವರಿಸಿ ತನ್ನಂತೆ ಅವರಿಲ್ಲ ಎಂದು ಹೀಗಳಿಸುತ್ತಾ ಮಾತನಾಡುವುದರಿಂದ ಅವರ ಆತ್ಮ ಶಕ್ತಿ ಕುಂದುತ್ತದೆ. ವಿಚಿತ್ರ ವಿರೋಧಾಭ್ಯಾಸವು ಬೆಳೆಯುವದು ಅದಕ್ಕಿಂತ ಮಕ್ಕಳನ್ನು ಮಕ್ಕಳಾಗಿ ಕಂಡು ಪ್ರೀತಿಸಬೇಕು,ಕ್ಷಮಿಸಬೇಕು ಮತ್ತೆ ಮುಂದೆ ಹೋಗಲು ಪ್ರೋತ್ಸಾಹಿಸಬೇಕು. ಸದಾಕಾಲ ನೀವು ಸಣ್ಣವರು ನಿಮಗೇನು ಅರ್ಥವಾಗುವುದಿಲ್ಲ ಎಂದು ಒತ್ತಡದ ಆಗ್ರಹಗಳನ್ನು ಆದೇಶಗಳನ್ನು ಹೇರುವುದಕ್ಕಿಂತ ಸನ್ನಿವೇಶಗಳು ಕೂಡ ಅವರ ಭಾವಕ್ಕೆ ತಕ್ಕಂತೆ ಅರ್ಥ ಮಾಡಿಸಲು ಪ್ರಯತ್ನಿಸಬೇಕು.

ಮಕ್ಕಳಮುಂದೆ ಸಂಪತ್ತಿನ ಅಧಿಕಾರದ ಪ್ರದರ್ಶನ ಎಂದಿಗೂ ಸಲ್ಲದು. ಇದು ಅವರನ್ನು ಕೋಪಿಷ್ಟ ಮತ್ತು ದರ್ಪಿಷ್ಟರನ್ನಾಗಿ ಮಾಡುವದು.


**ಓದು:** ಮಕ್ಕಳೊಟ್ಟಿಗೆ ಕುಳಿತು ಕೆಲವು ಉತ್ತಮ ಪುಸ್ತಕಗಳ ಓದು ವಿವರಣೆ ವಿಶ್ಲೇಷಣೆ. ಇದು ಒಳ್ಳೆಯ ಹವ್ಯಾಸಕೆ ನಾಂದಿ ಆಗುವದು. ನಾನು ಮೋಬೈಲ ನೋಡುವೆ ನೀನು ಪುಸ್ತಕ ಓದು ಎಂದರೆ ಮಕ್ಕಳಿಗೆ ಬೇಸರ. ನಾವು ಪುಸ್ತಕ ಹಿಡಿದರೆ ಅವರೂ ಓದಲು ಸಾಧ್ಯ.

ಮಕ್ಕಳು ಮತ್ತು ಪಾಲಕರಲಿ ಮುಖ್ಯವಾಗಿರಬೇಕಾಗಿದ್ದು ಪ್ರೀತಿ ಮತ್ತು ವಿಶ್ವಾಸ. ಸಮಯ ಕಳೆದಂತೆ ಅದು ಹೆಚ್ಚಾಗುತಲೇ ಬರಬೇಕು ವಿನಃ ಕುಂದಬಾರದು.

**The child is father of the man.?**
**William Wordsworth**

# ಸ್ವಭಾವದ ಸ್ವರೂಪ

ಸ್ನೇಹ ಲೋಕ





ಸ್ನೇಹಾ ಆನಂದ್

ವ್ಯಕ್ತಿಯ ಮನಸ್ಸು ಹೇಗಿರುತ್ತದೆಯೋ ಹಾಗೆ ಅವರು ವರ್ತಿಸುತ್ತಾರೆ , ಅದನ್ನೇ ನಾವು ಅವರ ಸ್ವಭಾವ, ಗುಣ ಅಥವಾ ವ್ಯಕ್ತಿತ್ವ ಎಂದು ಹೇಳುವುದು!

ಒಬ್ಬರ ಸ್ವಭಾವದಲ್ಲಿ ಮನಸ್ಸು ತುಂಬಾ ಭಾವುಕವಾಗಿದ್ದರೆ ಅವರ ಮನಸ್ಸು

ಮೃದುವಾಗಿರುತ್ತದೆ, ಎಲ್ಲರ ನೋವಿಗೂ ಸ್ಪಂದಿಸುವ, ಮಿಡಿಯುವ ಹೃದಯ ಅವರದು! ತಮಗೆ ನೋವಾದರೂ ಸರಿ ಇನ್ನೊಬ್ಬರಿಗೆ ನೋವಾದರೂ ಸರಿ ಅವರ ಕಣ್ಣುಗಳು ತಕ್ಷಣ ಒದ್ದೆಯಾಗಿ ಬಿಡುತ್ತವೆ, ಎಲ್ಲರೂ ಚೆನ್ನಾಗಿರಲಿ ಎನ್ನುವ ವ್ಯಕ್ತಿತ್ವದ ವ್ಯಕ್ತಿ ಅವರು!

ಅದೇ ಕಠಿಣ ಸ್ವಭಾವದವರಾಗಿದ್ದರೆ , ಯಾರು ಹೇಗಿದ್ದರೂ ನನಗೇನು ಅದು ಅವರವರ ಹಣೆಬರಹ, ನಾನು ಚೆನ್ನಾಗಿದ್ದರೆ ಅಷ್ಟೇ ಸಾಕು ಎನ್ನುವ ಮನೋಭಾವ! ಇವರು ಯಾರನ್ನಾದರೂ ಮನೆಗೆ ಕರೆಯಬೇಕಾದರೆ ನಿರ್ದಿಷ್ಟ ಕಾರಣವಿರಬೇಕು! ತಮ್ಮ ಮನೆಯ ಸಮಾರಂಭ ಚೆನ್ನಾಗಿ ಆಗಬೇಕು ಅಷ್ಟೇ, ಅದರಂತೆ ತಮ್ಮವರ ಸಮಾರಂಭವೂ ಚೆನ್ನಾಗಿ ಆಗಲಿ ಎನ್ನುವ ಮನೋಭಾವನೆ ಇರುವುದಿಲ್ಲ! ಅಪಹಾಸ್ಯದ ಮಾತುಗಳು, ಅತಿರೇಕದ ಹಾವಭಾವ, ವಿಲಕ್ಷಣ ನಗು ಮುಖದಲ್ಲಿ ಹೊಮ್ಮಿಸುತ್ತಾರೆ! ತಮ್ಮ ಬಗ್ಗೆ ಮಾತ್ರ ಹೆಮ್ಮೆ ಪಡುವ ಇವರು ಬೇರೆಯವರ ಬಗ್ಗೆ ಉಡಾಫೆಯ ಮಾತುಗಳನ್ನಾಡುವ ಸ್ವಭಾವ ಇವರದು!

ಇನ್ನು ಸ್ವಭಾವದಿಂದ ಸ್ಥಿತಪ್ರಜ್ಞತೆಯನ್ನು ಹೊಂದಿದವರು ಯಾರ ನೋವಿಗೂ ಸ್ಪಂದಿಸದೇ, ತಮ್ಮ ಸ್ವಂತ ನೋವನ್ನು ಕೂಡ ಹಣೆಬರಹ ಎಂದುಕೊಂಡ ಮೌನವಾಗಿ ಮುಂದೆ ಸಾಗುತ್ತಾರೆ! ಇವರಿಗೆ ಯಾರ ಮೇಲೂ ದ್ವೇಷ, ಸೇಡಿನ ಮನೋಭಾವನೆ ಇರುವುದಿಲ್ಲ, ಹಾಗಂತ ಪ್ರೀತಿಯೂ ಜಾಸ್ತಿ ಇರುವುದಿಲ್ಲ, ಮೋಹದಲ್ಲಂತೂ ಬೀಳುವುದೇ ಇಲ್ಲ! ನೀರಿನ ಮೇಲಿನ ಕಮಲದಂತೆ ಇವರ ಜೀವನ! ಇದು ಮನೆಯ ಸದಸ್ಯರಿಗೆ ಒಂಥರಾ ಉಸಿರುಗಟ್ಟಿಸ ಬಹುದು!

ಇನ್ನು ಸ್ವಾರ್ಥ ಮನಸ್ಸು ಇದ್ದವರು ಬೇರೆಯವರು ಹಾಳಾಗಿ ಹೋಗಲಿ ನನಗೇನು, ನಾನು ಚೆನ್ನಾಗಿದ್ದರೆ ಸಾಕು ಎಂದು ಕೊಳ್ಳುವ ಅತಿ ಸಣ್ಣತನದ ಮನೋಭಾವದವರು!

ಇವರು ಒಂದು ಸಹಾಯ ಮಾಡಿದರೆ ಅದರಲ್ಲಿ ಒಂದು ಸ್ವಾರ್ಥದ ಉದ್ದೇಶವನ್ನಿಟ್ಟುಕೊಂಡೆ ಮಾಡುತ್ತಾರೆ ಹೊರತು ಹೃದಯಪೂರ್ವಕವಾಗಿ ಸಹಾಯ ನೀಡುವುದಿಲ್ಲ!

ಇನ್ನು ಅತಿ ದಯೆ ಹೊಂದಿದ ಮನಸ್ಸಿನವರು ತಮಗೆ ಎಷ್ಟಾದರೂ ಕಷ್ಟವಾದರೂ ಪರವಾಗಿಲ್ಲ ಬೇರೆಯವರ ಕಷ್ಟಕ್ಕೆ ಜೊತೆಯಾಗಿ ನಿಲ್ಲುವವರು!

ಇಂಥವರು ಅತಿ ವಿರಳವಾಗಿ ಸಿಗುತ್ತಾರೆ, ಆದರೆ ಸಮುದ್ರದ ಮುತ್ತಿನಂತೆ ಅಲ್ಲೊಬ್ಬರು ಇಲ್ಲೊಬ್ಬರು ಇದ್ದೇ ಇರುತ್ತಾರೆ! ಇವರು ಮನೆಯ ಸದಸ್ಯರ ವಿರೋಧ ಕಟ್ಟಿಕೊಂಡರೂ ಪರವಾಗಿಲ್ಲ ಬೇರೆಯವರಿಗೆ ಸಹಾಯ ಮಾಡುವ ಸ್ವಭಾವ!

ಇನ್ನು ದುರಹಂಕಾರದ ಮನಸ್ಸಿನವರು ಎಲ್ಲರ ಮೇಲೆ ದರ್ಪ ತೋರಿಸುತ್ತಾ, ಪ್ರತಿಯೊಬ್ಬರ ಮಾತನ್ನು ಹೀಯಾಳಿಸುತ್ತಾ ತಮ್ಮ ತೀರ್ಮಾನವೇ ಅಂತಿಮ ಎನ್ನುವವರು, ಇವರ ಮನೆಯ ಸದಸ್ಯರ ಆಸೆ ಆಕಾಂಕ್ಷೆಗಳು ನೀರಿನಲ್ಲಿ ಹೋಮ ಮಾಡಿದ ಹಾಗೆ! ಎಲ್ಲರ ಮಾತನ್ನು ಕಡೆಗಣಿಸುವ ಸ್ವಭಾವ, ನಾನೇ ಜ್ಞಾನಿ ಬೇರೆಯವರಿಗೆ ಏನೂ ತಿಳಿಯುವುದಿಲ್ಲ ಎನ್ನುವ ಧೋರಣೆಯ ಮನೋಭಾವ! ಇವರು ಇದ್ದಲ್ಲಿ ನಗು, ಹಾಸ್ಯ ಅಷ್ಟಕಷ್ಟೆ, ಹೊರಗಿನವರ ಜೊತೆಗೆ ನಗುತ್ತಾ ಇರುವ ಇವರು ಮನೆಯವರ ಬಗ್ಗೆ ಮಾತ್ರ ತುಂಬಾ ಕಠಿಣವಾಗಿ ವರ್ತಿಸುತ್ತಾರೆ, ಸಂಸಾರದ ತೀರ್ಮಾನ ಪೂರ್ತಿ ಇವರ ಕೈಯಲ್ಲೇ!

ಇನ್ನೊಂದು ರೀತಿಯ ಮನಸ್ಸಿನವರು, ಅವರಿಗೆ ಯಾವುದೇ ವಿಷಯದಲ್ಲಿ ಆಸಕ್ತಿ ಇರುವುದಿಲ್ಲ, ತಮ್ಮದೇ ಆದ ಲೋಕದಲ್ಲಿ ವಿಹರಿಸುತ್ತಾರೆ, ಹಟ ಇರುವುದಿಲ್ಲ ಆದರೆ ತಾವಾಗಿಯೇ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ, ಯಾರೇ ಯಾವುದೇ ನಿರ್ಧಾರ ತೆಗೆದುಕೊಂಡರೂ ಅವರು ಸಮ್ಮತಿ ನೀಡುತ್ತಾರೆ, ಅಂದರೆ ಯಾವುದೇ ಜವಾಬ್ದಾರಿ ಹೊರಲಾರದ ಸ್ವಭಾವ, ಕೆಲಸ, ಜವಾಬ್ದಾರಿ ನನ್ನ ತನಕ ಬರದಿದ್ದರೆ ಸಾಕು, ಅವರೇನಾದರೂ ಮಾಡಿಕೊಳ್ಳಲಿ ಎನ್ನುವ ಸ್ವಭಾವ, ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ರೀತಿಯ ಆಸಾಮಿ!

ಇನ್ನು ಒಂದು ಮುಖ್ಯ ಮನಸ್ಸಿನ ಬಗ್ಗೆ ಹೇಳಲೇ ಬೇಕು ಇವರು ನೋಡಲು ತುಂಬಾ ಸರಳ ವ್ಯಕ್ತಿ ಅನಿಸುತ್ತಾರೆ, ಆದರೆ ಮನಸ್ಸು ಮಾತ್ರ ತುಂಬಾ ಕಠಿಣ! ತಪ್ಪುಗಳನ್ನು ಖಂಡಿಸುತ್ತಾರೆ ಅವರು ಯಾರೇ ಇರಲಿ ಮಕ್ಕಳಿರಲಿ ಬಂಧು ಬಾಂಧವರಿರಲಿ! ಹೀಗಾಗಿ ಇವರು ಜೀವನದಲ್ಲಿ ಒಂಟಿಯಾಗಿ ನಿಲ್ಲುವ ಸಂಭವ ಜಾಸ್ತಿ! ಇವರ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಂಡವರು ಇದ್ದರೆ ಮಾತ್ರ ಇವರನ್ನು ತಪ್ಪು ತಿಳಿಯುವುದಿಲ್ಲ, ಇಲ್ಲದಿದ್ದರೆ ಇವರು ಒಂಟಿಯೇ ಸರಿ!

ಇನ್ನೊಂದು ವಿಶೇಷ ಸ್ವಭಾವದ ಬಗ್ಗೆ ಹೇಳಲೇ ಬೇಕು,ಇವರದು ಮಾತಿನಲ್ಲಿ ಸಿಹಿ, ಆದರೆ ಮನಸ್ಸು ಮಾತ್ರ ಕಹಿ! ಕಹಿ ನಾಲಿಗೆಗೆ ಸಿಹಿ ಜೇನಿನ ಲೇಪನ ಅಷ್ಟೇ! ನೋಡಲು ನಮ್ಮವರೇ ಅನಿಸುತ್ತಾರೆ, ಆದರೆ ಮನಸ್ಸಿನಿಂದ ನಮ್ಮವರಾಗಿರುವುದು ಇಲ್ಲ! ಈ ವ್ಯಕ್ತಿಯ ಗಾಳಕ್ಕೆ ಬೀಳುವವರು ಒಂದಲ್ಲ ಒಂದು ದಿನ ಇವರ ಸ್ವಭಾವದಿಂದ ಘಾಸಿಗೊಂಡು ಹೊರಗೆ ಬರುತ್ತಾರೆ!

ಇನ್ನೊಂದು ಕೆಟಗರಿ ಜನ ಇದೆ, ಸಹಾಯ ಮಾಡುವಂತೆ ಮಾಡುವುದು ನಂತರ ಪ್ರತಿಯೊಬ್ಬರ ಮುಂದೆ ಹೇಳಿಕೊಂಡು ತಿರುಗುವುದು, ಇವರ ಸಹಾಯವೂ ಬೇಡ ಇವರೂ ಬೇಡ ಎನ್ನುವಷ್ಟು ಬೇಸರ ತರುತ್ತದೆ ಮನಸ್ಸಿಗೆ! ಸಹಾಯ ತೆಗೆದುಕೊಂಡವರನ್ನು ಅವರಿಗೆ ಗೊತ್ತಿಲ್ಲದಂತೆ ಇನ್ನೊಬ್ಬರ ಮುಂದೆ ಆಡಿಕೊಂಡು ನಗುವ ಸ್ವಭಾವ, ಹಣವಂತಿಕೆಯ ದುರಭಿಮಾನ, ನೇರವಾಗಿ ಮಾತನಾಡಿ ಹೇಳುವವರಲ್ಲ, ಆದರೆ ಬೇರೆಯವರ ಮುಂದೆ ಸಹಾಯ ತೆಗೆದುಕೊಂಡವರನ್ನು ಕೀಳಾಗಿ ಮಾಡುತ್ತಾರೆ, ಅದು ಸಹಾಯ ತೆಗೆದುಕೊಂಡವರಿಗೆ ಗೊತ್ತಾಗುವುದೇ ಇಲ್ಲ!

ಹಾಗೆಯೇ ಇನ್ನೊಂದು ಕೆಟಗೆರಿಯ ಜನರು ಜಿಪುಣಾಗ್ರೇಸರು, ದುಡ್ಡಿನ ವಿಷಯ ಬಂದರೆ ಯಾವಾಗಲೂ ಹಿಂದಕ್ಕೆ ಸರಿಯುವ ಸ್ವಭಾವ, ಇವರು ತಮ್ಮ ಜೀವನದಲ್ಲಿ ಒಂದು ರೀತಿಯ ಹಿಡಿತ ಮಾಡಿ,ಮಾಡಿ ಅದನ್ನೇ ಅಭ್ಯಾಸ ಮಾಡಿಕೊಂಡು ಬಿಟ್ಟಿರುತ್ತಾರೆ, ಜೀವನದ ಖುಷಿಯನ್ನು ಅನುಭವಿಸುವ ಸ್ವಭಾವ ಇವರದಲ್ಲ, ಸ್ವಂತದವರಿಗೂ ಅಲ್ಪ ಸ್ವಲ್ಪ ಸಹಾಯ ಮಾಡಲು ಹತ್ತು ಸಲ ವಿಚಾರ ಮಾಡುತ್ತಾರೆ!

ಮತ್ತೊಂದು ಸ್ವಭಾವ ಇದು ಹೆಂಗಸರಲ್ಲಿ ಮಾತ್ರ ಜಾಸ್ತಿ ಕಾಣಸಿಗುತ್ತದೆ, ತನ್ನ ಗಂಡ ಒಳ್ಳೆಯ ಸ್ಥಾನದಲ್ಲಿದ್ದರೆ, ಅಧಿಕಾರದಲ್ಲಿದ್ದರೆ ಗಂಡನಿಗೆ ಇಲ್ಲದ ದುರಹಂಕಾರ ಹೆಂಡತಿಗೆ! ಈ ರೀತಿಯ ಒಂದು ಕನ್ನಡ ಚಿತ್ರ ಇದೆ ನೆನಪಿದೆಯಾ! ಪೋಲಿಸ್ ಹೆಂಡ್ತಿ ಅಂತ.

ಈ ರೀತಿಯ ಸ್ವಭಾವ ಇರುವ ಹೆಣ್ಣು ಎಲ್ಲರನ್ನೂ ಕೀಳಾಗಿ ನೋಡುತ್ತಾ ಉಡಾಫೆಯ ಮಾತನ್ನಾಡುವುದು ಜಾಸ್ತಿ , ಇವರ ಸಹಾಯ ತೆಗೆದುಕೊಂಡರೆ ಮುಗಿಯಿತು ಅವರ ಪ್ರತಿ ಮಾತು, ನಿರ್ಧಾರಕ್ಕೆ ನಾವು ತಲೆ ಬಾಗಿಸಲೇ ಬೇಕು!

ಇನ್ನೊಬ್ಬ ವಿಚಿತ್ರ ಮನಸಿನ ಸ್ವಭಾವದವರು ಇವರು ಯಾರ ಮನಸ್ಸಿಗೂ ನೋವು ಮಾಡುವುದಿಲ್ಲ, ಎಲ್ಲರ ಮಾತಿಗೂ ಹೂಂ ಗುಟ್ಟುತ್ತಾರೆ, ಎದಿರು ಮಾತನಾಡಿ ಯಾರಿಗೂ ಕೆಟ್ಟವರಾಗುವುದಿಲ್ಲ, ಆದರೆ ಮಾಡುವುದು ಮಾತ್ರ ತಮ್ಮ ಮನಸ್ಸಿನಂತೆ, ಇಂಥವರನ್ನು "ಹೂಂನಪ್ಪನ ಭಾವಡಿಯವರು" ಎಂದು ಹೇಳುತ್ತೇವೆ ಉತ್ತರ ಕರ್ನಾಟಕದ ಕಡೆಗೆ!??

ಆದರೆ ಇವರನ್ನು ನಂಬಿ ಯಾವುದೇ ದೊಡ್ಡ ತೀರ್ಮಾನ ತೆಗೆದುಕೊಳ್ಳುವುದು ಕಷ್ಟ ಹಾಗು ಅಪಾಯ!


ಹೀಗೆ ನಾನಾ ರೀತಿಯ ಚಿತ್ರ ವೈಚಿತ್ರ್ಯ ಸ್ವಭಾವದ ಜನರು ನಮ್ಮ ಸುತ್ತ ಮುತ್ತ ಇರುತ್ತಾರೆ! ಅವರಲ್ಲಿರುವ ಗುಣ ನಾವು ಗುರುತಿಸಿ ಅವರೊಂದಿಗೆ ಮುನ್ನಡೆಯಬೇಕು! ನಾನು ನನಗೆ ನೆನಪಾದಷ್ಟು ಸ್ವಭಾವದ ಪರಿಚಯ ಮಾಡಿಸಿದ್ದೇನೆ!

ಆದರೆ ಇನ್ನೂ ಸಂಕೋಚ ಸ್ವಭಾವದವರು, ಬಂಢತನದ ಸ್ವಭಾವದವರು, ಜಿಪುಣರು, ವನ್ ವೇ ಸಹಾಯ ಪಡೆಯುವವರು, ಬೇಕಾಬಿಟ್ಟಿ ಸ್ವಭಾವದವರು, ಯಾರಿಗೂ ಕ್ಯಾರೆ ಅನ್ನದವರು, ಶರ್ಟ್ ಕಾಲರ್ ಝಾಡಿಸುವಂತೆ ಝಾಡಿಸುವವರು, ಗೋಲ್ ಮಾಲ್ ಮಾಡುವವರು, ಸುಳ್ಳಲ್ಲೇ ಜೀವಿಸುವ ಸ್ವಭಾವದವರು, ಹೊಟ್ಟೆಕಿಚ್ಚಿನ ವ್ಯಕ್ತಿತ್ವದವರು, ತಲೆ ಹಿಡಿಯುವಷ್ಟು ಮಾತನಾಡುವವರು, ಸಹನೆಯಾಗದಷ್ಟು ಮೌನಿಗಳು,ಸ್ವಪ್ರತಿಷ್ಠೆಯನ್ನು ಹೇಳಿಕೊಳ್ಳುವವರು!

ಹೇಗೆ ಜಗತ್ತಿನಲ್ಲಿ ಸಾವಿರಾರು ಮುಖಚರ್ಯೆ ಹೊಂದಿದವರು ಇದ್ದರೆಯೋ, ಹಾಗೆಯೇ ಅಷ್ಟೇ ವಿಧದ ಸ್ವಭಾವದವರು ನಮಗೆ ಕಾಣುತ್ತಾರೆ!

ಇಂಥವರ ಮಧ್ಯದಲ್ಲಿ ಹೃದಯವಂತರನ್ನು ಗುರುತಿಸಿ ಗೆಳೆತನ ಬೆಳೆಸಿಕೊಳ್ಳುವುದು ಕಷ್ಟ ಸಾಧ್ಯ! ಆದರೆ ಅವರ ಜೊತೆಗಿರುವ ತುಂಬಾ ವರ್ಷಗಳ ಒಡನಾಟದಿಂದ ಅವರ ಸ್ವಭಾವ ನಮಗೆ ಅರಿವಾಗುತ್ತಾ, ಇದು ನಮಗೆ ಅವರ ಮೇಲ್ಮುಖ, ಒಳಮುಖಗಳ ಪರಿಚಯ ಮಾಡಿಸುತ್ತದೆ!

# "ಸೂರ್ಯನಿಗೆ ಸವಾಲೆಸೆದವರು"



ಸ್ಫೂರ್ತಿ ಸುಧೆ - 11



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಬಾಹ್ಯಾಕಾಶದ ಅನಂತತೆಯಲ್ಲಿ ಉರಿಯುವ ಸೂರ್ಯನ ಶಾಖವನ್ನು ಕಂಡು ಬೆರಗಾಗುವುದು ಸಹಜ. ಆದರೆ,ಅದೇ ಸೂರ್ಯನ ಕಿರಣಗಳನ್ನು ಸೆರೆಹಿಡಿದು, ಅದನ್ನೊಂದು ಶಕ್ತಿಯನ್ನಾಗಿ ಪರಿವರ್ತಿಸಿ ಮಾನವಕುಲದ ಪ್ರಗತಿಗೆ ಬಳಸುವ ಸಾಹಸ ಮಾಡಿದವರು ಬೆಲ್ ಲ್ಯಾಬ್ಸ್‌ನ ವಿಜ್ಞಾನಿಗಳಾದ ಡ್ಯಾರಿಲ್ ಚಾಪಿನ್, ಕ್ಯಾಲ್ವಿನ್ ಫುಲ್ಲರ್ ಮತ್ತು ಜೆರಾಲ್ಡ್ ಪಿಯರ್ಸನ್. ಈ ತ್ರಿಮೂರ್ತಿಗಳ ಸಾಧನೆಯು ಇಂದಿನ ಯುವ ಪೀಳಿಗೆಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ಪಾಠವನ್ನು ಕಲಿಸುವ ಅದ್ಭುತ ಪ್ರೇರಣೆಯಾಗಿದೆ.

1950ರ ದಶಕದಲ್ಲಿ ಈ ವಿಜ್ಞಾನಿಗಳ ತಂಡದ ಮುಂದೆ ಬೆಟ್ಟದಂತಹ ಸವಾಲಿತ್ತು. ಸಾಂಪ್ರದಾಯಿಕ ಇಂಧನಕ್ಕೆ ಪರ್ಯಾಯ ಹುಡುಕುವ ಹಾದಿಯಲ್ಲಿ ಅವರು ನೂರಾರು ಬಾರಿ ವಿಫಲರಾದರು. ಆದರೆ, ಸೋಲನ್ನು ಒಪ್ಪಿಕೊಳ್ಳದ ಈ ಚೇತನಗಳು ಮರಳಿನಲ್ಲಿ ಅಡಗಿದ್ದ ಸಿಲಿಕಾನ್ ಧಾತುವಿನ ಮೌಲ್ಯವನ್ನು ಗುರುತಿಸಿದವು. 1954ರಲ್ಲಿ ಅವರು ವಿಶ್ವದ ಮೊದಲ ಸಿಲಿಕಾನ್ ಸೌರ ಕೋಶವನ್ನು ಅನಾವರಣಗೊಳಿಸಿದಾಗ, ಅದು ಕೇವಲ ಒಂದು ಆವಿಷ್ಕಾರವಾಗಿರಲಿಲ್ಲ; ಬದಲಾಗಿ ಮಾನವನ ಜಾಣ್ಮೆಯು ಪ್ರಕೃತಿಯ ಶಕ್ತಿಗೆ ಎಸೆದ ಸವಾಲಾಗಿತ್ತು.

ಈ ಯಶಸ್ಸಿನ ರಹಸ್ಯವಿರುವುದು ತಂಡದ ಕಾರ್ಯದಲ್ಲಿ. ಒಬ್ಬರ ಭೌತಶಾಸ್ತ್ರದ ಜ್ಞಾನಕ್ಕೆ ಮತ್ತೊಬ್ಬರ ರಸಾಯನಶಾಸ್ತ್ರದ ಕೌಶಲ ಬೆಂಬಲವಾಗಿ ನಿಂತಿತು. ಯುವಜನತೆಗೆ ಇಲ್ಲಿರುವ ಸಂದೇಶವೊಂದೇ ವೈಯಕ್ತಿಕ ಹಿತಾಸಕ್ತಿಗಿಂತ ಸಾಮಾಜಿಕ ಕಲ್ಯಾಣದ ಗುರಿ ದೊಡ್ಡದಿದ್ದಾಗ ಇತಿಹಾಸ ಸೃಷ್ಟಿಯಾಗುತ್ತದೆ. ಇಂದು ನಾವು ಕಾಣುತ್ತಿರುವ ಹಸಿರು ಇಂಧನ ಕ್ರಾಂತಿಯು ಅಂದು ಅವರು ಬಿತ್ತಿದ ದೂರದೃಷ್ಟಿಯ ಬೀಜದ ಫಲವಾಗಿದೆ.

ಯುವ ಸ್ನೇಹಿತರೇ,ಸಂಪನ್ಮೂಲಗಳ ಕೊರತೆ ಅಥವಾ ಸವಾಲುಗಳು ನಿಮ್ಮನ್ನು ಎದೆಗುಂದಿಸಬಾರದು. ಬೆಲ್ ಲ್ಯಾಬ್ಸ್ ವಿಜ್ಞಾನಿಗಳಂತೆ ಅನ್ವೇಷಣಾ ಮನೋಭಾವವನ್ನು ಬೆಳೆಸಿಕೊಳ್ಳಿ. ಸೂರ್ಯನ ಕಿರಣಗಳನ್ನೂ ಪಳಗಿಸಬಲ್ಲ ಮಾನವನ ಬುದ್ಧಿಶಕ್ತಿಗೆ ನಿಮ್ಮ ಕನಸುಗಳನ್ನು ನನಸಾಗಿಸುವುದು ಕಷ್ಟವೇನಲ್ಲ. ನೀವು ಕೈಗೊಳ್ಳುವ ಪ್ರತಿ ನೂತನ ಪ್ರಯತ್ನವೂ ನಾಳೆಯ ಸುಸ್ಥಿರ ಜಗತ್ತಿಗೆ ಅಡಿಪಾಯವಾಗಲಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,